ಅಲ್ಲಮನ ವಚನಗಳಲ್ಲಿ 'ಅರಿವಿ'ನ ಸಂಕಥನ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ
ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪಬಂಧ

ಸಂಶೋಧಕಿ
ಮಲ್ಲಿಕಾ ಎಂ. ಆರ್.

ಮಾರ್ಗದರ್ಶಕರು
ಡಾ. ಜೆ. ಎಸ್. ಸದಾನಂದ

೨೦೦೭-೨೦೦೮

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

725

ಅಲ್ಲಮನ ವಚನಗಳಲ್ಲಿ 'ಅರಿವಿ'ನ ಸಂಕಥನ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ
ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ
ಮಲ್ಲಿಕಾ ಎಂ. ಆರ್.

ಮಾರ್ಗದರ್ಶಕರು
ಡಾ. ಜೆ. ಎಸ್. ಸದಾನಂದ

೨೦೦೭–೨೦೦೮

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಯೋಗ್ಯತಾ ಪತ್ರ

ಮಲ್ಲಿಕಾ ಎಂ. ಆರ್. ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **“ಅಲ್ಲಮನ ವಚನಗಳಲ್ಲಿ ‘ಅರಿವಿ’ನ ಸಂಕಥನ”** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ಅಭಿಪ್ರಾಯ ಸಂಗ್ರಹ, ಬೋಧನೆ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಡಾ. ಜೆ. ಎಸ್. ಸದಾನಂದ
ಸಂಶೋಧನಾ ಮಾರ್ಗದರ್ಶಕರು

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ **"ಅಲ್ಲಮನ ವಚನಗಳಲ್ಲಿ 'ಅರಿವಿ'ನ ಸಂಕಥನ"** ಶೀರ್ಷಿಕೆಯ ಈ ಸಂಪ್ರಬಂಧವು ಈ ಸಂಶೋಧಕಿಯ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ಜೆ.ಎಸ್. ಸದಾನಂದ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಂಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

Mallika M.R.

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಮಂಗಳೂರು

ಮಲ್ಲಿಕಾ ಎಂ.ಆರ್.

ಪರಿವಿಡಿ

ಅಧ್ಯಾಯ: ೧

ಅಧ್ಯಯನದ ಉದ್ದೇಶ, ಸ್ವರೂಪ. ವ್ಯಾಪ್ತಿ

೧.೧ ಅಧ್ಯಯನದ ಉದ್ದೇಶ

೧.೨ ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

೧.೩ ಇದುವರೆಗಿನ ಅಧ್ಯಯನಗಳು

೧.೧ ಅಧ್ಯಯನದ ಉದ್ದೇಶ

ಕನ್ನಡ ಸಾಹಿತ್ಯ ಚರಿತ್ರೆಯ ಮಧ್ಯಕಾಲೀನ ಕಾಲಘಟ್ಟದಲ್ಲಿ, ಹಲವು ಸ್ಥಿತ್ಯಂತರಗಳ ಫಲವಾಗಿ ಹುಟ್ಟಿಕೊಂಡ ಕ್ರಾಂತಿಕಾರಕ, ವೈಚಾರಿಕ ಅಭಿವ್ಯಕ್ತಿಯೇ ವಚನ ಸಾಹಿತ್ಯ. ಇಲ್ಲಿಯವರೆಗೆ ಸಾಹಿತ್ಯ ಪರಂಪರೆಯು ಕಾವ್ಯ ಕಟ್ಟುವ ಕ್ರಿಯೆಯಲ್ಲಿ ತೊಡಗಿದ್ದರೆ, ಕಟ್ಟುವ ಪ್ರಕ್ರಿಯೆಯನ್ನು ಒಡೆದು ಮಾತು, ವಚನಗಳ ರೂಪದಲ್ಲಿ ಬೌದ್ಧಿಕ ಅಭಿವ್ಯಕ್ತಿಯನ್ನು ಮಾಡಿದವರು ವಚನಕಾರರು. ತಮ್ಮ ಬದುಕು-ಭಾವ-ಚಿಂತನೆ, ದರ್ಶನಗಳಲ್ಲಿ ಅನನ್ಯತೆಯ, ಅರ್ಥವಂತಿಕೆಯ ವೈಶಿಷ್ಟ್ಯವನ್ನು ಕಂಡುಕೊಂಡ ವಚನಕಾರರು ಹೊಸ ಚಿಂತನಾಮಾರ್ಗವನ್ನು ರೂಪಿಸಿದ್ದಾರೆ. ಬದುಕಿನ ನಿತ್ಯ ಸತ್ಯಗಳನ್ನು ವಾಚ್ಯವಾಗಿ, ಸೂಚ್ಯವಾಗಿ ಹಿಡಿದಿಡುವ ಇವರ ದಾರ್ಶನಿಕತೆಯು ಅನುಭಾವದ ಸಾಂಗತ್ಯದೊಂದಿಗೆ ವಿಶಿಷ್ಟ ಪರಿಭಾಷೆಗಳಲ್ಲಿ ಒಡಮೂಡಿದೆ. ಈ ಬಗೆಯ ಪರಿಭಾಷೆಗಳು ಮತ್ತೆ ಮತ್ತೆ ಪುನರಾವರ್ತನೆಗೊಳ್ಳುತ್ತಾ, ನಿರ್ದಿಷ್ಟ ಅರ್ಥವಂತಿಕೆಯ ಹಲವು ಆಯಾಮಗಳನ್ನು ಮೈಗೂಡಿಸಿಕೊಳ್ಳುತ್ತಾ ಪರಿಕಲ್ಪನೆಗಳಾಗಿ ಬೆಳೆದು ಬಂದಿವೆ. ಇಂತಹ ಪರಿಕಲ್ಪನೆಗಳಲ್ಲಿ 'ಅರಿವಿನ' ಕುರಿತ ಚಿಂತನೆಯು ಪ್ರಧಾನವಾದುದು. ಈ 'ಅರಿವಿನ' ಪರಿಕಲ್ಪನೆಯ ಕುರಿತ ಸಮರ್ಪಕ ವ್ಯಾಖ್ಯಾನವನ್ನು ಮಾಡುವುದು ಪ್ರಸ್ತುತ ಅಧ್ಯಯನದ ಮೂಲ ಉದ್ದೇಶಗಳಲ್ಲಿ ಒಂದು.

ನಿರ್ದಿಷ್ಟವಾಗಿ ಅಲ್ಲಮ ಪ್ರಭುವಿನ ವಚನಗಳಲ್ಲಿ 'ಅರಿವು' ಎಂಬ ಪದ ಹಲವು ಬಾರಿ ಪುನರಾವರ್ತನೆಯಾಗುತ್ತದೆ. ಆದರೆ ಈ ಪರಿಭಾಷೆ ಅಲ್ಲಮನಲ್ಲಿ ರೂಢಿಗತವಾದ, ನಿಘಂಟುವಿನಲ್ಲಿ ದೊರೆಯುವ ಸಾಮಾನ್ಯಾರ್ಥಕ್ಕೆ ಕಟ್ಟುಬೀಳದೆ ವಿಶಿಷ್ಟಾರ್ಥದಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ಅಲ್ಲದೇ ಒಂದು ವಿಶಿಷ್ಟ ಅರ್ಥಪರಂಪರೆಯನ್ನೇ ಬಿಟ್ಟುಕೊಡುತ್ತಾ ಹೋಗುವುದು ಅನುಭವಕ್ಕೆ ಬರುತ್ತದೆ. ಹಾಗಾದರೆ ಅಲ್ಲಮನ ದೃಷ್ಟಿಯಲ್ಲಿ ಅರಿವು ಎಂದರೇನು? ಜ್ಞಾನ, ತಿಳುವಳಿಕೆ ಎಂಬ ಅರ್ಥಕ್ಕೆ ಸೀಮಿತವೇ? ಅನುಭಾವವೇ? ಅರಿವಿನ ಮೂಲಕ ಕೊಡುವ ಅರ್ಥ ಪರಂಪರೆಯ ಸಾಧ್ಯತೆಗಳೇನು? ಇದರ ವ್ಯಾಪ್ತಿ-ವಿಸ್ತಾರಗಳೆಷ್ಟು? ಇದರ ಹಿಂದಿನ ಆಶಯ-ಧೋರಣೆಗಳೇನು? ಎಂಬುದರ ಬಗ್ಗೆ ನಿರ್ಧಾರಿತವಾದ ಉತ್ತರವನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಅಲ್ಲಮನ ವಚನಗಳಲ್ಲಿ 'ಅರಿವಿನ ಸಂಕಥನ' ನಡೆಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಅಲ್ಲಮನ ವಚನಗಳ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆಯಾದರೂ, ಪರಿಕಲ್ಪನಾಧಾರಿತವಾದ ಅಧ್ಯಯನಗಳು ಅಷ್ಟಾಗಿ ನಡೆದಿಲ್ಲ. ವಚನಗಳನ್ನು ಓದಿಕೊಳ್ಳುವ ಸಂದರ್ಭದಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸಿಕೊಳ್ಳಲು ನಿರ್ದಿಷ್ಟ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವ

ಅನಿವಾರ್ಯತೆ ಇದೆ. ಆದ್ದರಿಂದ ಅಲ್ಲಮನ ವಚನಗಳಲ್ಲಿ ಬರುವ ಅರಿವಿನ ಪರಿಕಲ್ಪನೆಯನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ. ಈ ನೆಲೆಯ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ.

ಅರಿವು ಎಂದರೇನು? ಅರಿವನ್ನು ವಿಶಿಷ್ಟಾರ್ಥದಲ್ಲಿ ಪ್ರಯೋಗಿಸಿದ ಅಲ್ಲಮನ ಚಿಂತನೆಯ ತಾತ್ತ್ವಿಕ ಹಿನ್ನೆಲೆ ಯಾವುದು? ಸಮಕಾಲೀನ ವಚನಕಾರರಲ್ಲಿ 'ಅರಿವು' ಹೇಗೆ ಬಳಕೆಯಾಗಿದೆ? ಭಾರತೀಯ ಹಾಗೂ ದೇಸೀ ಚಿಂತನಾಕ್ರಮಗಳಲ್ಲಿ ಅರಿವಿನ ಕುರಿತ ವ್ಯಾಖ್ಯಾನಗಳೇನು? ಆಧುನಿಕ ಚಿಂತಕರು ಅರಿವನ್ನು ವ್ಯಾಖ್ಯಾನಿಸುವ ಬಗೆ ಯಾವುದು? ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಅಲ್ಲಮನ ವಚನಗಳು ರಚನೆಯಾದ ಸಂದರ್ಭ ಮತ್ತು ವರ್ತಮಾನದಲ್ಲಿ ವಚನಗಳನ್ನು ಓದಿ ಅರ್ಥೈಸಿಕೊಳ್ಳುವ ಸನ್ನಿವೇಶದಲ್ಲಿ ಎದುರಾಗುವ ಈ ಎಲ್ಲಾ ಪ್ರಶ್ನೆಗಳಿಗೆ ಖಚಿತ ಉತ್ತರಗಳನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶ.

ಹನ್ನೆರಡನೆಯ ಶತಮಾನದ ಒಟ್ಟು ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಬದುಕಿನ ಹಿನ್ನೆಲೆಯಲ್ಲಿ ಪ್ರಾತಿನಿಧಿಕವಾಗಿ ಬಸವಣ್ಣ, ಅಕ್ಕಮಹಾದೇವಿ ಮೊದಲಾದ ವಚನಕಾರರ ಚಿಂತನೆಗಳೊಂದಿಗೆ ಅಲ್ಲಮನ ವಚನಗಳಲ್ಲಿ ಅರಿವಿನ ಸಂಕಥನವನ್ನು ನಡೆಸಲಾಗುತ್ತದೆ.

೧.೨ ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಬೌದ್ಧಿಕ ಹಾಗೂ ಅನುಭಾವದ ನೆಲೆಯ ವಚನಗಳನ್ನು ಕೊಟ್ಟಿರುವ ಅಲ್ಲಮನ ಅಭಿವ್ಯಕ್ತಿಯಲ್ಲಿ 'ಅರಿವು' ಮತ್ತೆ ಮತ್ತೆ ಜಿಜ್ಞಾಸೆಗೆ ನಿರ್ವಚನಕ್ಕೆ ಒಳಗಾಗುತ್ತದೆ. ಪ್ರಸ್ತುತ ಅಧ್ಯಯನದ ಪ್ರಧಾನ ಉದ್ದೇಶವೆ ಅರಿವಿನ ಸಂಕಥನವನ್ನು ನಡೆಸುವುದಾಗಿರುವುದರಿಂದ ಎರಡನೆಯ ಅಧ್ಯಾಯನದಲ್ಲಿ ಅರಿವಿನ ಪರಿಕಲ್ಪನೆಯ ಭಿನ್ನ ವ್ಯಾಖ್ಯಾನಗಳನ್ನು ವಿಶ್ಲೇಷಿಸಲಾಗುತ್ತದೆ. ಇಲ್ಲಿ ಎರಡು ಉಪ-ಅಧ್ಯಾಯಗಳಿದ್ದು ಮೊದಲಿಗೆ ಅರಿವಿನ ಚಿಂತನೆಯ ಕುರಿತು ವಿಶಾಲ ವ್ಯಾಪ್ತಿಯಲ್ಲಿ, ಜಗತ್ತಿನ ಅರಿವಿಕೆಯ ಭಾಗವಾಗಿ, ಬೌದ್ಧಿಕತೆಯ ಅಭಿವ್ಯಕ್ತಿಯಾಗಿ ರೂಪುಗೊಂಡ ಅರಿವಿನ ಚಿಂತನೆಯನ್ನು ಮಾಡಲಾಗುತ್ತದೆ. ಎರಡನೆಯ ಉಪ-ಅಧ್ಯಾಯದಲ್ಲಿ ಭಾರತೀಯ ಪರಂಪರೆಯಲ್ಲಿ, ತತ್ತ್ವಶಾಸ್ತ್ರದ ದರ್ಶನದ ಹಿನ್ನೆಲೆಯಲ್ಲಿ ಬಂದಿರುವ ಅರಿವಿನ ಚಿಂತನೆಯನ್ನು ವಿಶ್ಲೇಷಿಸಲಾಗುತ್ತದೆ. ಈ ಮೂಲಕ ಅರಿವಿನ ಪರಿಕಲ್ಪನೆಯನ್ನು ವಿವರಿಸಿಕೊಳ್ಳಲಾಗುತ್ತದೆ.

ಮುಂದಿನ ಅಧ್ಯಾಯದಲ್ಲಿ 'ಅರಿವು – ಜ್ಞಾನ' –ಚಿಂತನೆಯ ನೆಲೆಗಳು ಎಂಬುದನ್ನು ಶೀರ್ಷಿಕೆಯಾಗಿಸಿ, ಎರಡು ಉಪ ಅಧ್ಯಾಯಗಳನ್ನು ಮಾಡಿಕೊಳ್ಳಲಾಗುತ್ತದೆ. ಮೊದಲಿಗೆ 'ಅರಿವು- ಜ್ಞಾನ' ಪರಿಕಲ್ಪನೆಗಳ ನಡುವಿನ ಸಾಮ್ಯ ಮತ್ತು ವೈಷಮ್ಯದ ನೆಲೆಗಳನ್ನು ಶೋಧಿಸಲಾಗುತ್ತದೆ. ಕೆಲವೊಮ್ಮೆ ಪರಸ್ಪರ ಸಂವಾದಿಯಾಗುವ ಈ ಎರಡು ಪರಿಕಲ್ಪನೆಗಳನ್ನು ಭಿನ್ನ ಅರ್ಥದಲ್ಲಿ ಬಳಸಿರುವುದರ ಹಿಂದಿನ

ಆಶಯವನ್ನು ನಿರ್ವಚಿಸಲಾಗುತ್ತದೆ. ಈ ಸಂದರ್ಭದಲ್ಲಿ 'ಅರಿವು-ಜ್ಞಾನ' ಗಳನ್ನು ಸಂವಾದಿ ಹಾಗೂ ವೈರುಧ್ಯದ ನೆಲೆಯಲ್ಲಿ ಬಳಸಿರುವ ಕೆಲವು ವ್ಯಾಖ್ಯಾನಗಳನ್ನು ವಿಶ್ಲೇಷಣೆ ಮಾಡಲಾಗುತ್ತದೆ. ಮುಂದಿನ ಉಪ ಅಧ್ಯಾಯದಲ್ಲಿ ಪ್ರಮುಖ ವಚನಕಾರರು ಅರಿವಿನ ಸ್ವರೂಪವನ್ನು ಕುರಿತು ಚಿಂತಿಸಿರುವ ಪರಿಯನ್ನು ವಿಶ್ಲೇಷಿಸಲಾಗುತ್ತದೆ. ಆ ಮೂಲಕ ವಚನಕಾರರು ಅರಿವಿನ ಸ್ವರೂಪದ ಕುರಿತು ವ್ಯಾಖ್ಯಾನಗಳನ್ನು ಇದುವರೆಗೂ ಅರ್ಥೈಸಿಕೊಂಡಿರುವುದಕ್ಕಿಂತ ಬೇರೆಯದೇ ಆದ ನೆಲೆಯಲ್ಲಿ ಪರಿಭಾವಿಸಿಕೊಳ್ಳಲು ಸಾಧ್ಯವಿದೆ. ಇಲ್ಲಿ ಪ್ರಾತಿನಿಧಿಕವಾಗಿ ವಚನಕಾರರ ವಚನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಅಲ್ಲಮನ ಬದುಕು ಚಿಂತನೆಯ ಕುರಿತ ವಿವರಗಳಿವೆ. ಇಲ್ಲಿ ಅಲ್ಲಮನ ಜೀವನದ ಕುರಿತು ದೊರೆಯುವ ಮಾಹಿತಿಗಳ ಹಿನ್ನೆಲೆಯಲ್ಲಿ ಆತನ ವ್ಯಕ್ತಿತ್ವ ಮತ್ತು ಸಾಧನೆಯ ಹಂತಗಳನ್ನು ಗುರುತಿಸಲಾಗುತ್ತದೆ. ಶಿವಸ್ವರೂಪಿಯೆಂದೇ ಗುರುತಿಸಲ್ಪಡುವ ಅಲ್ಲಮನ ಅನುಭಾವ ಮಾರ್ಗದ ಸಾಧನೆಯನ್ನು ವಿವೇಚಿಸಲಾಗಿದೆ. ಅಲ್ಲಮನ ಅರಿವಿನ ವಿವೇಚನೆಗೆ ಪೂರಕವಾಗಿ ಆತನ ವ್ಯಕ್ತಿತ್ವ ಮತ್ತು ಸಾಧನೆಯ ವಿವರಗಳು ಬಂದಿವೆ. ಉಪ-ಅಧ್ಯಾಯದಲ್ಲಿ ಅನುಭಾವಿ ಅಲ್ಲಮನ ಸಂಕೀರ್ಣ ನಿಲುವನ್ನು ಪ್ರತಿಬಿಂಬಿಸುವ ಬೆಡಗಿನ ವಚನಗಳನ್ನು ಅವುಗಳ ಸ್ವರೂಪ ಮಹತ್ವಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ನೇರವಾಗಿ 'ಅಲ್ಲಮನಲ್ಲಿ ಅರಿವಿನ ಸಂಕಥನ' ಎಂಬ ಶೀರ್ಷಿಕೆಯಡಿಯಲ್ಲಿ ಮೂರು ಉಪಶೀರ್ಷಿಕೆಗಳನ್ನಿಟ್ಟು ಅಧ್ಯಯನ ಮಾಡಲಾಗುತ್ತದೆ. ಇಲ್ಲಿ ನಿರ್ದಿಷ್ಟವಾಗಿ ಭೌತಿಕ ಹಾಗೂ ಬೌದ್ಧಿಕ ದರ್ಶನದಲ್ಲಿ ಅಲ್ಲಮ ಕಂಡುಕೊಂಡ ಅರಿವಿನ ಪ್ರಜ್ಞೆ ಧೋರಣೆಗಳನ್ನು ವಚನಗಳ ಅಧ್ಯಯನದೊಂದಿಗೆ ನಿರ್ವಚಿಸಿಕೊಳ್ಳಲಾಗುತ್ತದೆ. ಅಂದರೆ 'ಅರಿವಿನ' ಶೋಧ ಇಲ್ಲಿ ಕೇಂದ್ರವಾಗುತ್ತದೆ. ಅಲ್ಲಮನ ವಚನ ಚಂದ್ರಿಕೆಯ ಆಯ್ದ ವಚನಗಳನ್ನು ವಿವರಿಸಿಕೊಳ್ಳುತ್ತಾ ಅರಿವಿನ ಕುರಿತ ಅಲ್ಲಮನ ದೃಷ್ಟಿಕೋನವನ್ನು ವಿವರಿಸಲಾಗುತ್ತದೆ. ಮುಂದೆ ಅಲ್ಲಮನಲ್ಲಿ ಬರುವ 'ಜ್ಞಾನ' ಸಂಬಂಧಿ ವಚನಗಳನ್ನು ವಿವೇಚನೆ ಮಾಡುತ್ತಾ, ಜ್ಞಾನ ಮತ್ತು ಅರಿವುಗಳ ಪರಿಕಲ್ಪನೆಗಳ ನಡುವಿನ ಸಾಮ್ಯ ಹಾಗೂ ವೈಷಮ್ಯದ ನೆಲೆಗಳನ್ನು ತಾತ್ತ್ವಿಕ ಚರ್ಚೆಗೆ ಒಳಪಡಿಸಲಾಗುತ್ತದೆ. ಅನುಭಾವ ಆಧ್ಯಾತ್ಮಿಕ ಚಿಂತನೆಯ ನೆಲೆಗಳನ್ನು ಅರಿವಿನೊಂದಿಗೆ ಮುಖಾಮುಖಿಯಾಗಿಸಿ, ಅನುಸಂಧಾನ, ಮಾಡಲಾಗುತ್ತದೆ. ಒಟ್ಟಿನಲ್ಲಿ ಈ ಅಧ್ಯಾಯದ ವ್ಯಾಪ್ತಿಯಲ್ಲಿ ಜ್ಞಾನ-ಅರಿವು ಅನುಭಾವಗಳ ಅಂತರ್‌ಸಂಬಂಧವನ್ನು ತಾತ್ತ್ವಿಕವಾಗಿ ಚರ್ಚಿಸುವುದು ಮುಖ್ಯವಾಗುತ್ತದೆ. ಆ ಮೂಲಕ 'ಅರಿವೇ ಗುರು' ಎಂಬ ಶ್ರದ್ಧೆಯನ್ನು ಹೊಂದಿದ ಅಲ್ಲಮನಲ್ಲಿ ಕಾಣಿಸಿಕೊಳ್ಳುವ ಅರಿವಿನ ನಿಜದ ನೆಲೆಯ ಆಕೃತಿ—ಆಶಯಗಳನ್ನು ಶೋಧಿಸಲಾಗುತ್ತದೆ. ಇದು ಈ ಅಧ್ಯಾಯದ ಒಟ್ಟು ಸ್ವರೂಪ ಮತ್ತು ವ್ಯಾಪ್ತಿ.

ಆರನೆಯ ಅಧ್ಯಾಯದಲ್ಲಿ 'ಅರಿವಿನ' ಪರಿಕಲ್ಪನೆ ಆಧುನಿಕ ಸಂದರ್ಭದಲ್ಲಿ ಪಡೆದ ಸ್ಥಿತ್ಯಂತರಗಳು ಮತ್ತು ವ್ಯಾಖ್ಯಾನಗಳನ್ನು ವಿಶ್ಲೇಷಣೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಅಲ್ಲಮನ ವಚನಗಳ ಹಾಗೂ ಅರಿವಿನ ಕುರಿತು ಬಂದಿರುವ ದ.ರಾ.ಬೇಂದ್ರೆ, ಬಸವರಾಜ ಕಲ್ಗುಡಿ, ಓ.ಎಲ್. ನಾಗಭೂಷಣ ಸ್ವಾಮಿ, ಡಿ.ಆರ್. ನಾಗರಾಜ್ ಹಾಗೂ ಮಲ್ಲೇಪುರಂ, ಜಿ. ವೆಂಕಟೇಶ ಅವರ ವಿಚಾರಧಾರೆಗಳನ್ನು, ಚಿಂತನಾಕ್ರಮಗಳನ್ನು ಪ್ರಧಾನವಾಗಿ ಇಟ್ಟುಕೊಳ್ಳಲಾಗುತ್ತದೆ. ಅಲ್ಲಮನ ವಚನಗಳಲ್ಲಿ ಅರಿವಿನ ಪರಿಕಲ್ಪನೆ ಮತ್ತು ಆಧುನಿಕ ಚಿಂತನೆಗಳನ್ನು ಗಮನಿಸುವ ಸಂದರ್ಭದಲ್ಲಿ ಅವುಗಳ ನಡುವಿನ ಸಾಮ್ಯ-ವೈಷಮ್ಯಗಳನ್ನು ಪೂರಕವಾಗಿ ಅಭ್ಯಸಿಸುತ್ತಾ ಮುಖಾಮುಖಿಯಾಗಿಸಿ ನೋಡಲಾಗುತ್ತದೆ. ಮುಂದಿನ ಉಪ ಅಧ್ಯಾಯದಲ್ಲಿ 'ಅರಿವು-ಇರವು' ಪರಿಕಲ್ಪನೆಗಳನ್ನು ತಾತ್ತ್ವಿಕ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಅರಿವಿನ ಮೂಲಕ ವ್ಯಕ್ತವಾಗುವ ಇರುವಿನ ಪ್ರಜ್ಞೆ ಮತ್ತು ಇರವಿನ ಮೂಲಕ ಕಂಡುಕೊಳ್ಳುವ ಅರಿವಿನ ನೆಲೆಗಳನ್ನು ಸೈದ್ಧಾಂತಿಕವಾಗಿ ಅಧ್ಯಯನ ಮಾಡಲಾಗುತ್ತದೆ.

ಕೊನೆಯ ಅಧ್ಯಾಯದಲ್ಲಿ ಸಂಶೋಧನೆಯ ಫಲಿತಗಳನ್ನು ಸಮಗ್ರವಾಗಿ ನೀಡಲಾಗುತ್ತದೆ. ಒಟ್ಟಿನಲ್ಲಿ ಈ ಪ್ರಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿರುತ್ತದೆ. ಅಲ್ಲಮನ ವಚನಗಳನ್ನು ಇತರ ಕೆಲವು ವಚನಕಾರರ ನಿರ್ದಿಷ್ಟ ವಚನಗಳನ್ನು, ವಿಷಯಕ್ಕೆ ಸಂಬಂಧಿಸಿ ಬಂದಿರುವ ಮೂಲಗ್ರಂಥಗಳನ್ನು ಪ್ರಧಾನ ಆಕರಗಳಾಗಿ ಬಳಸಿಕೊಳ್ಳಲಾಗುತ್ತದೆ. ವಚನ ಸಾಹಿತ್ಯದಲ್ಲಿ ಅಲ್ಲಮನ ಅರಿವಿನ ಚಿಂತನೆ, ಜ್ಞಾನ, ಅನುಭಾವದ ನೆಲೆಗಳನ್ನು ಸಾಧ್ಯವಿರುವ ಎಲ್ಲಾ ಆಯಾಮಗಳಿಂದ ವಿಶ್ಲೇಷಿಸಿ ಅಧ್ಯಯನಕ್ಕೆ ಸಮಗ್ರತೆಯನ್ನು ತರಲು ಪ್ರಯತ್ನಿಸಲಾಗುತ್ತದೆ.

೧.೩ ಇದುವರೆಗಿನ ಅಧ್ಯಯನಗಳು

ಪ್ರಸ್ತುತ ಅಧ್ಯಯನಕ್ಕೆ ಎತ್ತಿಕೊಂಡಿರುವ ಅರಿವಿನ ಕುರಿತು ಒಂದು ಪರಿಕಲ್ಪನಾಧಾರಿತ ಅಧ್ಯಯನ ನಡೆಯದಿದ್ದರೂ ತತ್ತ್ವಶಾಸ್ತ್ರದಲ್ಲಿ, ಆಧುನಿಕ ಚಿಂತಕರಲ್ಲಿ ಇತರ ವಿಚಾರಗಳ ಅಧ್ಯಯನದ ಸಂದರ್ಭದಲ್ಲಿ ಪೂರಕವಾಗಿ ಅಧ್ಯಯನ ನಡೆದಿರುವುದನ್ನು ಕಾಣಬಹುದು. ಭಾರತೀಯ ತತ್ತ್ವಶಾಸ್ತ್ರದಲ್ಲಿ ಮೀಮಾಂಸೆಗಳ ವಿಶ್ಲೇಷಣೆಗೆ ಪೂರಕವಾಗಿ ಅರಿವಿನ ಅಧ್ಯಯನ ಸ್ಥೂಲವಾಗಿ ಕಾಣಿಸುತ್ತದೆ. ಆದರೆ ಪ್ರಸ್ತುತ ಅಧ್ಯಯನ ವಿಷಯವಾಗಿರುವ ಅಲ್ಲಮನ ಅರಿವಿನ ಕುರಿತ ಚಿಂತನೆಯಲ್ಲಿ ನಿರ್ದಿಷ್ಟ ಅಧ್ಯಯನಗಳು ಆಗದಿದ್ದರೂ ಅಲ್ಲಮನ ಕುರಿತ ಅಧ್ಯಯನದಲ್ಲಿ ಆತನ ಅರಿವಿನ ಚಿಂತನೆಗಳು ಬಳಕೆಯಾಗಿದೆ.

ಅಲ್ಲಮ ಪ್ರಭುವಿನ ವಚನಗಳನ್ನು ಕುರಿತ ಅರಿವಿನ ಪರಿಕಲ್ಪನೆಗೆ ಸಂಬಂಧಿಸಿ, ಈಗಾಗಲೇ ಬೇರೆ ಬೇರೆ ನೆಲೆಗಳಲ್ಲಿ ಅಧ್ಯಯನಗಳು ನಡೆದಿವೆ. ಗ್ರಂಥಗಳು ಬಿಡಿ ಲೇಖನಗಳು ಪ್ರಕಟವಾಗಿವೆ. **"ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ"** (ಬಸವರಾಜ ಕಲ್ಗುಡಿ- ೧೯೮೮) **"ಇಂದಿನ ಹೆಜ್ಜೆ"** (ಓ.ಎಲ್.

ನಾಗಭೂಷಣಸ್ವಾಮಿ-೧೯೯೭) **"ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ"** (ಡಿ. ಆರ್. ನಾಗರಾಜ್ ೧೯೯೯) **"ಅರಿವಿನ ಕಥನ'** (ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ೨೦೦೪) ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿ ಈಗಾಗಲೇ ಬಂದಿರುವ ಪ್ರಮುಖ ಅಧ್ಯಯನ ಕೃತಿಗಳು.

ಬಸವರಾಜ ಕಲ್ಗುಡಿಯವರ 'ಅನುಭಾವ-ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ' ಮಧ್ಯಕಾಲೀನ ಕಾಲಘಟ್ಟದ ಒಟ್ಟು ಸಾಮಾಜಿಕ, ಧಾರ್ಮಿಕ ನೆಲೆಯ ಅಧ್ಯಯನವಾಗಿದೆ. ಅಲ್ಲಿ ಮನುಷ್ಯನನ್ನು ಸಮಾಜಜೀವಿಯಾಗಿ, ಧಾರ್ಮಿಕ ವ್ಯಕ್ತಿಯಾಗಿ ಅಧ್ಯಯನ ಮಾಡುವುದರೊಂದಿಗೆ ಬದಲಾದ ಜೀವನ ದೃಷ್ಟಿಕೋನಗಳನ್ನು ಗಮನಿಸಲಾಗಿದೆ. ಮಧ್ಯಕಾಲೀನ ಕಾಲಘಟ್ಟದ ಧಾರ್ಮಿಕ ಕ್ರಾಂತಿಯ ಫಲವಾದ ವಚನ ಸಾಹಿತ್ಯ, ವೀರಶೈವ ಪರಂಪರೆಯ ವಿಶ್ಲೇಷಣೆಯ ಜತೆಗೆ ಸಮಕಾಲೀನ ಅನುಭಾವಿಗಳ ಸಾಧನೆ, ಚಿಂತನಾಕ್ರಮಗಳನ್ನು ಅಧ್ಯಯನ ಮಾಡಲಾಗಿದೆ. ಮನುಷ್ಯನ ಅಸ್ತಿತ್ವದ ಪ್ರಶ್ನೆಗಳ ಕುರಿತು, ಅನುಭಾವ ಪರಂಪರೆಯ ಕುರಿತು ಸೂಕ್ಷ್ಮ ಅಧ್ಯಯನವು ನಡೆದಿದೆ. 'ಇಂದಿನ ಹೆಜ್ಜೆಯಲ್ಲಿ' ನಾಗಭೂಷಣ ಸ್ವಾಮಿಯಯವರು ಅಲ್ಲಮನ ಕುರಿತು, ಅರಿವಿನ ಸಮಸ್ಯೆಯ ಕುರಿತು ನಡೆಸಿದ ಅಧ್ಯಯನ ಲೇಖನಗಳು ಪ್ರಕಟವಾಗಿದೆ. ಅರಿವು, ಕುರುಹು, ಬೆಡಗಿನ ವಚನಗಳ ವಿಶಿಷ್ಟತೆ- ಇವುಗಳಿಗೆ ಸಂಬಂಧಿಸಿ ಅಧ್ಯಯನ ನಡೆದಿದೆ. ಡಿ. ಆರ್ ನಾಗರಾಜ್ ಅವರ 'ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ' ಯಲ್ಲಿ ಅನುಭಾವಿ ಅಲ್ಲಮನ ಅನುಭಾವಗಳ ವಿಶ್ಲೇಷಣೆ, ಶೈವ ಮೀಮಾಂಸೆಯ ನೆಲೆಗಳು, ಕಾಯಸಿದ್ಧಾಂತದ ವಿಶ್ಲೇಷಣೆಗಳು ನಡೆದಿವೆ. ಈ ಕೃತಿ ಮಧ್ಯಕಾಲೀನ ಕಾಲಘಟ್ಟದ ಸಾಂಸ್ಕೃತಿಕ ವಿವರಗಳನ್ನು ಚಾರಿತ್ರಿಕ ನೆಲೆಯಲ್ಲಿ ವಿವರಿಸುತ್ತಾ ಶೈವಸಿದ್ಧಾಂತದ ನೆಲೆಗಳನ್ನು ಶೋಧಿಸಿದೆ.

ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಅರಿವಿನ' ಕಥನ ಹೆಸರೇ ಸೂಚಿಸುವಂತೆ ವಾಙ್ಮಯದಲ್ಲಿನ ಅರಿವನ್ನು ಕಥಿಸುವ ನೆಲೆಯದ್ದಾಗಿದೆ. ಇಲ್ಲಿ ಅರಿವಿನ ನೆಲೆಯನ್ನು ವಾಸ್ತವದ ನೆಲೆಯಲ್ಲಿ ವಿಶ್ಲೇಷಿಸುತ್ತಾ ಅರಿವಿನ ಕುರಿತ ಭಿನ್ನ ಚಿಂತನೆಗಳನ್ನು ನೀಡಲು ಪ್ರಯತ್ನಿಸಿದೆ. ಆ ಮೂಲಕ ಅರಿವಿನ ಶೋಧನೆಗೆ, ಕುತೂಹಲಕ್ಕೆ, ಕಾರಣವಾಗುತ್ತದೆ. ಅಲ್ಲಮನ ಅರಿವಿನೊಳಗೆ ಅರಿವು ಎಂಬ ಭಾಗದಲ್ಲಿ ಅಲ್ಲಮನಲ್ಲಿ ಜ್ಞಾನಕ್ಕೆ ಭಿನ್ನವಾಗಿ ಬಂದಿರುವ ಅರಿವಿನ ನೆಲೆಗಳನ್ನು ಅಲ್ಲಮನ ವಚನಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಹೀಗೆ ಪ್ರಸ್ತುತ ಅಧ್ಯಯನಕ್ಕೆ ಎತ್ತಿಕೊಂಡಿರುವ ವಿಷಯಕ್ಕೆ ಸಂಬಂಧಿಸಿ ಬಿಡಿ, ಬಿಡಿ ಅಧ್ಯಯನಗಳು ಬಂದಿವೆ. ಇವುಗಳು ಚರ್ಚಿಸಿದ ವಿಚಾರಗಳು, ಎತ್ತಿದ ಪ್ರಶ್ನೆ, ಕುತೂಹಲಗಳು ಪ್ರಸ್ತುತ ಅಧ್ಯಯನಕ್ಕೆ ಪ್ರೇರಣೆಯಾಗಿವೆ.

ಅಧ್ಯಾಯ: ೨

ಅರಿವಿನ ಪರಿಕಲ್ಪನೆ : ವ್ಯಾಖ್ಯಾನಗಳು

೨.೧ ಪ್ರಸ್ತಾವನೆ:

ಮನುಷ್ಯ ಜೀವನದ ಪರಮಗುರಿ ಸತ್ಯದ ಅನ್ವೇಷಣೆ. ಸರ್ವವ್ಯಾಪ್ತಿಯಾಗಿರುವ ನಿರಾಕಾರ, ಅಮೂರ್ತ, ಅನೂಹ್ಯ, ಶಕ್ತಿಯೊಂದರ ಕೇಂದ್ರ ಭಿತ್ತಿಯಲ್ಲಿ ಜಗತ್ತು ನಿಂತಿದೆ. ನಮ್ಮಲ್ಲಿ ಕಾಲಕಾಲಕ್ಕೆ ಬಂದ ಋಷಿ ಮುನಿಗಳು, ದಾರ್ಶನಿಕರು, ತತ್ತ್ವಜ್ಞಾನಿಗಳು ಪ್ರಕೃತಿ ಶಕ್ತಿಯ ವೈವಿಧ್ಯತೆಯನ್ನು ಭಿನ್ನ ನೆಲೆಯಲ್ಲಿ ಗ್ರಹಿಸುತ್ತಾ, ವ್ಯಾಖ್ಯಾನಿಸುತ್ತಾ ನಡೆದರು. ವೇದ-ಪುರಾಣಗಳಿಂದ ಹಿಡಿದು ಇಂದಿನವರೆಗೂ ಬೆಳೆದು ಬಂದ ವಾಙ್ಮಯ ಜಗತ್ತು ಪ್ರಪಂಚವನ್ನು, ಜೀವಿಗಳನ್ನು ಅರಿಯುವ ನೆಲೆಯ ಉದ್ದೇಶವನ್ನೇ ಹೊಂದಿದೆ. ಜೀವಿಗಳ ಅರಿವಿನ ನೆಲೆಯನ್ನು ಅರ್ಥೈಸಿಕೊಳ್ಳಲು ಇರುವಿಕೆಯನ್ನು ವಿವರಿಸಿಕೊಳ್ಳುವುದು ಅನಿವಾರ್ಯತೆಯಾಯಿತು. ಜಗತ್ತನ್ನು ಅರಿಯುವ ಪ್ರಕ್ರಿಯೆಯಲ್ಲಿ ಮಹಾನುಭಾವಿಗಳು, ದಾರ್ಶನಿಕ, ಚಿಂತಕರು ಸಮಾಜದ ಅಸ್ತಿತ್ವವನ್ನು ಅದರ ಇರುವಿಕೆಯ ಹಿಂದಿನ ಕಾರ್ಯಕಾರಣಗಳ ವಿಶ್ಲೇಷಣೆಯಿಂದ ಅರ್ಥೈಸಿಕೊಂಡರು. ಈ ಪ್ರಕ್ರಿಯೆಯಲ್ಲಿ ಆತ್ಮೋದ್ಧಾರದ ಮೂಲಕ ವೈಯಕ್ತಿಕ ಸಾಧನೆಯು ನಡೆದಿದೆ. ಬದುಕಿನ ಲೌಕಿಕ, ಆಧ್ಯಾತ್ಮಿಕ, ವೈಚಾರಿಕ ನೆಲೆಗಳು ಅರಿವಿನ ಹಿನ್ನೆಲೆಯಲ್ಲೇ ಬೆಳೆಯಿತು. ಬೌದ್ಧಿಕ ನೆಲೆಗಟ್ಟಿನಲ್ಲಿ ತತ್ತ್ವ, ಜ್ಞಾನ, ಅರಿವು ಭಕ್ತಿ ವಿವೇಕಗಳು ಕಾಣಿಸಿಕೊಂಡವು. ಮುಂದೆ ಈ ವಿಚಾರಗಳೇ ಸ್ವತಂತ್ರ ಪರಿಭಾಷೆಗಳಾಗಿ, ಪರಿಕಲ್ಪನೆಗಳಾಗಿ ರೂಪುಗೊಂಡವು.

ಬೌದ್ಧಿಕ ನೆಲೆಗಟ್ಟಿನಲ್ಲಿ ರೂಪುಗೊಂಡ ಪರಿಭಾಷೆಗಳು ಮುಂದೆ ಕಾಲಕಾಲಕ್ಕೆ ಬುದ್ಧಿ, ತರ್ಕದ ನೆಲೆಯಲ್ಲಿ ಕಾಲಕಾಲಕ್ಕೆ ಹೊಸ ಅರ್ಥ, ಭಾವನೆಗಳನು ಹೊಂದಿ ಬೆಳೆದಿವೆ. ಹನ್ನೆರಡನೆಯ ಶತಮಾನದಲ್ಲಿ ಇಂಥಹ ಹಲವು ಪರಿಕಲ್ಪನೆಗಳ ಬೆಳವಣಿಗೆ ಕಂಡುಬಂದಿದೆ. ವಚನಕಾರರ ಆಧ್ಯಾತ್ಮ, ಜ್ಞಾನ, ಸಾಮಾಜಿಕ, ಎಚ್ಚರ, ಕಾಯಕ ವಿಚಾರಗಳು ಬಂದಾಗ ಅವರದೇ ಆದ ಪರಿಭಾಷೆಗಳು ರೂಪುಗೊಂಡಿದ್ದರೆ, ಇನ್ನೂ ಕೆಲವು ಕಡೆ ಈಗಾಗಲೇ ಬಳಕೆಯಲ್ಲಿರುವ ಪದಗಳು ವಿಶಿಷ್ಟ ಅರ್ಥದಲ್ಲಿ ಪ್ರಯೋಗಗೊಳ್ಳ ತೊಡಗಿದವು. ಚಿಂತಕರ, ದಾರ್ಶನಿಕರ ಬುದ್ಧಿಮತ್ತೆ, ಅಭಿವ್ಯಕ್ತಿಯ ಅನಿವಾರ್ಯತೆಯಲ್ಲಿ ಇಂತಹ ಪ್ರಯೋಗಗಳು ನಡೆದಿವೆ. ಅಂಥಹ, ಪರಿಕಲ್ಪನೆಗಳಲ್ಲಿ 'ಅರಿವು' ಒಂದು. ವಚನಕಾರರ ಆಧ್ಯಾತ್ಮಿಕ, ಬೌದ್ಧಿಕ ವಿಚಾರಧಾರೆಗಳನ್ನು ಹಿಡಿದಿಡುವಲ್ಲಿ ವಿಶಿಷ್ಟವಾಗಿ ಬಳಕೆಯಾದ ಈ ಪರಿಭಾಷೆ ಮತ್ತೆ ಮತ್ತೆ ಪುನರಾವರ್ತನೆಯಾಗಿ ಪಾರಿಭಾಷಿಕ ಪದಕೋಶದೊಳಗೆ ಸ್ಥಾನ ಪಡೆದಿದೆ. ಇಂಥ ಅರಿವಿನ ಕುರಿತಾದ ವ್ಯಾಖ್ಯಾನ ವಿಶ್ಲೇಷಣೆಗಳೊಂದಿಗೆ ಅಲ್ಲಮನ ಅರಿವಿನ ಸಂಕಥನವನ್ನು ನಡೆಸುವ ಆ ಮೂಲಕ ಅರಿವಿನ ಮಹತ್ವ ಸಮಕಾಲೀನ ಹಾಗೆಯೇ ಸಾರ್ವಕಾಲಿಕವಾಗಿಸುವ ಬಗೆ ಮುಖ್ಯವಾಗಿರುವುದು ಕಂಡುಬರುತ್ತದೆ.

೨.೨ ಅರಿವಿನ ವ್ಯಾಖ್ಯಾನಗಳು

ನಮ್ಮ ಭಾರತೀಯ ಜ್ಞಾನಶಾಖೆಗಳ ಪರಂಪರೆಯಲ್ಲಿ 'ಅರಿವು' 'ಇರವು' ಎಂಬ ಅರ್ಥಪೂರ್ಣ ಪದಗಳಿವೆ. ಇಲ್ಲಿ 'ಇರವು' ಎನ್ನುವುದು ಬಾಹ್ಯ ಜಗತ್ತಿಗೆ ಸಂಬಂಧಿಸಿದ್ದಾದರೆ ಅದರ ಅಸ್ತಿತ್ವ ಅನುಭವಕ್ಕೆ ಬರುವುದು ಅರಿವಿನ ಮೂಲಕ ಮಾತ್ರ. ಆದ್ದರಿಂದ ಇವು ಬಹುತೇಕ ಜತೆಯಾಗಿಯೇ ಕಾಣಿಸಿಕೊಳ್ಳುತ್ತದೆ. ಪರಸ್ಪರ ಅಂತರ್‌ಸಂಬಂಧ ಪಡೆದುಕೊಂಡಿರುವ 'ಅರಿವು' ಮತ್ತು 'ಇರವಿ'ನಲ್ಲಿ 'ಅರಿವಿನ' ಜಿಜ್ಞಾಸೆ ನಮಗೆ ಮುಖ್ಯವಾಗುತ್ತದೆ. 'ಅರಿವು' ಬೌದ್ಧಿಕ ನೆಲೆಗೆ ಸಂಬಂಧಪಟ್ಟದ್ದು. ವ್ಯಕ್ತಿಯೊಬ್ಬ ಅರಿವಿನ ಮಾರ್ಗದಲ್ಲಿ ನಡೆದಾಗ ಮಾತ್ರ ಬೌದ್ಧಿಕ ಹಂತದ ಪ್ರಬುದ್ಧತೆ ಸಾಧ್ಯವಾಗುತ್ತದೆ. ಅರಿವು ಇರವಿನ ಮೂಲಕ ಅನುಭವಕ್ಕೆ ಬರುತ್ತದೆ. ಹಾಗೆಯೇ ಇರವಿನ ಹಂಗು ಕಳೆದುಕೊಳ್ಳುವ ಮೂಲಕವು ಮಹತ್ವದ್ದಾಗಿ ಪರಿಣಮಿಸುತ್ತದೆ. ಭೌತಿಕ ವಸ್ತುಸಂಗತಿಯೊಂದು ತನ್ನ ಇರುವಿಕೆಯ ಮೂಲಕವೇ ಅರಿವಿಗೆ ಬರುವುದರಿಂದ ಇಲ್ಲದಿರುವ ಅಥವಾ ಇರುವ ವಸ್ತುವಿನ ಅರಿವು ಇರಬೇಕು. 'ಅರಿವೇ ಬ್ರಹ್ಮ' ಎಂಬ ಜ್ಞಾನಿಗಳ ಮಾತನ್ನು ಗ್ರಹಿಸಿದರೆ 'ಅರಿವಿ'ಲ್ಲದಿದ್ದರೆ ಆತ್ಮಜ್ಞಾನವೇ ಇಲ್ಲ. ಉದಾ:– ಶ್ರೀಕೃಷ್ಣನ ವಿಶ್ವರೂಪ ದರ್ಶನ ಕುರುಡನಾದ ಧೃತರಾಷ್ಟ್ರನಿಗೂ ಸಾಧ್ಯವಾದದ್ದು, ಆತ ಹೊಂದಿರುವ ಅರಿವಿನ ದೃಷ್ಟಿಯಿಂದ. ಅರಿವಿನ ಬೆಳಕು ಇದ್ದಾಗ ಕುರುಡರೂ ಕಾಣಬಹುದು.

ಜೀವಿಗಳ ಬೌದ್ಧಿಕ ಹಾಗೆಯೇ ಭೌತಿಕ ವಿಕಸನದ ಪರಂಪರೆಯಲ್ಲಿ, ವಾಙ್ಮಯ ಪ್ರಪಂಚದಲ್ಲಿ ಬಳಕೆಯಾಗುತ್ತಿದ್ದ ಪದಗಳು ಕಾಲಕಾಲಕ್ಕೆ ತನ್ನ ಅರ್ಥ ಸ್ವರೂಪಗಳಲ್ಲಿ ಬದಲಾವಣೆಯನ್ನೂ ಮಾಡಿಕೊಳ್ಳುತ್ತಲೇ ಬಂದಿದೆ. ಭೌತಿಕ ವ್ಯವಹಾರ ಪ್ರಪಂಚದಲ್ಲಿ ಸೀಮಿತ ಅರ್ಥದಲ್ಲಿ ಬಳಕೆಯಾಗುವ ಪದಗಳು ದಾರ್ಶನಿಕರ, ಚಿಂತಕರ, ಬುದ್ಧಿಜೀವಿಗಳ ಭಿನ್ನ ದೃಷ್ಟಿಕೋನಗಳನ್ನು ಹಿಡಿದಿಡುತ್ತಾ ವೈಶಿಷ್ಟ್ಯಪೂರ್ಣವಾಗಿ ಬೆಳೆದಿವೆ. ಇಂತಹ ವಿಶಿಷ್ಟ ಪದಗಳು ಪರಿಭಾಷೆಗಳಾಗಿ, ಪರಿಕಲ್ಪನೆಗಳಾಗಿ ಹೊಸ ಹೊಸ ಅರ್ಥ ವ್ಯಾಖ್ಯಾನಗಳಿಗೆ ಒಳಪಟ್ಟಿವೆ. ಇವುಗಳಲ್ಲಿ 'ಅರಿವು' ಪದವೂ ಒಂದು. 'ಅರಿವು' ಎಂದ ತಕ್ಷಣ ನಮ್ಮ ಮನಸ್ಸಿನಲ್ಲಿ ಹೊಳೆಯುವ ಅರ್ಥ ತಿಳುವಳಿಕೆ, ವಿಚಾರದ ಗ್ರಹಿಕೆ, ವಸ್ತು ಸಂಗತಿಯ ಬಾಹ್ಯಗುಣಲಕ್ಷಣ ಇತ್ಯಾದಿ. ಆದರೆ ವಾಙ್ಮಯ ಜಗತ್ತಿನಲ್ಲಿ 'ಅರಿವು' ಪದವು ಒಂದು ಪರಿಕಲ್ಪನೆಯಾಗಿ ತತ್ತ್ವಶಾಸ್ತ್ರೀಯ ಚಿಂತನೆಯಲ್ಲಿ, ದೇಸಿ ಪರಂಪರೆಯಲ್ಲಿ ಭಿನ್ನ, ಭಿನ್ನ ಅರ್ಥಗಳ ಭಾರವನ್ನು ಹೊತ್ತು ಸಾಗಿರುವುದು ಕಂಡುಬರುತ್ತದೆ. ಆದ್ದರಿಂದ ನಿಘಂಟುಕೋಶಗಳಲ್ಲಿ ತತ್ತ್ವಶಾಸ್ತ್ರದಲ್ಲಿ ಅರಿವು ಪಡೆದುಕೊಂಡ ಭಿನ್ನ ಅರ್ಥಗಳನ್ನು ವಿಶ್ಲೇಷಿಸುತ್ತಾ ಅರಿವಿನ ವ್ಯಾಖ್ಯಾನಗಳನ್ನು, ಅದರ ವಿಶಿಷ್ಟ ಆಯಾಮಗಳನ್ನು ಗಮನಿಸಬಹುದು.

* ಅರಿವು - ತಿಳುವಳಿಕೆ, ಎಚ್ಚರ, Knowledge awareness [1]
* ಅರುವ aruvu – ಅರಿವು Knowledge [2]

* ಅರಿವು – ಅರಿಯು, ಅರಿದ
* ಅರಿವು – ತಿಳುವಳಿಕೆ
* aware - Having knowledge or realization[3].

'ಅರಿವು' ಪದದ ಬೇರೆ ಬೇರೆ ರೂಪಗಳ ಅರ್ಥ ನಿಘಂಟುವಿನಲ್ಲಿ ಬಳಕೆಯಾಗಿರುವುದನ್ನು ಗಮನಿಸಿದರೆ ತಿಳುವಳಿಕೆ, ಜ್ಞಾನ ಎಂಬ ಅರ್ಥಗಳೇ ಪ್ರಧಾನವಾಗುತ್ತದೆ. ಅಲ್ಲದೆ ಒಂದು ಬಗೆಯ ಎಚ್ಚರ, ಜ್ಞಾನದ ನೆಲೆಯಲ್ಲಿ ಎಚ್ಚರ ಮೂಡುವುದು –ಹೀಗೆ ಅರ್ಥ ಪರಂಪರೆಯನ್ನು ವಿಸ್ತರಿಸಿಕೊಳ್ಳಬಹುದು. ಅರಿವಿನ ಕುರಿತ ಅರ್ಥಗಳ ಜತೆಗೆ ಬಳಕೆಯಾದ ಪ್ರಯೋಗಗಳ ಆಧಾರದಲ್ಲಿ ಅರ್ಥ ನಿರ್ದಿಷ್ಟತೆಯನ್ನು ಹೊಂದುವುದನ್ನು ಗಮನಿಸಬಹುದು.

* ಅರೆವು, ಅರಿವು, ಅರುವು, ಅರುಹು, ಅರಹು (ನಾ) ಹೀಗೆ ಭಿನ್ನ ರೂಪದ ನಾಮಪದವಾಗಿ ಬಳಕೆಯಾಗುವ ಅರಿವು ಪ್ರಯೋಗದ ನೆಲೆಯಲ್ಲಿ 'ಎನ್ನ ಪ್ರಾಣದಲ್ಲಿ ಅರಿವ ತೋರಿದನಯ್ಯ ಬಸವಣ್ಣನು' ಮರವೆಗಳೆನಿಪ್ಪೆರಡರಿ ಮಧ್ಯಾವಸ್ಥೆಯೊಳ್, ಅರಿವನರಿದಡೆ ಜೀವನೆರೆ ಸದಾಶಿವನಕ್ಕು'. ಪುಸ್ತಕದಿ ದೊರೆತರಿವು, ಮಸ್ತಕದಿ ತಳೆದ ಮಣಿ, 'ದೇವಾ ನಿನ್ನರಿವು ಮುಗುದೆಯ ಕಡುನೇಹದಂತೆ, ಎಂದು ಕಾಣಿಸಿಕೊಂಡಿದೆ. ಇಲ್ಲಿನ ಪ್ರಯೋಗದಲ್ಲಿ ಅರಿವಿನ ಅರ್ಥವಿವರಣೆ ತಿಳಿವು, ಜ್ಞಾನ ಎಂಬ ಸಾಮಾನ್ಯಾರ್ಥವೇ ಮುಖ್ಯವಾಗುತ್ತದೆ.

* ಅರಿವಿಂಗೋಜ : ವಿದ್ಯೆಗೆ ಗುರು
* ಅರಿವುಗೆಡಿಸು : ಬುದ್ಧಿಯನ್ನು ಹಾಳುಮಾಡು, ತಿಳುವಳಿಕೆಯನ್ನು ಕೆಡಿಸು.
* ಅರಿವುಗೆಡು, ಅರುಹುಗೆಡು : ತಿಳುವಳಿಕೆಯಿಲ್ಲವಾಗು, ವಿವೇಕ ತಪ್ಪು.
* ಅರಿವುಮರೆ : ಬುದ್ಧಿಶೂನ್ಯವಾಗು, ವಿವೇಕವನ್ನು ಮರೆ, ಮೈಮರೆ.

ಅರಿವುಮರೆದದಪಕೀರ್ತಿಯನಾರಿಯ ಸೆರಗು ಹಿಡಿದರು[4]– ಈ ಸಂದರ್ಭ ಪ್ರಯೋಗಗಳಲ್ಲಿ ತಿಳುವಳಿಕೆ, ಜ್ಞಾನ ಎಂಬ ಅರ್ಥಗಳ ಜೊತೆಗೆ ವಿದ್ಯೆ, ಬುದ್ಧಿ, ಪ್ರಜ್ಞೆ ಎಂಬಲ್ಲಿಗೆ ಅರ್ಥ ಪರಂಪರೆ ವಿಸ್ತೃತಗೊಳ್ಳುತ್ತದೆ. ಪ್ರಯೋಗವನ್ನು ಗಮನಿಸಿದಾಗ ಅರಿವು ಅನ್ನುವುದು ಅನಿವಾರ್ಯವಾದುದು. ಅದು ಇಲ್ಲದೇ ಇದ್ದಾಗ ವ್ಯಕ್ತಿತ್ವಕ್ಕೆ ಋಣಾತ್ಮಕ ನೆಲೆ ಪ್ರಾಪ್ತವಾಗುತ್ತದೆ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ಅರಿವು ಅನ್ನುವುದು ಕೇವಲ ಹೊಂದಿರುವ ತಿಳುವಳಿಕೆ ಮಾತ್ರ ಆಗಿರದೆ ಅದು ಜ್ಞಾನ, ಬುದ್ಧಿ, ಪ್ರಜ್ಞೆ, ವಿವೇಕ ತಿಳುವಳಿಕೆಯಿಂದ ಒಡಗೊಂಡ ಪರಿಭಾಷೆಯಾಗಿ ಇರಬೇಕಾದ ಅನಿವಾರ್ಯ ಅಂಶವಾಗಿ ಕಾಣಿಸಿಕೊಳ್ಳುತ್ತದೆ.

ಅರಿವಿಗೆ ಸಮನಾರ್ಥಕವಾಗಿ ಮತ್ತೆ ಮತ್ತೆ ಪುನರಾವರ್ತನೆಯಾದುದು ಜ್ಞಾನ ಎಂಬರ್ಥ. ಆದ್ದರಿಂದ ಜ್ಞಾನದ ಕುರಿತು ಬಂದಿರುವ ಅರ್ಥ –ವ್ಯಾಖ್ಯಾನಗಳನ್ನು ವಿಶ್ಲೇಷಿಸಲಾಗಿದೆ. 'ಜ್ಞಾನ' ದ ಜ್ಞಾತಿ ರೂಪಗಳ ಮೂಲಕವೂ ಅರ್ಥ ಪರಂಪರೆಯನ್ನು ಗುರುತಿಸಿಕೊಳ್ಳಬಹುದು.

* ಜ್ಞಾತೃ – ಅರಿತುಕೊಳ್ಳುವ, ತಿಳುವಳಿಕೆಯುಳ್ಳ
* ಜ್ಞಾತೃತ್ವ – ತಿಳಿದುಕೊಳ್ಳುವಿಕೆ, ತಿಳಿದಿರುವಿಕೆ
* ಜ್ಞಾಪ್ತಿ – ಬುದ್ಧಿ, ಅರಿವು, ಜ್ಞಾನ, ನೆನಪು
* ಜ್ಞಾತ – ತಿಳಿಯುವ, ಕಾಣುವ, ತಿಳಿದವನು, ಅರಿತವನು
* ಜ್ಞಾತವ್ಯ – ತಿಳಿಯಬೇಕಾದ, ಅರಿಯಬೇಕಾದ [5]

ಹೀಗೆ ಅರಿವಿನ ಅರ್ಥದ ನೆಲೆಗಳನ್ನು ವಿಸ್ತರಿಸುತ್ತಾ ವಿಶ್ಲೇಷಿಸುತ್ತಾ ಹೋದಂತೆ ಭೌತಿಕ ಹಾಗೂ ಬೌದ್ಧಿಕ ಮಟ್ಟದ ಭಿನ್ನ ಅರ್ಥ ವ್ಯಾಖ್ಯಾನಗಳು ದೊರೆಯುತ್ತದೆ.

ಭಾರತೀಯ ತತ್ತ್ವಶಾಸ್ತ್ರ ಚಿಂತನೆಯಲ್ಲಿ ಅರಿವಿನ ಸಮಸ್ಯೆಯ ಕುರಿತು ಭಿನ್ನ ವ್ಯಾಖ್ಯಾನಗಳು ಮೂಡಿಬಂದಿವೆ. ಇಂದ್ರಿಯಾನುಭವವೆಲ್ಲ, ಪ್ರತ್ಯಕ್ಷವಾದುದೆಲ್ಲವು ನಂಬಲು ಅರ್ಹವಾದುದೇ ಎಂಬ ಪ್ರಶ್ನೆಗೆ ಮರಳುಗಾಡಿನಲ್ಲಿ ಬಾಯಾರಿದವನಿಗೆ ನೀರು ಕಾಣುತ್ತದೆ. ನಿಜವಾಗಿ ಅಲ್ಲಿ ನೀರಿರುವುದಿಲ್ಲ. ಸೂರ್ಯನು ಒಂದು ಚೆಂಡಿನ ಗಾತ್ರದವನಾಗಿ ಕಂಡರೂ ವಿಜ್ಞಾನದ ಜ್ಞಾನ ಅದರ ಗಾತ್ರ ಅದೆಷ್ಟೋ ದೊಡ್ಡದೆಂದು ಹೇಳುತ್ತದೆ. ಆದ್ದರಿಂದ ಪ್ರತ್ಯಕ್ಷವಾದುದೆಲ್ಲ ಸತ್ಯವಲ್ಲ ಎಂಬ ಅರಿವು ಅಗತ್ಯವಾಗಿದೆ. ಹಾಗೆಯೇ ಜ್ಞಾನಿಗಳೆನಿಸಿಕೊಂಡ ಹಿರಿಯರ ಮಾತು ಪ್ರಮಾಣಬದ್ಧವಾದುದು ಎಂದಾಗ ಕೆಲವು ಸಂದೇಹಗಳಿಗೆ ಎಡೆ ಮಾಡಿಕೊಡುತ್ತದೆ. ಜ್ಞಾನಿಯ ಜ್ಞಾನದ ಮಟ್ಟವೇನು, ಶಾಸ್ತ್ರದಲ್ಲಿ ಹೇಳಿದ್ದೆಲ್ಲ ಸತ್ಯವೇ? ಅಲ್ಲ, ವಿರೋಧವೂ ಇರಬಹುದು. ಆದ್ದರಿಂದ ತರ್ಕದ ಮೂಲಕ ವಿಶ್ವವನ್ನು ತಿಳಿಯಬಹುದು. ಯಾವುದು ನಿಜ? ಯಾವುದು ಭ್ರಮೆ? ಯಾವುದು ಪ್ರತ್ಯಕ್ಷ? ಅಪ್ರತ್ಯಕ್ಷ? ಇವುಗಳ ಸ್ವರೂಪ ವ್ಯಾಪ್ತಿ, ಮಿತಿ, ಸ್ಥಾನ ಇವೆಲ್ಲ ಅರಿವಿನ ಸಮಸ್ಯೆಗಳಾಗಿ ಪ್ರತಿಪಾದಿತವಾಗಿವೆ. ಅದನ್ನೇ ತತ್ತ್ವಶಾಸ್ತ್ರದಲ್ಲಿ ಜ್ಞಾನಮೀಮಾಂಸೆ (Epistomology) ಯೆಂದು ಕರೆಯಲಾಗುತ್ತದೆ.

ಉಪನಿಷತ್ತಿನಲ್ಲಿ ಅರಿವು ಎಂದರೆ ಜ್ಞಾನ, ತಿಳುವಳಿಕೆ, ಅನುಭವ ಎಂಬರ್ಥವೇ ಬಳಕೆಯಾಗಿದೆ. ಬ್ರಹ್ಮನು ಅರಿವಿಗೆ ಮೀರಿದ ಸತ್ಯ. ನಿರ್ದಿಷ್ಟ ವಸ್ತುಗಳ ವಿವರಗಳನ್ನು ಕುರಿತು ನಮಗೆ ಅರಿವು ನೀಡದಿರಬಹುದು. ಆದರೆ ಅವುಗಳ ಇರವಿನ ಬಗೆಗೆ ಒಳ ಅರಿವನ್ನು ಅದು ನೀಡುತ್ತದೆ. ನಾವು ಬ್ರಹ್ಮವನ್ನು ಅರಿಯುವುದು ಅಸಾಧ್ಯವಾಗದು. ಆದರೆ ನಾವೇ ಬ್ರಹ್ಮ ಆಗಬಹುದು. ಅಂದರೆ ಬ್ರಹ್ಮವು ಏನು ಎಂಬ ಅರಿವು ನಮಗಾಗದಿದ್ದರೂ ಅದು ಇದೆ ಎಂಬ ತಿಳಿವು ಮೂಡುತ್ತದೆ.

ಜೈನದರ್ಶನದಲ್ಲಿ ಚೇತನ, ಅಚೇತನಗಳನ್ನು ಒಪ್ಪಿಕೊಳ್ಳುತ್ತಾ ಒಂದು ಮತ್ತೊಂದನ್ನು ಒಳಗೊಳ್ಳುತ್ತದೆ ಎನ್ನುತ್ತಾರೆ. ಒಂದನ್ನು ಅರಿತವನು ಎಲ್ಲವನ್ನೂ ಪೂರ್ಣವಾಗಿ ಅರಿತವನು, ಎಲ್ಲವನ್ನೂ ಅರಿತವನು ಮಾತ್ರವೇ ಯಾವುದನ್ನೇ ಆದರೂ ಪೂರ್ಣವಾಗಿ ಅರಿತವನು ಎಂದು ಹೇಳುವ ಶ್ಲೋಕ ಈ ರೀತಿ ಇದೆ.

'ಏಕೋಭಾವಃಸರ್ವಥಾಯೇನ ದೃಷ್ಟಃ ಸರ್ವೇಭಾವಃ

ಸರ್ವಥಾ ತೇನ ದೃಷ್ಟಾಃ ಸರ್ವೇ ಭಾವಾ ಸರ್ವಥಾಃ'[6]

ಚಾರ್ವಾಕ ದರ್ಶನದಲ್ಲಿ ಪ್ರಜ್ಞೆಯ ಕುರಿತು ವಿವೇಚಿಸುತ್ತಾ ಪ್ರಜ್ಞೆಯು ನಿಜವಾಗಿ ದೇಹದ ಒಂದು ಗುಣವೇ ಆಗಿದ್ದಲ್ಲಿ ಒಬ್ಬನಿಂದ ಅದನ್ನು ಅರಿಯಲು ಸಾಧ್ಯವಾಗದಿದ್ದರೆ ಇತರರೂ ಅದನ್ನು ಅರಿಯಲು ಸಾಧ್ಯವಾಗಬೇಕು ಎನ್ನಲಾಗಿದೆ. ಇಲ್ಲಿಯೂ ಅರಿವು ಅನ್ನುವುದು ತಿಳುವಳಿಕೆ, ಅನುಭವ ಎನ್ನುವ ಅರ್ಥವನ್ನೇ ಹೊಂದಿರುವುದು ಸ್ಪಷ್ಟವಾಗುತ್ತದೆ.

ಬೌದ್ಧಪಂಥದ ಹೀನಯಾನ ಪಂಥವು ಅರಿವಿನ ಕ್ಷೇತ್ರದ ಹೊರಗೂ ಅಸ್ತಿತ್ವವುಂಟು ಎಂದು ವಿವೇಚಿಸಿದೆ. ಹಾಗೆಯೇ ಪರೋಕ್ಷವಾಗಿ ಅರಿವಿಗೆ ಬರುವುದರ ಬಗ್ಗೆಯೂ ವಿಶ್ಲೇಷಿಸಿದೆ. ಬೌದ್ಧರ ಪ್ರಕಾರ ಸ್ವಲ್ಲಕ್ಷಣವು ಪ್ರತ್ಯಕ್ಷವಾಗಿಯೇ, ಪರೋಕ್ಷವಾಗಿಯೇ ಅರಿವಿಗೆ ಬರುತ್ತದೆ. ಇದರ ಕುರಿತು ಎರಡು ವಾದಗಳಿವೆ[7]

೧. ಅನುಭವ ಇರುವಲ್ಲೆಲ್ಲಾ ಸಾಮಾನ್ಯವಾಗಿ ಜ್ಞಾತೃ, ಜ್ಞೇಯ, ಜ್ಞಾನ ಎಂಬ ಮೂರು ಅಂಶಗಳು ಇರುತ್ತವೆ. ಅವುಗಳಲ್ಲಿ ಜ್ಞಾನವೆಂಬುದೇ ಸತ್ಯ. ಜ್ಞಾತೃ, ಜ್ಞೇಯ ಪ್ರಧಾನವಲ್ಲ. ಅದು ಕಲ್ಪನೆ ಮಾತ್ರ, ಇದರ ಪ್ರಕಾರ ಯಾವುದೇ ಒಂದು ನಿರ್ದಿಷ್ಟ ಕ್ಷಣದಲ್ಲಿ ಅರಿವು ತಾಳುವ ಒಂದು ವಿಶಿಷ್ಟ ರೂಪವನ್ನು ನಿರ್ಣಯಿಸುವುದು ಹೊರಗಿನ ಅಸ್ತಿತ್ವವಲ್ಲ, ಹಿಂದಿನ ಅನುಭವ ಮಾತ್ರ.

೨. 'ಅರಿವು ಸ್ವಸಂವೇದಿಯಾದದ್ದು ಅಂದರೆ ಅರಿವಿನ ಹಾದಿಯಲ್ಲಿ ಜ್ಞಾನವೂ, ಜ್ಞಾತವೂ ಒಂದೇ ಆಗಿರಬಹುದು.[8]

ವಿಜ್ಞಾನದ ಪ್ರಕಾರ ಬಾಹ್ಯವಸ್ತುಗಳು ಸತ್ಯ. ಅವು ಪ್ರತ್ಯಕ್ಷವಾಗಿ ಅರಿವಿಗೆ ಬರುವಂಥದ್ದು. ವಸ್ತುವಿನ ಅರಿವು ಎಂದರೆ ಅದರ ಅಸ್ತಿತ್ವ, ಅದು ತನ್ನನ್ನು ತಾನೇ ಅರಿಯುತ್ತದೆ. ವಸ್ತುವೊಂದು ನಿರಂತರ ಬದಲಾವಣೆಗೆ ಒಳಗಾಗುತ್ತ ಕ್ರಿಯಾಶೀಲವಾಗುತ್ತಾ ಅಸ್ತಿತ್ವ ಪಡೆದುಕೊಳ್ಳುತ್ತದೆ.

ಪ್ಲೇಟೋನ ಪ್ರಕಾರ 'ಜ್ಞಾಪಿಸಿಕೊಳ್ಳುವ ಶಕ್ತಿಯೇ ಅರಿವು. ಅರಿವೆಂದರೆ ಜ್ಞಾಪಿಸಿಕೊಳ್ಳುವುದು ನೆನಸಿಕೊಳ್ಳುವುದು'[9] – ಈ ವ್ಯಾಖ್ಯಾನದ ಪ್ರಕಾರ ಲೋಕ ಸಂಗತಿಗಳ ತಿಳುವಳಿಕೆ, ಓದು, ಅನುಭವದಿಂದ

ಪಡೆದ ವಿಚಾರಗಳನ್ನು ಅರ್ಥೈಸಿಕೊಂಡು ಅವುಗಳನ್ನು ನೆನಪಿಸಿಕೊಳ್ಳುವ ಶಕ್ತಿಯನ್ನು ಅರಿವೆಂದು ವಿವರಿಸಿಕೊಳ್ಳಬಹುದು.

ಜೊಹಾನ್ ವೊಲ್ಫ್‌ಗಾಂಗ್ ಫಾನ್ ಗಯಥೆಯ ಪ್ರಕಾರ "ಅರಿಯಲಾಗದುದನ್ನು ಅರಿಯಲು ಸಾಧ್ಯವಿದೆಯೆಂದು ಮನುಷ್ಯ ನಂಬಬೇಕು. ಅಲ್ಲವಾದರೆ ಅವನು ಅದನ್ನು ಕುರಿತು ಯೋಚನೆಯನ್ನೇ ಮಾಡಲಾರ" ಎಂಬ ಮಾತಿನ ಹಿಂದೆ ಅರಿವೆಂಬುದು ತಿಳಿದುಕೊಳ್ಳಬೇಕಾದ ವಿಚಾರ, ಸಂಗತಿ ಎಂಬರ್ಥ ವ್ಯಕ್ತವಾಗಿದೆ. "ಇರುವಿಕೆಯು ಅರಿವನ್ನು ಹುಟ್ಟಿಸುತ್ತದೆ" [10] ಎಂಬ ಮಾರ್ಕ್ಸ್‌ವಾದಿ ಹೇಳಿಕೆಯನ್ನು ಗಮನಿಸಿದರೆ, ವ್ಯಕ್ತಿಜಗತ್ತಿನ ಅಸ್ತಿತ್ವವೇ ಅರಿವಿಗೆ ಕಾರಣ. ಅಂದರೆ ಅರಿವು ಅನ್ನುವುದು ಜಗತ್ತಿನ ವಸ್ತು ಸಂಗತಿಗಳಿಂದ ಪಡೆಯಬಹುದಾದ ಅನುಭವ. ವಿಶ್ವವು ನಮ್ಮ ಅರಿವಿಗೆ ಸಿಲುಕುವಂತಹುದು. ಅರಿವೆನ್ನುವುದು ವಸ್ತುವಿನ ಪ್ರತಿಫಲನ[11] ಎಂದು ಗುರುತಿಸಿಕೊಳ್ಳಬಹುದು.

ಮನಃಶಾಸ್ತ್ರದ ಪ್ರಕಾರ ಅರಿವು ಎನ್ನುವುದು ಸಂವೇದನೆ, ಭಾವನೆ, ಅನುಭೂತಿ ಮತ್ತು ಸಂಕಲ್ಪ. ಅನುಭೂತಿ ಮತ್ತು ಇಚ್ಛಾಶಕ್ತಿಗಳಿಲ್ಲದೆ ಉಂಟಾಗುವ ಪ್ರಜ್ಞೆಯನ್ನು ಅರಿವು ಎನ್ನಬಹುದು. ಎಲ್ಲ ಪ್ರಾಣಿಗಳ ಮೂಲ ಪ್ರವೃತ್ತಿ ಹೊರಗಿನ ಜಗತ್ತನ್ನು ಅರಿಯುವುದು. ಪರಿಸರ ಮತ್ತು ಜೀವಿಗಳ ನಡುವೆ ಇರುವ ಅನಿವಾರ್ಯ ಸಂಬಂಧದ ಒಂದು ಸಾಧನವಾಗಿ ಅರಿವು ಕಾಣಿಸಿಕೊಳ್ಳುತ್ತದೆ. ವಿಲಿಯಂ ಜೇಮ್ಸ್ ಹೇಳಿದಂತೆ ಅರಿವಿನ ಹಾದಿಯಲ್ಲಿ ಮೊದಲ ಹೆಜ್ಜೆ ಇಂದ್ರಿಯಾನುಭವ.[12] ಆದ್ದರಿಂದ ಇಂದ್ರಿಯಗಳನ್ನು ಜ್ಞಾನದ್ವಾರಗಳು ಎಂದೂ ಕರೆಯುತ್ತಾರೆ. ಅರಿವಿನ ರಚನೆ ಇಂದ್ರಿಯಾನುಭವಗಳ ಮೂಲಕ ಆಗುತ್ತದೆ ಎನ್ನುವುದು ಟೀಚರ್‌ನ ವ್ಯಾಖ್ಯಾನ ಇಂದ್ರಿಯಾನುಭವಗಳ ಮೂಲಕ ಮನಸ್ಸಿನ ವ್ಯವಸ್ಥೆಯನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ.[13]

ಮನುಷ್ಯ ಜಾಗೃತನಾಗಿರುವಾಗಲೆಲ್ಲ ಬಾಹ್ಯ ವಸ್ತುಗಳಿಂದ ಅವಿರತವಾದ ಪ್ರಚೋದನೆಗಳಿಗೆ ಈಡಾಗುತ್ತಾನೆ ಹಾಗೂ ಇಂದ್ರಿಯಗಳು ಪ್ರಚೋದನೆಯನ್ನು ಗ್ರಹಿಸಲು ಸಮರ್ಥವಾಗಿರುತ್ತವೆ. ಹೀಗೆ ಇಂದ್ರಿಯಗಳಿಗೆ ನಿಯತ ವ್ಯಾಪಾರವಿದೆ. ಇವೆಲ್ಲ ಅರಿವಿನ ಪ್ರಕಾರಗಳೇ. ಇಂದ್ರಿಯಗಳು ಮಾತ್ರ ಕೆಲಸ ಮಾಡಿದರೆ ಅರಿವು ಮೂಡುವುದಿಲ್ಲ. ಇಂದ್ರಿಯಗಳಿಂದ ಸಿದ್ಧವಾದ ಅನುಭವಗಳಿಗೆ ಅರ್ಥವನ್ನು ಸೇರಿಸಿ ಪ್ರತ್ಯಾಕ್ಷಾನುಭವ ಆದಾಗಲೇ ಅರಿವು ಪೂರ್ಣವಾಗುವುದು. ಅರಿವು ಎಂಬುದು ಅಗೋಚರ ವಸ್ತು ಮತ್ತು ಅಪ್ರಮಾಣ ಸಂಗತಿ. ಅನುಭವ ದರ್ಶನಗಳ ಮೂಲಕ ಮಾತ್ರ ಕಂಡುಕೊಳ್ಳಲು ಸಾಧ್ಯ. ಭಕ್ತಿ, ಸೇವೆ ಮತ್ತು ಪರಿಶ್ರಮಗಳಿಂದ ಗುರುವನ್ನು ಒಲಿಸಿಕೊಳ್ಳಬೇಕಾದಂತೆ ಅಧ್ಯಯನ –ಅನುಷ್ಠಾನಗಳಿಂದಲೂ ಸಾಹಸ–ಸಿದ್ಧಿಗಳಿಂದಲೂ ಅರಿವನ್ನು ಹೃದ್ಗತ ಮಾಡಿಕೊಳ್ಳಬೇಕಾಗುತ್ತದೆ. ತನ್ನತನದ ಅರಿವು, ಸತ್ಯ, ಮಿಥ್ಯೆಗಳ

ಪ್ರಶ್ನೆಗಳು ಒಂದರ ಹಿಂದೆ ಒಂದು ಮೂಡಿದರೆ ಅದೇ ಆತ್ಮನ ಅರಿವು. ಇದು ಗುರು ಸಾನ್ನಿಧ್ಯದಿಂದ, ಹಾಗೆಯೇ ತನ್ನಿಂದ ತಾನೇ ಜಿಜ್ಞಾಸೆ ಮೂಡಿ ಉಂಟಾಗಬಹುದು.

ಶರಣ ಸ್ಥಲದಲ್ಲಿ ಅರಿವು ಬೇರೆಯಲ್ಲ, ಶರಣ ಬೇರೆಯಲ್ಲ. ಅರಿವಿನ ಸಾಕ್ಷಾತ್ಕಾರವಾಗುವುದೇ ಶರಣ. ಶರಣನಾಗುವುದು ಎಂದರೆ ಅರಿವಿನ ಮಾರ್ಗದಲ್ಲಿ ನಡೆಯುವುದು. ಅರಿವೆಂದರೆ ಓದಿ, ಕೇಳಿ ತಿಳಿದ ಬಾಹ್ಯ ಜ್ಞಾನವಲ್ಲ. ಅದು ಈ ಪಡೆದ ತಿಳುವಳಿಕೆಯನ್ನು ಮಸ್ತಕದೊಳಗೆ ಮಥಿಸಿ ಕಂಡುಕೊಂಡ ದಿವ್ಯಜ್ಞಾನ. ಅರಿವೆಂದರೆ ಬಾಹ್ಯದ ಅರಿವಲ್ಲ. ಅಂಗದ ಬಗೆಗಿನ ಅರಿವಲ್ಲ. ಲಿಂಗದ ಬಗೆಗಿನ ಅರಿವು. ಜ್ಞಾನದ ಮೂಲಕ ಹೊಂದುವ ಅನುಭಾವದ ನೆಲೆ. ಅರಿವೆಂದರೆ ಬುದ್ಧಿಶಕ್ತಿಯ ಒರೆಗಲ್ಲಲ್ಲ. ಅರಿವೆಂದರೆ ಮುಕ್ತಿವಂತಿಕೆ, ಬಾಹ್ಯ ವಿಚಾರಗಳಾದ ಕುಲ, ಛಲ, ಬಲ, ಮದ –ಮೊದಲಾದವುಗಳನ್ನು ಕಳೆದುಕೊಂಡ ದಿವ್ಯಜ್ಞಾನಿಯೇ ಶರಣ. ಆತ ಹೊಂದಿರುವ ಅನುಭಾವವೇ ಅರಿವು. ಅರಿವೆಂಬುದು ವ್ಯಕ್ತಿಯೋರ್ವನ ವ್ಯಕ್ತಿತ್ವವನ್ನು ರೂಪಿಸುತ್ತಿರುತ್ತದೆ. ಅರಿಯುವ ಆತ್ಮ ಎಲ್ಲರಲ್ಲಿಯೂ ಒಂದೇ ರೀತಿಯದಾಗಿದ್ದರೂ, ಅರಿವಿನ ನೆಲೆ ಭಿನ್ನವಾಗಿರುತ್ತದೆ. ಸಂಸ್ಕಾರ ಫಲದಿಂದ ಅರಿವನ್ನು ಹೊಂದಿದವನು ಮಹಾತ್ಮನಾಗುತ್ತಾನೆ. ಅರಿಯದವನು ಮಾನವನಾಗಿಯೇ ಉಳಿಯುತ್ತಾನೆ.

ಅರಿವು ಇರುವಿಕೆಯ ಉತ್ಪನ್ನ. ಅರಿವಿನ ಹುಟ್ಟು ಮತ್ತು ಬೆಳವಣಿಗೆ ಭೌತಿಕ ಜಗತ್ತಿನ ಬೆಳವಣಿಗೆಯೊಂದಿಗೆ ಸಂಬಂಧವುಳ್ಳದ್ದು. ಪ್ರಕೃತಿಯೊಳಗಿನ ಇರುವಿಕೆಯೇ ಯಥಾರ್ಥವಾಗಿ ಬೆಳವಣಿಗೆ ಹೊಂದಿ ಅರಿವಿನ ರೂಪ ತಳೆಯುತ್ತದೆ. ನಂತರ ಸಾಮಾಜಿಕ ನೆಲೆಯಲ್ಲಿ ಅಸ್ತಿತ್ವ ಪಡೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅರಿವೆನ್ನುವುದೇ ಮಾನದಂಡವಾಗಿ, ನಿರ್ಣಾಯಕವಾಗಿ ಕೆಲಸ ಮಾಡುತ್ತದೆ. ತತ್ತ್ವಜ್ಞಾನದ ಮೂಲ ಪ್ರಶ್ನೆಯಾಗಿರುವ ಅಸ್ತಿತ್ವ ಮತ್ತು ಪ್ರಜ್ಞೆಯ ಸಂಬಂಧದ ವಿಶ್ಲೇಷಣೆಯಲ್ಲಿ ವಿಶ್ವದ 'ಅರಿವು' ಸಾಧ್ಯವೇ ಎಂಬ ವಿಚಾರ ಮುಖ್ಯವಾಗುತ್ತದೆ. ಪ್ರಜ್ಞೆಯ ಮೂಲಕ ವಿಶ್ವದ ರಹಸ್ಯವನ್ನು ಅರಿಯುವಲ್ಲಿ ಅರಿವು ಸಾಧ್ಯವೇ? ಎಂಬುದಕ್ಕೆ ಪೂರಕವಾಗಿ ಬಾಹ್ಯ ಎಂಬರ್ಥ ಕಾಣಿಸಿಕೊಂಡಿದೆ. ಡೆಮಾಕ್ರಿಟಿಸ್ ಎಂಬ ಗ್ರೀಸ್‌ನ ಭೌತಿಕವಾದಿ ತತ್ತ್ವಜ್ಞಾನಿಯೋರ್ವ ಪರಮಾಣು ಸಿದ್ಧಾಂತವನ್ನು ಪ್ರತಿಪಾದಿಸುವಲ್ಲಿ ವಿಶ್ವವು ನಮ್ಮ ಅರಿವಿಗೆ ನಿಲುಕುವಂಥದ್ದು. ಅರಿವೆನ್ನುವುದು ವಸ್ತುವಿನ ಪ್ರತಿಫಲನ ಎನ್ನುತ್ತಾನೆ.[14] ಪ್ಲೇಟೋ ವಿಶ್ವದ ನೈಜ ಸತ್ವವು ಭಾವನೆಗಳೊಂದಿಗೆ ಅಡಗಿರುತ್ತದೆ.[15] ಭಾವನೆಗಳು ವಸ್ತುಗಳಲ್ಲಿ ನೆಲೆಸಿರುವುದಿಲ್ಲ ಎಂದಿದ್ದಾನೆ. ವಾಸ್ತವಿಕ ಜಗತ್ತಿನ ಅಸ್ತಿತ್ವವನ್ನು ಅಂಗೀಕರಿಸುವುದರ ಜತೆಗೆ ಗ್ರಹಿಕೆ ಅಥವಾ ಅರಿಯುವಿಕೆ ಎಂದರೆ ಆ ಜಗತ್ತಿನ ಪ್ರತಿಫಲನವೆಂಬ ದೃಷ್ಟಿಯು ಭೌತಿಕವಾದದ ಸಿದ್ಧಾಂತವಾಗಿದೆ. ಅರಿಯುವಿಕೆಯು ವಾಸ್ತವತೆಯ ಪ್ರತಿಫಲನವಲ್ಲ. ಅದರಲ್ಲಿ ಅಂತರ್ಗತವಾಗಿರುವ ವಿಚಾರಗಳನ್ನು ಬೌದ್ಧಿಕ ನೆಲೆಯಲ್ಲಿ ಕಂಡುಕೊಳ್ಳುವ ಪ್ರಕ್ರಿಯೆಯೇ ಅರಿಯುವಿಕೆಯಾಗಿದೆ. ಹೀಗೆ ಭೌತಿಕವಾದಿಗಳು ಹಾಗೂ ಭಾವನಾವಾದಿಗಳು

ಅರಿಯುವಿಕೆಯೆಂದರೆ ವಾಸ್ತವಿಕತೆಯ ಅಂಗೀಕಾರ ಅಥವಾ ನಿರಾಕರಣೆ ಎಂಬ ವೈರುಧ್ಯದ ನೆಲೆಗಳನ್ನು ಮುಂದಿಡುತ್ತಾರೆ.

ಮಾರ್ಕ್ಸ್ ಮತ್ತು ಏಂಗಲ್ಸ್ ಅರಿಯುವಿಕೆಯ ತತ್ವಕ್ಕೆ ಕ್ರಿಯೆಯ ಲಕಣ್ಷವನ್ನು ಸಂಯೋಜನೆಗೊಳಿಸುತ್ತಾರೆ. ಕ್ರಿಯೆಯೇ ಅರಿಯುವಿಕೆಯ ಗುರಿ. ಕ್ರಿಯೆಯ ಬೆಳವಣಿಗೆಗೆ ಪ್ರೇರಕವಾಗುತ್ತದೆ. ಕ್ರಿಯೆಯೇ ಅರಿವಿನ ಮೂಲವಾಗಿದೆ. ಅರಿವಿನ ನೆಲೆಗೆ ಸಾಕ್ಷಿಯಾಗುತ್ತದೆ. ಆದ್ದರಿಂದ ನಮ್ಮ ಅರಿವು ಕಾರ್ಯದಲ್ಲಿ ಯಾವಾಗಲೂ ನಿರೀಕ್ಷಿಸುತ್ತ ಫಲವನ್ನು ಕೊಡುವುದಿದ್ದರೆ ಮಾತ್ರವೇ ಅದು ನಿಜವಾದ ಅರಿವೆನಿಸುತ್ತದೆ. ಒಟ್ಟಿನಲ್ಲಿ ಅರಿವು ಪೂರ್ಣವಾಗಿಯೇ, ಅಪೂರ್ಣವಾಗಿಯೇ, ಇರುವಿಕೆಯನ್ನು ಪ್ರತಿಬಿಂಬಿಸುತ್ತದೆ ಎಂಬುದನ್ನು ಕ್ರಿಯೆ ಸ್ಪಷ್ಟವಾಗಿ ಸೂಚಿಸುತ್ತದೆ.

ಅರಿವಿನ ಆಂತರ್ಯದ ಪರಿಗಣನೆಯಲ್ಲಿ ಅದು ಸತ್ಯತೆಗೆ ಸರಿಹೊಂದದಿದ್ದರೆ ವಾಸ್ತವಿಕ ಸತ್ಯತೆ ಎನ್ನುತ್ತೇವೆ. ಆದರೆ ನಮ್ಮ ಅರಿವು ಪರಿಪೂರ್ಣತೆಯನ್ನು ಹೊಂದಿರುವುದಿಲ್ಲ. ಆದರೂ ನಾವು ಹೊಂದಿದ ಅರಿವು ಸತ್ಯವೇ. ಅರಿವಿನ ಅನಂತರದ ಬೆಳವಣಿಗೆ ಏನೇ ಆದರೂ ಸಹ ಅದರಿಂದ ಅಲ್ಲಗಳೆಯಲು ಸಾಧ್ಯವಿಲ್ಲದಂತಹ ಯಥಾರ್ಥತೆಯ ಸಾಪೇಕ್ಷ ಅಂಶ ಅರಿವಿನಲ್ಲಿ ಇದ್ದೇ ಇರುತ್ತದೆ. ಆದ್ದರಿಂದ ತತ್ತ್ವಜ್ಞಾನಿಗಳು ಹೇಳುವ ಹಾಗೆ ಪರಿಪೂರ್ಣ ಜ್ಞಾನದ, ಅಪರಿಮಿತ ಸತ್ಯದ ಒಂದು ತುಣುಕು ಅದರೊಳಗೆ ಸೇರಿರುತ್ತದೆ. ಪರಿಪೂರ್ಣ ಸತ್ಯತೆಯನ್ನು ಅನಂತತೆಯಲ್ಲಿ ಮಾತ್ರ ತಲುಪಲು ಸಾಧ್ಯವಿದೆ ಎಂದರೂ ಅರಿವಿಕೆಯ ಪ್ರತಿಕ್ರಿಯೆಯಲ್ಲಿ ಸಾಪೇಕ್ಷ ಸತ್ಯಗಳು ಸಂಗ್ರಹವಾಗುತ್ತದೆ. ಆದ್ದರಿಂದ ಅರಿವಿಕೆಯು ಜಗತ್ತಿನ ಇರುವಿಕೆಯನ್ನು ಗುರುತಿಸುವುದಿಲ್ಲ. ಪ್ರತಿಹಂತದಲ್ಲೂ ಕ್ರಿಯೆಯನ್ನು ಹೊಂದುತ್ತಾ ಜಗತ್ತಿನ ವಾಸ್ತವ ಸತ್ಯವನ್ನು ಮನನ ಮಾಡುವ ನೆಲೆಯಲ್ಲಿ ಅಮೂರ್ತ ಆಲೋಚನೆಯೆಡೆಗೂ ಅರಿವು ವಿಸ್ತರಿಸುತ್ತದೆ.

ಪ್ರಜ್ಞೆಗೆ ಪರ್ಯಾಯವಾಗಿ ಅರಿವು ಬಳಕೆಯಾಗುವ ಸಂದರ್ಭದಲ್ಲಿ ಭಿನ್ನ ವ್ಯಕ್ತಿಗಳಲ್ಲಿರುವ ಪ್ರಜ್ಞೆ ಅಥವಾ ಅರಿವು ಏಕರೂಪಿಯಾದುದಲ್ಲ. ಪ್ರತಿಯೊಬ್ಬನ ಅರಿವಿಗೂ ಅದರದೇ ಆದ ಸ್ವಂತಿಕೆ ಇದ್ದೇ ಇರುತ್ತದೆ. ಅದು ವ್ಯಕ್ತಿಗಳ ಆಸಕ್ತಿ, ಚಿಂತನೆ, ದೃಷ್ಟಿಕೋನದ ಹಿನ್ನೆಲೆಯಲ್ಲಿ ರೂಪುಗೊಳ್ಳುತ್ತದೆ.ಈ ಅರಿವು ಅಥವಾ ಪ್ರಜ್ಞೆಯ ಹಿಂದೆ ವೈಯಕ್ತಿಕ ನೆಲೆ ಕಾಣಿಸಿಕೊಳ್ಳುವಂತೆ, ಒಂದು ಸಾಮಾಜಿಕ ಪ್ರಜ್ಞೆಯು ಅಡಗಿರುತ್ತದೆ. ಹೀಗೆ ತತ್ತ್ವಜ್ಞಾನದಲ್ಲಿ ಅರಿವು ಮತ್ತು ಇರವು ಅನ್ನುವುದು ಪ್ರಜ್ಞೆ ಮತ್ತು ಅಸ್ತಿತ್ವ ಎಂಬ ನೆಲೆಯಲ್ಲಿ ಬಳಕೆಯಾಗಿದೆ. ಹಾಗಾಗಿ ಇರುವಿಕೆಯ ಅರಿವೇ ಪ್ರಜ್ಞೆ, ಕ್ರಿಯೆಯ ಮೂಲಕ ಅದು ಉದ್ಭವಿಸಿ ಬೆಳೆಯುತ್ತದೆ.

ಸ.ರಘುನಾಥ ಅವರು ಅದ್ವೈತದ ಕುರಿತು ಬರೆಯುತ್ತಾ ಬಸವಣ್ಣನವರ ವಚನಗಳಲ್ಲಿ ವಿಜ್ಞಾನವನ್ನು ಅರಿವಿನ ವಿಸ್ತರಣೆ[16] ಎನ್ನುತ್ತಾರೆ. ಅಲ್ಲಿ ಜ್ಞಾನ ಮತ್ತು ಅರಿವಿನ ನಡುವೆ ಸೂಕ್ಷ್ಮ ವ್ಯತ್ಯಾಸದ

ಎಳೆಯೊಂದನ್ನು ಗುರುತಿಸುತ್ತಾರೆ. 'ಜ್ಞಾನ' ಕ್ಕೆ 'ನಾನು ಎಷ್ಟೊಂದು ಬಲ್ಲೆ' ಎಂಬ ಹೆಮ್ಮೆ ಇರುತ್ತದೆ. ವಿವೇಕ (ಅರಿವು) ಕ್ಕೆ ನನಗೆ ತಿಳಿಯದಿರುವುದು ಎಷ್ಟೊಂದು ಇದೆ ಎಂಬ ನಮ್ರತೆ ಇರುತ್ತದೆ. ಅರಿವಿಗೆ ವಿನಯವಿದೆ. ಅಂದರೆ ಅರಿವಿನ ಸಂದರ್ಭದಲ್ಲಿ ಅಹಂನ ಅನುಪಸ್ಥಿತಿ ಇದೆ. ಪ್ರಾಮಾಣಿಕತೆ ಸಾರ್ಥಕ್ಯಭಾವ ವ್ಯಕ್ತವಾಗುತ್ತದೆ. ಅರಿವು ಅನ್ನುವುದು ಮೂಡಿದ ಮೇಲೆ ಅಹಂ ನಿರಶನಗೊಳುತ್ತದೆ. ವ್ಯಕ್ತಿತ್ವ ಪರಿಪೂರ್ಣಗೊಂಡು ಎಲ್ಲ ಮಿತಿಗಳಿಂದ ಮುಕ್ತವಾಗಿ ವಿಶಾಲ ವ್ಯಾಪ್ತಿಯ ಒಂದಂಶವಾಗಿ ಗೋಚರವಾಗುತ್ತದೆ. ಪುರಂದರದಾಸರು 'ಕನಕದಾಸರ ಮನೆಯ ಕಸ ಗುಡಿಸೋ ದಾಸ' ಎಂದಿರುವುದು, 'ಮನುಷ್ಯನೊಬ್ಬನೇ ಇಡೀ ಜಗತ್ತನ್ನೇ ಜಯಿಸಿದರೂ ತನ್ನ ಆತ್ಮವನ್ನು ನೀಗಿಕೊಂಡರೆ ಪ್ರಯೋಜನ ಏನು?' ಎಂಬ ಏಸುವಿನ ಮಾತು ಅರಿವಿನಿಂದ ಹುಟ್ಟಿಕೊಂಡದ್ದು. ಹೀಗೆ ವ್ಯಕ್ತಿಯೊಬ್ಬನ ವ್ಯಕ್ತಿತ್ವ ರೂಪುಗೊಳ್ಳುವುದು ಸಾಮಾಜಿಕ ಪ್ರಜ್ಞೆ ಮತ್ತು ಕ್ರಿಯೆಯ ಮೂಲಕ. ಅರಿವು ಅನ್ನುವುದು ಇವೆರಡರ ಮಧ್ಯೆ ನಿಲ್ಲುವಂತದ್ದು.

ರಾಮಮನೋಹರ ಲೋಹಿಯರವರು 'ಮೂರ್ತ ಮತ್ತು ಅಮೂರ್ತ' ವಸ್ತು ಸಂಗತಿಗಳ ಬಗ್ಗೆ ವಿಶ್ಲೇಷಿಸುತ್ತಾ ಹೆಚ್ಚು ತಿಳಿದ ಹಾಗೂ ನಾವು ತಿಳಿದಿಲ್ಲದಿರುವುದರ ಅರಿವು ಮತ್ತು ಮೊತ್ತವು ಹೆಚ್ಚುತ್ತಾ ಹೋಗುತ್ತದೆ ಎಂದರೆ ಜ್ಞಾನ ಎನ್ನುವುದು ನಮ್ಮ ಅಜ್ಞಾನದ ಅರಿವಷ್ಟೇ[17] ಎಂದು ಹೇಳುತ್ತಾರೆ. ನಾವು ಏನು ತಿಳಿದಿದ್ದೇವೆಯೋ ಎನ್ನುವುದರ ಬದಲಾಗಿ ತಿಳಿದಿಲ್ಲ ಎನ್ನುವುದರ ಎಚ್ಚರ ಅಥವಾ ಪ್ರಜ್ಞೆಯನ್ನು ಅರಿವು ಎನ್ನಬಹುದು. ಅದು ಇದ್ದಾಗ ಮಾತ್ರ ಒಬ್ಬ ವ್ಯಕ್ತಿಯಲ್ಲಿ ಅರಿವು ಮೂಡಲು ಸಾಧ್ಯ. ಏನೂ ಗೊತ್ತಿಲ್ಲ ಎನ್ನುವುದು ಸ್ಪಷ್ಟವಾದಾಗ ಏನು ಗೊತ್ತಿದೆ ಎಂಬುದು ಅರಿವಿನಲ್ಲಿ ಗೋಚರವಾಗುತ್ತದೆ. ತೇಜಸ್ವಿಯವರ ಮಾತಿನಂತೆ 'ಮನಸ್ಸು ಅರಿವಿನ ಹಾದಿಯಲ್ಲಿ ಮುಂದೊತ್ತಲೇ ಹೋಗುತ್ತದೆ. ತಿಳುವಳಿಕೆ, ಅರಿವು ಎಂದರೆ ಅವ್ಯವಸ್ಥೆಯಲ್ಲಿ ವ್ಯವಸ್ಥೆಯನ್ನು ಗುರುತಿಸುವುದೇ ಇರಬಹುದು......." ಅಂದರೆ ಮನಸ್ಸು ಅರಿವಿನ ಮಾರ್ಗದಲ್ಲಿ ಊರ್ಧ್ವಮುಖ ಚಲನೆಯ ಗತಿಯಲ್ಲಿ ಸಾಗುತ್ತಲೇ ಇರುತ್ತದೆ. ಅವ್ಯವಸ್ಥೆಯಲ್ಲಿ ವ್ಯವಸ್ಥೆಯನ್ನು ಎಂದಾಗ ಇರುವ ಸಮಗ್ರ ವಸ್ತುಸಂಗತಿಗಳಲ್ಲಿ ಪ್ರಮಾಣಬದ್ಧತೆಯನ್ನು, ಕ್ರಮಬದ್ಧತೆಯನ್ನು ಕಂಡುಕೊಳ್ಳುವುದು ತರ್ಕಬದ್ಧ ವಿಚಾರಗಳನ್ನು ತಿಳಿದುಕೊಳ್ಳುವುದೇ ಆಗಿರುತ್ತದೆ. ಆದ್ದರಿಂದ ಅರಿವು ಎನ್ನುವುದು ಎಲ್ಲವನ್ನು ತಿಳಿದುಕೊಳ್ಳುವುದು ಮಾತ್ರ ಆಗಿರದೆ ಒಂದಕ್ಕಿಂತ ಇನ್ನೊಂದು ವಿಶಿಷ್ಟವಾಗಿರುವುದನ್ನು ಗ್ರಹಿಸಿಕೊಳ್ಳುವ ಬಗೆಯೇ ಆಗಿದೆ.

ಕೊನೆ ಟಿಪ್ಪಣಿ

1. ಪ್ರೊ. ಎಲ್. ಎಸ್. ಶೇಷಗಿರಿರಾವ್ (ಸಂ): ಕನ್ನಡ –ಕನ್ನಡ –ಇಂಗ್ಲಿಷ್ ನಿಘಂಟು
2. Kittl's Kannada- English Dictionary. Vol: 1, 1968 –University of Madras.
3. A.S. Hornby : Oxford Advanced learner's Dictionary of current English. 1988.
4. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು : ಸಂಪುಟ ೧. ೧೯೭೦ ಪು. ಸಂ. ೫೪೧–೫೪೨
5. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು : ಸಂಪುಟ ೩ ಪು. ಸಂ. ೩೧೨೩
6. ಉದ್ಧೃತ: ಪ್ರಭುಶಂಕರ (ಅನು) : ಎಂ ಹಿರಿಯಣ್ಣ : ಭಾರತೀಯ ತತ್ತ್ವಶಾಸ್ತ್ರದ ರೂಪುರೇಖೆಗಳು: ಅಭಿನವ ಪ್ರಕಾಶನ ಬೆಂಗಳೂರು.೨೦೦೪ ಪು. ಸಂ. ೧೭೧
7. ಪ್ರಭುಶಂಕರ (ಅನು) : ಭಾರತೀಯ ತತ್ತ್ವಶಾಸ್ತ್ರದ ರೂಪುರೇಖೆಗಳು ಪು. ಸಂ. ೨೦೧
8. ಪ್ರಭುಶಂಕರ (ಅನು) : ಭಾರತೀಯ ತತ್ತ್ವಶಾಸ್ತ್ರದ ರೂಪುರೇಖೆಗಳು ಪು. ಸಂ. ೨೦೧
9. ಉದ್ಧೃತ : . ವಿ. ಕಕ್ಕಿಲ್ಲಾಯ (ಅನು) : ಇರವು ಮತ್ತು ಅರಿವು ಪು. ಸಂ. ೨೯
10. ಉದ್ಧೃತ : ಬಿ.ವಿ. ಕಕ್ಕಿಲ್ಲಾಯ (ಅನು) : ಇರವು ಮತ್ತು ಅರಿವು ಪು. ಸಂ. ೧೦
11. ಉದ್ಧೃತ : ಬಿ.ವಿ. ಕಕ್ಕಿಲ್ಲಾಯ (ಅನು) : ಇರವು ಮತ್ತು ಅರಿವು ಪು. ಸಂ. ೧೦
12. ಉದ್ಧೃತ : ಬಿ.ವಿ. ಕಕ್ಕಿಲ್ಲಾಯ (ಅನು) : ಇರವು ಮತ್ತು ಅರಿವು
13. ಉದ್ಧೃತ : ಬಿ.ವಿ. ಕಕ್ಕಿಲ್ಲಾಯ (ಅನು) : ಇರವು ಮತ್ತು ಅರಿವು
14. ಉದ್ಧೃತ : ಬಿ. ವಿ. ಕಕ್ಕಿಲ್ಲಾಯ (ಅನು) : ಇರವು ಮತ್ತು ಅರಿವು ಪು. ಸಂ. ೨೫
15. ಉದ್ಧೃತ : ಬಿ. ವಿ. ಕಕ್ಕಿಲ್ಲಾಯ (ಅನು) : ಇರವು ಮತ್ತು ಅರಿವು ಪು. ಸಂ. ೨೫
16. ಸ. ರಘುನಾಥ –ಲೇಖನ _ ಉದಯವಾಣಿ ದಿನಪತ್ರಿಕೆ, ದಿನಾಂಕ 22.03.09
17. ಉದ್ಧೃತ: ಮುನ್ನುಡಿಯಿಂದ– ಕೆ. ಪಿ. ಪೂರ್ಣಚಂದ್ರ ತೇಜಸ್ವಿ ಜೀವನ ಸಂಗ್ರಾಮ ಮಿಲೆನಿಯಮ್–೨

ಅಧ್ಯಾಯ : ೩

'ಅರಿವು'–'ಜ್ಞಾನ' ಚಿಂತನೆಯ ನೆಲೆಗಳು

೩.೧ 'ಅರಿವು'–'ಜ್ಞಾನ' ಪರಿಕಲ್ಪನೆ

೩.೨ ವಚನಕಾರರಲ್ಲಿ 'ಅರಿವಿನ ಚಿಂತನೆಗಳು'

೩.೧ ಅರಿವು-ಜ್ಞಾನ ಪರಿಕಲ್ಪನೆ

ಭಾರತೀಯ ದರ್ಶನ ಶಾಸ್ತ್ರದಲ್ಲಿ ಜ್ಞಾನಕ್ಕೆ ಮಿಗಿಲಾದ ಸ್ಥಾನವಿದೆ. ಆಧ್ಯಾತ್ಮ ಸಿದ್ಧಿಗೆ, ಮೋಕ್ಷಕ್ಕೆ ಜ್ಞಾನವು ಮುಖ್ಯವಾಗಿದೆ. ಇಲ್ಲಿ ಜ್ಞಾನವೆಂದರೆ ತತ್ತ್ವಜ್ಞಾನವೆಂದು ತಾತ್ಪರ್ಯ. ಮೂಲತಃ ಉಪನಿಷತ್ತುಗಳಲ್ಲಿ ಹೇಳಿದಂತೆ ಆಧ್ಯಾತ್ಮಿಕ ತತ್ತ್ವಗಳ ಅನುಸಂಧಾನವೆಂದು ಜ್ಞಾನವನ್ನು ಅರ್ಥೈಸಿ ಕೊಳ್ಳಲಾಗಿದೆ. ವಿಸ್ತೃತ ನೆಲೆಯಲ್ಲಿ ವಿಶ್ಲೇಷಿದಾಗ ದರ್ಶನ ಮಾರ್ಗದ ಜ್ಞಾನವನ್ನು ಮನಸ್ಸು ಬುದ್ಧಿಗಳ ಮೂಲಕ ತಿಳಿದು, ಸತತವಾಗಿ ಅದನ್ನು ಮನನ ಮಾಡಿ, ಜ್ಞಾನವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಜ್ಞಾನಮಾರ್ಗ. ಕರ್ಮವಾದಿಗಳ ಪ್ರಕಾರ ಬರಿಯ ಜ್ಞಾನದಿಂದ ಏನೂ ಸಾಧಿತವಾಗುವುದಿಲ್ಲ. ಜ್ಞಾನವೆಂಬುದು ಕರ್ಮದ ನೆಲೆಯಲ್ಲಿ ಪೂರಕ ಮಾತ್ರ, ಆದರೆ ಜ್ಞಾನವಾದಿಗಳ ನೆಲೆಯಲ್ಲಿ ಜ್ಞಾನವೇ ಪ್ರಧಾನ. ಹೀಗೆ ಕರ್ಮ ಮತ್ತು ಜ್ಞಾನ ಸಮಾಜದಲ್ಲಿ ಭೌತಿಕ ಶ್ರಮ ಮತ್ತು ಬೌದ್ಧಿಕತೆಯ ನೆಲೆಯಲ್ಲಿ ಅಸ್ತಿತ್ವ ಪಡೆದುಕೊಂಡಿವೆ. ಆರಂಭದಲ್ಲಿ ಕರ್ಮ, ಜ್ಞಾನಗಳ ನಡುವೆ ವ್ಯತ್ಯಾಸವಿರಲಿಲ್ಲ, ಕ್ರಮೇಣ ಕೆಲಸಗಳ ವಿಭಜನೆ ನಡೆದಂತೆ ಕರ್ಮಜೀವಿಗಳ ಮತ್ತು ಜ್ಞಾನಿಗಳ ವರ್ಗ ಬೇರೆಯೇ ಆಗಿ ಜ್ಞಾನವೇ ಶ್ರೇಷ್ಠವೆಂಬ ಪ್ರಜ್ಞೆ ಬೆಳೆದು ಬಂದಿತು.

ಹೀಗೆ ಜ್ಞಾನವನ್ನು ಕುರಿತ ಜಿಜ್ಞಾಸೆಗೆ ಪ್ರಾಚೀನ ಪರಂಪರೆಯಿದೆ. ವೇದ ಉಪನಿಷತ್ತುಗಳಲ್ಲಿ ಜ್ಞಾನದ ಮಹತ್ವವನ್ನು ಎತ್ತಿಹಿಡಿದಿರುವುದು. ಕರ್ಮಮಾರ್ಗವನ್ನು ಟೀಕಿಸಿರುವುದು ಕಂಡುಬರುತ್ತದೆ. ಪ್ರಾಪಂಚಿಕ ಸಮಸ್ಯೆಗಳಿಗೆ ಜ್ಞಾನವು ಒದಗಿಸುವ ಪರಿಹಾರವೇ ಶ್ರೇಷ್ಠವಾದುದು, ಮೋಕ್ಷಕ್ಕೆ ದಾರಿಯಾಗುತ್ತದೆ ಎಂದು ತನ್ನ ಹಿರಿಮೆಯನ್ನು ಬೆಳೆಸಿಕೊಂಡೇ ಬಂದಿದೆ. ವೇದ, ಉಪನಿಷತ್ತುಗಳು ಜ್ಞಾನದ ಅತ್ಯುತ್ತಮ ಪ್ರತಿನಿಧಿಗಳು. ಶಂಕರಾಚಾರ್ಯರ ಪ್ರಕಾರ ಜ್ಞಾನವು ಪ್ರಮಾಣಗಳಿಂದ ಹುಟ್ಟಿ ವಸ್ತುವಿನ ಯಥಾರ್ಥ ಸ್ವರೂಪವನ್ನು ತಿಳಿಸಿಕೊಡುತ್ತದೆ. ಅದು ಕ್ರಿಯಾವರ್ಗಕ್ಕೆ ಸೇರುವಂಥದ್ದಲ್ಲ. ಅದರ ಮಾರ್ಗವೇ ಜ್ಞಾನ. ಜ್ಞಾನ ಮೀಮಾಂಸೆಯಲ್ಲಿ ಪ್ರತ್ಯಕ್ಷವಾದುದನ್ನು ಪ್ರಮಾಣವೆಂದು ಸ್ವೀಕರಿಸುತ್ತಾರೆ.

ಮೀಮಾಂಸದರ್ಶನದಲ್ಲಿ ಜ್ಞಾನವೊಂದರ ಉದಯಕ್ಕೆ ಕಾರಣಸಾಮಗ್ರಿಗಳು ಅವಶ್ಯಕವೆನ್ನಲಾಗಿದೆ. ದೋಷರಹಿತವಾದ ವಸ್ತುಸಾಮಗ್ರಿಗಳಿಂದ ಹುಟ್ಟುವ ಜ್ಞಾನವು ಯಥಾರ್ಥವಾಗಿರುತ್ತದೆ. ಜ್ಞಾನವು ಕ್ರಿಯೆಗೆ ಕಾರಣವಾಗುತ್ತದೆ. ಜ್ಞಾನವೂ ಪ್ರಾಮಾಣಿಕವಾಗಿದ್ದು ಅದು ಭೌತಿಕ ವಸ್ತುಗಳಿಂದ ಉಂಟಾಗುವುದಿಲ್ಲ. ಅದು ಜ್ಞಾನಕ್ಕೆ ಕಾರಣವಾದ ವಸ್ತುಗಳ ಜತೆಗೆ ಉದ್ಭವಿಸುತ್ತದೆ. ಜ್ಞಾನವೆಲ್ಲವೂ ಸತ್ಯವಾದುದೆಂದು ಮೀಮಾಂಸಕರ ದೃಷ್ಟಿ. ಜ್ಞಾನದ ಸತ್ಯತೆಯು ಸ್ವತಃ ಸಿದ್ಧವಾಗಿದ್ದರೂ, ಕೆಲವೊಮ್ಮೆ ಭ್ರಮಾತ್ಮಕ ಜ್ಞಾನವೊದಗುತ್ತದೆ. ತಾರ್ಕಿಕ ದೃಷ್ಟಿಯಿಂದ ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಜ್ಞಾನ ಮತ್ತು ಜ್ಞಾನವನ್ನು ಹೊಂದುವ ಆತ್ಮದ ಸ್ವರೂಪವನ್ನು ಗಮನಿಸಿದಾಗ ಆತ್ಮವೆಂಬುದು ಜ್ಞಾನಸ್ವರೂಪಿಯಲ್ಲ. ಜ್ಞಾನವು ಆತ್ಮದ ಕ್ರಿಯೆಯಾಗಿದೆ.

ಪ್ರಮಾಣ ಮೀಮಾಂಸೆಯ ಪ್ರಕಾರ ಪ್ರಮಾಣವು ಜ್ಞಾನದ ಸಾಧನ.[1] ಹಾಗೆಯೇ ಜ್ಞಾನವನ್ನು ಬುದ್ಧಿ, ಅನುಭವ ಎಂದು ಗುರುತಿಸುತ್ತಾರೆ. ಜ್ಞಾನವನ್ನು ಸ್ಮೃತಿ ಮತ್ತು ಅನುಭವ ಎಂದು ಗುರುತಿಸಿಕೊಳ್ಳಲಾಗಿದೆ. ಜ್ಞಾನವಿಲ್ಲದೆ ವಸ್ತುಗಳನ್ನು ತಿಳಿಯಲು ಸಾಧ್ಯವಿಲ್ಲ. ಅಂತೆಯೇ ಜ್ಞಾನಕ್ಕಿಂತ ಬೇರೆಯಾಗಿ ವಸ್ತುವಿಗೆ ಅಸ್ತಿತ್ವವಿಲ್ಲ. ಹೀಗೆ ದರ್ಶನ ಅಥವಾ ತತ್ತ್ವಶಾಸ್ತ್ರದಲ್ಲಿ ಅವುಗಳನ್ನು ಜ್ಞಾನದ ಶಾಖೆಗಳೆಂದು ಗುರುತಿಸಲಾಗಿದೆ. ಇಲ್ಲಿ ಇರವು-ಅರಿವಿನ ವಿಚಾರಕ್ಕೆ ಬಂದಾಗ ಅದನ್ನು ಜ್ಞಾನಮೀಮಾಂಸೆಯೆಂದೇ ಗುರುತಿಸಿದ್ದಾರೆ. ಇದರ ಪ್ರಕಾರ ಜ್ಞಾನ ಎಂದರೆ ಅಸ್ತಿತ್ವದಲ್ಲಿ ಇರುವ ಎಲ್ಲವನ್ನೂ ಹಾಗೂ ಅಸ್ತಿತ್ವದಲ್ಲಿ ಇಲ್ಲದಿರುವುದನ್ನು ವಿವರಿಸುವ ಸಾಮರ್ಥ್ಯವೆ ಜ್ಞಾನ ಎಂದು ಹೇಳಲಾಗಿದೆ. ಅಸ್ತಿತ್ವದಲ್ಲಿ ಇರುವವುಗಳು ಯಾಕೆ ಅಸ್ತಿತ್ವದಲ್ಲಿ ಇವೆ? ಅವು ಏನು? ಇಲ್ಲದವುಗಳು ಏಕೆ ಇಲ್ಲ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವೇ ಜ್ಞಾನ.

ಅರಿವು ಅಥವಾ ಜ್ಞಾನ ಎಂದರೇನು? ಅದರ ಸ್ವರೂಪವೇನು? ಪಡೆಯುವ ಬಗೆ ಹೇಗೆ? ಅರಿವನ್ನು ಪ್ರಭಾವಿಸುವ ಸ್ವರೂಪವನ್ನು ನಿರ್ಧರಿಸುವ ಸಂಗತಿಗಳು ಯಾವುವು? ಇವೆಲ್ಲ ಅರಿವು, ಜ್ಞಾನದ ಕುರಿತಾಗಿ ಎದುರಾಗುವ ಪ್ರಶ್ನೆಗಳು. ಇಲ್ಲಿಯವರೆಗೆ ಜ್ಞಾನದ ನೆಲೆಯನ್ನು ಭಾರತೀಯ ತತ್ತ್ವಶಾಸ್ತ್ರ ಚಿಂತನೆಯಲ್ಲಿ ಗಮನಿಸಿದ್ದೇವೆ. ಈಗ ನಮ್ಮ ಮುಂದಿರುವ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ. ಮೊದಲಿಗೆ ಅರಿವು ಮತ್ತು ಜ್ಞಾನ ಒಂದೇ ಅರ್ಥದ ಪದಗಳೆ. ಅಥವಾ ಸಂವಾದಿ ಪದಗಳೇ ಎಂಬುದನ್ನು ಗಮನಿಸಬೇಕು. ಮೇಲ್ನೋಟಕ್ಕೆ ಎರಡೂ ಒಂದೇ ನೆಲೆಯದ್ದು ಅನ್ನಿಸಿದರೂ, ಸೂಕ್ಷ್ಮವಾಗಿ ಅವಲೋಕಿಸಿದಾಗ ಅವುಗಳ ಅರ್ಥದ ನೆಲೆ ಭಿನ್ನವಾಗಿರುವುದು ಅರಿವಿಗೆ ಬರುತ್ತದೆ. ತತ್ತ್ವಶಾಸ್ತ್ರವು ಜ್ಞಾನದ ಕುರಿತು ಹೇಳಿದರೆ ಅನುಭಾವಶಾಸ್ತ್ರಕ್ಕೆ ಅರಿವಿನ ಚಿಂತನೆ ಮುಖ್ಯವಾಗುತ್ತದೆ. ಜ್ಞಾನ ಎನ್ನುವ ಪದಕ್ಕೆ ಸಾಮಾನ್ಯಾರ್ಥದ ಬಳಕೆಯಿಂದ ವಿಶಿಷ್ಟಾರ್ಥದ ಬಳಕೆಯವರೆಗೂ ಅರ್ಥಗಳುಂಟು. ಆದರೆ 'ಅರಿವಿ'ಗೆ ಸಂಬಂಧಿಸಿ ಇದನ್ನು ಹೇಳಲು ಸಾಧ್ಯವಿಲ್ಲ. ಭಾರತೀಯ ಹಾಗೂ ಪಾಶ್ಚಿಮಾತ್ಯ ತತ್ತ್ವಜ್ಞಾನ ಹಾಗೂ ಸಂಬಂಧಿ ಶಾಸ್ತ್ರಗಳಲ್ಲಿ 'ಜ್ಞಾನ' ದ ಬಳಕೆ ಇದೆ. 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮಂ' 'ನಹಿ' ಜ್ಞಾನೇನ ಸದೃಶಂ' ಎಂಬ ಮಾತುಗಳು ಆಯಾಯ ಶಾಸ್ತ್ರ ವಿಚಾರದ ಬೆಳಕಿನಲ್ಲಿ ಭಿನ್ನ ಅರ್ಥದ ಪದರುಗಳನ್ನು ಹೊಂದಿದೆ.

'ಅರಿವು' ಎಂಬ ಮಾತನ್ನು 'ಜ್ಞಾನ' ಎಂಬ ಹಾಗೆ ಬಳಸಲು ಸಾಧ್ಯವಿಲ್ಲ. ವಚನಕಾರ ಅಲ್ಲಮನ 'ಅರಿವೇ ಗುರು 'ಅರಿವಿನೊಳಗಿನ ಇರವು' ಎಂಬ ನುಡಿಗಳನ್ನು ಕೇಳಿದಾಗ ಜ್ಞಾನ ಎಂಬುದು ಬಹಿರ್‌ಮುಖದ ವ್ಯಾಪಾರವಾಗಿದ್ದರೆ 'ಅರಿವು' ಅಂತರ್‌ಮುಖೀ ವ್ಯಾಪಾರದ ನೆಲೆಗಳನ್ನು ಆಶ್ರಯಿಸಿದೆ. 'ಜ್ಞಾನ' ಎಂಬ ಮಾತು ಭಾರತೀಯವಾಗಿದ್ದರೆ 'ಅರಿವೆ ಇಂದು' ದೇಸಿ ಚಿಂತನೆಯ ವಿಶಿಷ್ಟಾರ್ಥದ ಬಳಕೆಯಾಗಿದೆ. ಜ್ಞಾನವೆಂಬುದು ತಿಳುವಳಿಕೆಯ ಭಾಗವಾಗಿ ಪ್ರತ್ಯಕ್ಷವಾದರೆ ಅರಿವೆಂಬುದು

ಅನುಭವವೇದ್ಯವಾದ ಅಪ್ರತ್ಯಕ್ಷವಾದ ತಿಳಿವು. ಅಲ್ಲಮ ಮೊದಲಾಗಿ ಎಲ್ಲ ವಚನಕಾರರು 'ಜ್ಞಾನ' 'ಅರಿವು' ಎರಡರ ಕುರಿತು ಸಾಕಷ್ಟು ಮಾತುಗಳನ್ನು ಆಡಿದ್ದಾರೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂಬಂತೆ ಜ್ಞಾನಕ್ಕೆ ಅಜ್ಞಾನದ ಹಂಗಿನ ಭಯವಿದೆ. ಆದರೆ ಅರಿವಿಗೆ ಈ ಬಗೆಯ ಹಂಗಿಲ್ಲ. ಹಂಗು ತೊರೆದ ಪರಿಯೇ ಅರಿವು. ಅರಿವೆಂಬುದು ಒಂದು ಅಂತರ್‌ಘಟನೆ. ಅದು ಬೌದ್ಧಿಕತೆಗೂ, ತರ್ಕಕ್ಕೂ ದೊರೆಯುವ ವಿಚಾರವಲ್ಲ. ಜ್ಞಾನಕ್ಕೆ ತರ್ಕದ ಬೌದ್ಧಿಕತೆಯ ಸಂಬಂಧವಿರುತ್ತದೆ. ಜ್ಞಾನವು ಲೋಕ ಸಂಬಂಧಿಯಾದರೆ 'ಅರಿವು' ಪ್ರತಿಯೊಬ್ಬನ ಒಳಗಿನ ಸ್ಪಂದನವಾಗಿದೆ.

'ಅರಿವು' ಕನ್ನಡ ಪದ. 'ಜ್ಞಾನ' ಎಂಬುದು 'ಸಂಸ್ಕೃತ' ದ ಪದ. ಅರಿವಿನೊಳಗೆ ದೇಸಿ ತಿಳುವಳಿಕೆಯಿದ್ದರೆ ಜ್ಞಾನದೊಳಗೆ ಲೋಕದ ತಿಳುವಳಿಕೆ ಅಡಗಿದೆ. ಜ್ಞಾನದ ನೆಲೆಯನ್ನು ಸ್ವಕೀಯವಾದ, ಪರಾರ್ಥದ ಹಾಗೆಯೇ ಸ್ವೀಕೃತ ಜ್ಞಾನಗಳೆಂದು ವಿಂಗಡಿಸಿಕೊಳ್ಳಬಹುದು. ಇಲ್ಲಿ ಸ್ವೀಕೃತ ಜ್ಞಾನವೇ ಇಂದಿನ ಅನಿವಾರ್ಯತೆ ಆಗಿದೆ. ಸ್ವಕೀಯವಾದ ಜ್ಞಾನಪರಂಪರೆಯನ್ನು ಅರಿಯುತ್ತಲೇ ಪರಾರ್ಥದ ಜ್ಞಾನಕ್ಕೆ ಒಡ್ಡಿಕೊಂಡು ಅಂತಿಮವಾಗಿ ಅವೆರಡರ ನಡುವಿನ ಸ್ವೀಕೃತ ಜ್ಞಾನಮಾರ್ಗದಲ್ಲಿ ಸಾಗಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ.

ಜ್ಞಾನವೆಂದರೆ ಏಕಕಾಲದಲ್ಲಿ ಕತ್ತಲು ಇರಬಹುದು, ಬೆಳಕು ಆಗಬಹುದು. ಆದರೆ ಅರಿವಿಗೆ ಕತ್ತಲಿನ ಹಂಗಿಲ್ಲ. ಬೆಳಕು ಮೂಡಿದ ಮೇಲೆ ಮಾತ್ರ 'ಅರಿವು' ಹೊಂದಬಹುದು. ಇಂದ್ರಿಯ ಗೋಚರವಾದ ಜ್ಞಾನವನ್ನು ಅರಿವು ಎನ್ನುವಂತಿಲ್ಲ. ದೇಹ–ಜೀವ ಭಾವಗಳಲ್ಲಿರುವ 'ಜ್ಞಾನ' ತಿಳಿದ ತಕ್ಷಣ ಅಲ್ಲಿ 'ಆತ್ಮಭಾವ' ನೆಲೆಗೊಳ್ಳುತ್ತದೆ. ಇದರಿಂದ ಮುಕ್ತನಾದಾಗ ದ್ವೈತಭಾವ ನಾಶವಾಗಿ ಅದ್ವೈತ ನೆಲೆಗೊಳ್ಳುತ್ತದೆ. ಅದೇ 'ಅರಿವಿ' ನ ನೆಲೆ. 'ಅರಿವು' ಮೊದಲು ಜ್ಞಾನದ ಹಂತದಲ್ಲಿರುತ್ತದೆ. 'ಜ್ಞಾನವು' ದ್ವೈತಭಾವದಲ್ಲಿ ಉದಿಸಿದರೆ 'ಅರಿವು' ಅದ್ವೈತದಲ್ಲಿ ಗೋಚರವಾಗುತ್ತದೆ. ಹೀಗೆ ಅರಿವು ಹಾಗೂ ಜ್ಞಾನ ಪರಿಕಲ್ಪನೆಗಳ ಭಿನ್ನ ಚಿಂತನೆಗಳು ಬೆಳೆದು ಬಂದಿವೆ.

೩.೨ ವಚನಕಾರರಲ್ಲಿ 'ಅರಿವಿನ ಚಿಂತನೆಗಳು'

ಭಾರತದ ಸಂಸ್ಕೃತಿ ಅನನ್ಯತೆಗಳ ಬಹುಮುಖ ನೆಲೆಗಟ್ಟಿನಲ್ಲಿ ಪರಿಕಲ್ಪನೆಗಳು ಸಿದ್ಧಾಂತಗಳು ಪಾರಂಪರಿಕ ಹಾಗೂ ದೇಸಿ ಚಿಂತನಾ ಕ್ರಮಗಳಲ್ಲಿ ಬೆಳೆದು ಬಂದಿವೆ. ಭಾರತೀಯ ತತ್ವಶಾಸ್ತ್ರ ಜ್ಞಾನಸಂಬಂಧಿ ನೆಲೆಗಳಲ್ಲಿ ಬೆಳೆದುಬಂದರೆ, ದೇಸಿ ಚಿಂತನಾ ಕ್ರಮ ಅರಿವಿನ ನೆಲೆಯಲ್ಲಿ ರೂಪುಗೊಂಡಿದೆ. ಪರಂಪರೆಯಲ್ಲಿ ಒಂದು ವಿಭಿನ್ನ ಪಾರಂಪರಿಕ ಚಿಂತನಾ ಕ್ರಮಕ್ಕೆ ಎದುರಾಗಿ ತಮ್ಮದೇ ದೇಸಿ, ಚಿಂತನೆ, ವಿಚಾರಗಳನ್ನು ಮಹಾನುಭಾವರಲ್ಲಿ, ಹನ್ನೆರಡನೆಯ ಶತಮಾನದ ಸಾಹಿತ್ಯ ಕ್ರಾಂತಿಯ ಹರಿಕಾರವನ್ನು ಗುರುತಿಸುತ್ತೇವೆ. ಪಾರಂಪರಿಕವಾದ ಎಲ್ಲಾ ಧೋರಣೆಗಳಿಗೆ ಪರ್ಯಾಯವಾಗಿ ಭಾಷೆ,

ಚಿಂತನೆ, ವಸ್ತು ಶೈಲಿ, ಮನೋಧರ್ಮ, ಅಭಿವ್ಯಕ್ತಿ ಹೀಗೆ ವಾಙ್ಮಯದ ಅಖಂಡತೆಯಲ್ಲಿ ದೇಸಿಯನ್ನು ಪ್ರತಿಪಾದಿಸಿದ್ದಾರೆ. ಈ ಬಗೆಯ ಸ್ವತಂತ್ರ ಮನೋವೃತ್ತಿಯಲ್ಲಿ ವಚನಕಾರರ ಚಿಂತನಾಕ್ರಮಗಳು ಅಸ್ತಿತ್ವ ಪಡೆಯುತ್ತವೆ.

೧೨ನೇ ಶತಮಾನದಲ್ಲಿ ರೂಪುಗೊಂಡ ವಚನಸಾಹಿತ್ಯ ಈಗಾಗಲೇ ರೂಪುಗೊಂಡ ಪರಿಕಲ್ಪನೆಗಳನ್ನು ದೇಸಿ ಚಿಂತನಾ ಕ್ರಮದ ಅನುಭಾವಶಾಸ್ತ್ರದ ನೆಲೆಯಲ್ಲಿ ಪುನರ್‌ನಿರ್ವಹಿಸಿ ಕೊಂಡಿದ್ದಾರೆ. ಅವುಗಳಲ್ಲಿ 'ಅರಿವು' ಪರಿಕಲ್ಪನೆ ಪ್ರಧಾನವಾದದು. ವಚನಸಾಹಿತ್ಯ ಚಳುವಳಿ ಎಲ್ಲರೂ ಒಂದೇ ಸಮಾನರು ಎಂಬ ತಾತ್ವಿಕ ಭಿತ್ತಿಯಿಂದ ರೂಪುಗೊಂಡದ್ದಲ್ಲ. ಶಿವಭಕ್ತರೆಲ್ಲ ಒಂದು, ಶಿವಭಕ್ತರಿಲ್ಲದ ಭವಿಗಳೆಲ್ಲ ಒಂದು, ಶಿವಭಕ್ತರು ಹುಟ್ಟಿನಿಂದ ನಿರ್ಧರಿಸಲ್ಪಟ್ಟವರಲ್ಲ. ಲಿಂಗಾಯುತರೆಂದರೆ ಕೇವಲ ಲಿಂಗದ ಮೇಲೆ ಲಿಂಗ ಧರಿಸಿದವರಲ್ಲ, ಭಕ್ತಿಯನ್ನು ಅರ್ಥಾತ್ ಪ್ರೀತಿಯನ್ನು ಗುರು,ಲಿಂಗ, ಜಂಗಮಕ್ಕೆ ತೋರುವರು. ಗುರು ಎಂದರೆ ಅರಿವು. ಲಿಂಗ ಎಂದರೆ ವಿಶ್ವ, ಜಂಗಮವೆಂದರೆ ಸಮಾಜ. ಇದು ವಚನ ಚಳುವಳಿಯ ಸಾಮಾಜಿಕ ಸಂಹಿತೆ.

ದಾಸಿಮಯ್ಯನ ವಚನದಲ್ಲಿ ಅಂಗ ಲಿಂಗಗಳು ಒಂದಾಗುವ ಪರಿಯನ್ನು ಈ ರೀತಿ ವಿವರಿಸಿದ್ದಾರೆ:

ಒಳಗರಿದ ಭಕ್ತನ ಒಳಗಾದ ಲಿಂಗವು
ಒಳಗಾದ ಲಿಂಗದೊಳಗಾದ ಭಕ್ತನ

ಎಂಬ ವಚನದಲ್ಲಿ ಒಳಗಾದ ಭಕ್ತ ತನ್ನ ಒಳಗನ್ನು ಅರಿತಾಗ ಅಂದರೆ ಲಿಂಗವನ್ನು ಸೇರುವ ಸಾಧನ 'ಅರಿವು ಹಸಿವಿಂದ ಬೊಂಬೆಗೆ..........' ಎಂಬಲ್ಲಿ ಐಕ್ಯದ ಅನುಭಾವವು ಅರಿವಿನ ಎತ್ತರದ ನೆಲೆಯಲ್ಲಿ ಇರುವುದು ಕಂಡುಬರುತ್ತದೆ. ಐಕ್ಯನೆಂದರೆ ನಾನು ನೀನು ಎಂಬ ಭೇದ ಇಲ್ಲವಾಗಿಸುವುದು.

ಘಟವನೊಡೆದು ಬಯಲ............
ಘಟದೊಳಗಿಪ್ಪುದೆ ಬಯಲೆಂದರಿದಡೆ ಸಾಲದೇ ।
....
....
....
....
ತನ್ನನಳಿದು ಘನವ ನೋಡಲದೇಕೆ।
ತಾನೇ ಘನವೆಂದರಿದಡೆ ಸಾಲದೆ।"

ಎಂದು ಪ್ರಶ್ನಿಸುವ ದಾಸಿಮಯ್ಯ ಒಡಲಿನ ವ್ಯಾಮೋಹವನ್ನು ಅಳಿದು, ಕಾಯದ ಮೂಲಕ ಘನವನ್ನು ಕಂಡುಕೊಳ್ಳುವುದಕ್ಕಿಂತ ತಾನೇ ಘನ ಎಂಬ ಅರಿವು ಕಾಣಿಸುತ್ತಾನೆ. ಇಲ್ಲಿ ತಾನು ಎಂದರೆ

ಒಡಲು ಸೇರಿದ ಅಂತರಾತ್ಮ. ದೇಹವೇ ದೇವಾಲಯವೆಂಬ ಬಸವಣ್ಣನ ಚಿಂತನೆ ದಾಸಿಮಯ್ಯನಲ್ಲಿ 'ತಾನೇ ಘನ' ಎಂಬ ಅರಿವಿನಲ್ಲಿ ವಿಕಾಸ ಹೊಂದಿದೆ.

ಮಾದಾರ ಚೆನ್ನಯ್ಯ: ಮಾದಾರ ಚೆನ್ನಯ್ಯ "ಶುಕ್ಲ ಶೋಣಿತ ಮಜ್ಜೆ ಮಾಂಸ.................ತೋರುವ ತೋರಿಕೆ ಅರಿವಾತ್ಮವೊಂದೆ ಭೇದ. ಆವ ಕುಲವಾದರೂ ಅರಿದಲ್ಲಿಯೇ ಪರತತ್ವಭಾವ ಮರೆದಲ್ಲಿಯೇ ಮಲಮಾಯಾ ಸಂಬಂಧಿ ಇಂತಿ ಉಭಯವನರಿದು ಮರೆಯಲಿಲ್ಲ" ಎಂದು ಈ ವಚನದಲ್ಲಿ ಜಾತಿವ್ಯವಸ್ಥೆಯ ನಿರಾಕರಣೆಯನ್ನು ಮಾಡುತ್ತಾ ಕಾಯಕ ಭಿನ್ನತೆಯಿದ್ದರೂ 'ಅರಿವಾತ್ಮ' ಒಂದೇ ಎಂದು ಬಾಹ್ಯದ ಕುಲಾಚಾರಕ್ಕಿಂತ ಅಂತರಂಗದ 'ಅರಿವಿ' ನ ಮಹತ್ವವನ್ನು ಹೇಳಿದ್ದಾನೆ. ಅರಿದಲ್ಲಿಯೇ ಪರತತ್ತ್ವಭಾವಿ ಎಂದು 'ಅರಿವು' ಆತ್ಮದ ಅನುಸಂಧಾನ ಎಂದು ಹೇಳಿದ್ದಾನೆ. ಅರಿಯಬೇಕು, ಅರಿತು ಮರೆಯದಂತಿರಬೇಕೆಂದು ವಿಶ್ಲೇಷಿಸು. "ಸಂಖ್ಯಾ ಶ್ವಪಚ, ಅಗಸ್ತ್ಯ............ಇಂತೀ ಸಪ್ತಋಷಿಗಳೆಲ್ಲರೂ ಅಸತ್ಯದಿಂದ ಮುಕ್ತರಾದುದನರಿಯದೆ ...." ಎಂದಿದ್ದಾನೆ. ಕುಲ ಮೂಲಗಳೇ ಪ್ರಧಾನವೆಂದು ಅರಿಯದೆ ವರ್ತಿಸುವುದು ಸರಿಯಲ್ಲ. ಅಸತ್ಯದಿಂದ ಮುಕ್ತರಾಗಿ ಅರಿವಿನ ಮೂಲಕ ಸತ್ಯದೆಡೆಗೆ ನಡೆಯಬೇಕು ಎನ್ನುತ್ತಾನೆ.

ಡೋಹಾರ ಕಕ್ಕಯ್ಯ: "ಎನ್ನ ಕಷ್ಟಕುಲದಲ್ಲಿ ಹುಟ್ಟಿದೆನೆಂಬ ಕುಟುಂಬ ಕಳೆದು ....ಎನ್ನ ಮನದಲ್ಲಿ ಜಂಗಮದ ನೆಲೆಗಳನ್ನು ಎನ್ನ ಅರುಹಿನಲ್ಲಿ ನೆಲೆಗೊಳಿಸಿದ ....ಅಭಿನವ ಮಲ್ಲಿಕಾರ್ಜುನ" ಇಲ್ಲಿ ತನ್ನ ಮನದಲ್ಲಿ 'ಅರುಹು' ತಿಳುವಳಿಕೆ, ಜ್ಞಾನವನ್ನು ನೆಲೆಗೊಳಿಸಿ ಎಂದಿದ್ದಾನೆ.

ಚೆನ್ನಬಸವಣ್ಣ: "ಸಂಕರ ಸಂಕರವೆಂದು ಸಹಜವರಿಯದೆ

ನುಡಿವ ....

ಸಂಕರವಾವುದೇವರಿಯರಾಗಿ............

ಇಲ್ಲಿ, 'ಸಹಜವರಿಯದೆ' 'ಸಂಕರವಾದುದೆಂದರಿಯರಾಗಿ' ಎಂಬಲ್ಲಿ ಜಾತಿ ಸಂಕರವನ್ನು ಒಪ್ಪಿಕೊಳ್ಳಬೇಕು. ಇದಲ್ಲಾ ವಿರೋಧವಾಗಿ ಧ್ಯಾನಕ್ಕೆ ಸಮಾನ ಎನ್ನುವಲ್ಲಿ 'ಅರಿವು' ವಾಸ್ತವ ಸಂದರ್ಭದ ತಿಳುವಳಿಕೆ ಎಂಬರ್ಥದಲ್ಲಿ ಪ್ರಯೋಗಗೊಂಡಿರುವುದು ಕಂಡುಬರುತ್ತದೆ.

ಬಸವಣ್ಣ: "ತನ್ನ ತಾನರಿಯದೆ ಪರರನರಿಯಲು ಅಳಿವೇ" ಎಂಬಂತೆ ನಮ್ಮೊಳಗಿನ ಆತ್ಮದ ಶೋಧವನ್ನು ನಾನೇ ಮಾಡಬೇಕು. "ಬ್ರಹ್ಮಪದವಿಯನೊಲ್ಲೆ..................ನಿಮ್ಮ ಸದ್ಭಕ್ತರ ಪಾದವನರಿದಿಪ್ಪ

ಒಡಲು ಸೇರಿದ ಅಂತರಾತ್ಮ. ದೇಹವೇ ದೇವಾಲಯವೆಂಬ ಬಸವಣ್ಣನ ಚಿಂತನೆ ದಾಸಿಮಯ್ಯನಲ್ಲಿ 'ತಾನೇ ಘನ' ಎಂಬ ಅರಿವಿನಲ್ಲಿ ವಿಕಾಸ ಹೊಂದಿದೆ.

ಮಾದಾರ ಚೆನ್ನಯ್ಯ: ಮಾದಾರ ಚೆನ್ನಯ್ಯ "ಶುಕ್ಲ ಶೋಣಿತ ಮಜ್ಜೆ ಮಾಂಸ..................ತೋರುವ ತೋರಿಕೆ ಅರಿವಾತ್ಮವೊಂದೆ ಭೇದ. ಆವ ಕುಲವಾದರೂ ಅರಿದಲ್ಲಿಯೇ ಪರತತ್ವಭಾವ ಮರೆದಲ್ಲಿಯೇ ಮಲಮಾಯಾ ಸಂಬಂಧಿ ಇಂತಿ ಉಭಯವನರಿದು ಮರೆಯಲಿಲ್ಲ" ಎಂದು ಈ ವಚನದಲ್ಲಿ ಜಾತಿವ್ಯವಸ್ಥೆಯ ನಿರಾಕರಣೆಯನ್ನು ಮಾಡುತ್ತಾ ಕಾಯಕ ಭಿನ್ನತೆಯಿದ್ದರೂ 'ಅರಿವಾತ್ಮ' ಒಂದೇ ಎಂದು ಬಾಹ್ಯದ ಕುಲಾಚಾರಕ್ಕಿಂತ ಅಂತರಂಗದ 'ಅರಿವಿ' ನ ಮಹತ್ವವನ್ನು ಹೇಳಿದ್ದಾನೆ. ಅರಿದಲ್ಲಿಯೇ ಪರತತ್ತ್ವಭಾವಿ ಎಂದು 'ಅರಿವು' ಆತ್ಮದ ಅನುಸಂಧಾನ ಎಂದು ಹೇಳಿದ್ದಾನೆ. ಅರಿಯಬೇಕು, ಅರಿತು ಮರೆಯದಂತಿರಬೇಕೆಂದು ವಿಶ್ಲೇಷಿಸು. "ಸಂಖ್ಯಾ ಶ್ವಪಚ, ಅಗಸ್ತ್ಯ.............ಇಂತೀ ಸಪ್ತಋಷಿಗಳೆಲ್ಲರೂ ಅಸತ್ಯದಿಂದ ಮುಕ್ತರಾದುದನರಿಯದೆ ...." ಎಂದಿದ್ದಾನೆ. ಕುಲ ಮೂಲಗಳೇ ಪ್ರಧಾನವೆಂದು ಅರಿಯದೆ ವರ್ತಿಸುವುದು ಸರಿಯಲ್ಲ. ಅಸತ್ಯದಿಂದ ಮುಕ್ತರಾಗಿ ಅರಿವಿನ ಮೂಲಕ ಸತ್ಯದೆಡೆಗೆ ನಡೆಯಬೇಕು ಎನ್ನುತ್ತಾನೆ.

ಡೋಹಾರ ಕಕ್ಕಯ್ಯ: "ಎನ್ನ ಕಷ್ಟಕುಲದಲ್ಲಿ ಹುಟ್ಟಿದೆನೆಂಬ ಕುಟುಂಬ ಕಳೆದು ....ಎನ್ನ ಮನದಲ್ಲಿ ಜಂಗಮದ ನೆಲೆಗಳನ್ನು ಎನ್ನ ಅರುಹಿನಲ್ಲಿ ನೆಲೆಗೊಳಿಸಿದ ....ಅಭಿನವ ಮಲ್ಲಿಕಾರ್ಜುನ" ಇಲ್ಲಿ ತನ್ನ ಮನದಲ್ಲಿ 'ಅರುಹು' ತಿಳುವಳಿಕೆ, ಜ್ಞಾನವನ್ನು ನೆಲೆಗೊಳಿಸಿ ಎಂದಿದ್ದಾನೆ.

ಚೆನ್ನಬಸವಣ್ಣ: "ಸಂಕರ ಸಂಕರವೆಂದು ಸಹಜವರಿಯದೆ
ನುಡಿವ ....
ಸಂಕರವಾವುದೇವರಿಯರಾಗಿ.............

ಇಲ್ಲಿ, 'ಸಹಜವರಿಯದೆ' 'ಸಂಕರವಾದುದೆಂದರಿಯರಾಗಿ' ಎಂಬಲ್ಲಿ ಜಾತಿ ಸಂಕರವನ್ನು ಒಪ್ಪಿಕೊಳ್ಳಬೇಕು. ಇದಲ್ಲಾ ವಿರೋಧವಾಗಿ ಧ್ಯಾನಕ್ಕೆ ಸಮಾನ ಎನ್ನುವಲ್ಲಿ 'ಅರಿವು' ವಾಸ್ತವ ಸಂದರ್ಭದ ತಿಳುವಳಿಕೆ ಎಂಬರ್ಥದಲ್ಲಿ ಪ್ರಯೋಗಗೊಂಡಿರುವುದು ಕಂಡುಬರುತ್ತದೆ.

ಬಸವಣ್ಣ: "ತನ್ನ ತಾನರಿಯದೆ ಪರರನರಿಯಲು ಅಳಿವೇ" ಎಂಬಂತೆ ನಮ್ಮೊಳಗಿನ ಆತ್ಮದ ಶೋಧವನ್ನು ನಾನೇ ಮಾಡಬೇಕು. "ಬ್ರಹ್ಮಪದವಿಯನೊಲ್ಲೆ..................ನಿಮ್ಮ ಸದ್ಭಕ್ತರ ಪಾದವನರಿದಿಪ್ಪ

ಒಡಲು ಸೇರಿದ ಅಂತರಾತ್ಮ. ದೇಹವೇ ದೇವಾಲಯವೆಂಬ ಬಸವಣ್ಣನ ಚಿಂತನೆ ದಾಸಿಮಯ್ಯನಲ್ಲಿ 'ತಾನೇ ಘನ' ಎಂಬ ಅರಿವಿನಲ್ಲಿ ವಿಕಾಸ ಹೊಂದಿದೆ.

ಮಾದಾರ ಚೆನ್ನಯ್ಯ: ಮಾದಾರ ಚೆನ್ನಯ್ಯ "ಶುಕ್ಲ ಶೋಣಿತ ಮಜ್ಜೆ ಮಾಂಸ.................ತೋರುವ ತೋರಿಕೆ ಅರಿವಾತ್ಮವೊಂದೆ ಭೇದ. ಆವ ಕುಲವಾದರೂ ಅರಿದಲ್ಲಿಯೇ ಪರತತ್ವಭಾವ ಮರೆದಲ್ಲಿಯೇ ಮಲಮಾಯಾ ಸಂಬಂಧಿ ಇಂತಿ ಉಭಯವನರಿದು ಮರೆಯಲಿಲ್ಲ" ಎಂದು ಈ ವಚನದಲ್ಲಿ ಜಾತಿವ್ಯವಸ್ಥೆಯ ನಿರಾಕರಣೆಯನ್ನು ಮಾಡುತ್ತಾ ಕಾಯಕ ಭಿನ್ನತೆಯಿದ್ದರೂ 'ಅರಿವಾತ್ಮ' ಒಂದೇ ಎಂದು ಬಾಹ್ಯದ ಕುಲಾಚಾರಕ್ಕಿಂತ ಅಂತರಂಗದ 'ಅರಿವಿ' ನ ಮಹತ್ವವನ್ನು ಹೇಳಿದ್ದಾನೆ. ಅರಿದಲ್ಲಿಯೇ ಪರತತ್ತ್ವಭಾವಿ ಎಂದು 'ಅರಿವು' ಆತ್ಮದ ಅನುಸಂಧಾನ ಎಂದು ಹೇಳಿದ್ದಾನೆ. ಅರಿಯಬೇಕು, ಅರಿತು ಮರೆಯದಂತಿರಬೇಕೆಂದು ವಿಶ್ಲೇಷಿಸು. "ಸಂಖ್ಯಾ ಶ್ವಪಚ, ಅಗಸ್ತ್ಯ............ಇಂತೀ ಸಪ್ತಋಷಿಗಳೆಲ್ಲರೂ ಅಸತ್ಯದಿಂದ ಮುಕ್ತರಾದುದನರಿಯದೆ ...." ಎಂದಿದ್ದಾನೆ. ಕುಲ ಮೂಲಗಳೇ ಪ್ರಧಾನವೆಂದು ಅರಿಯದೆ ವರ್ತಿಸುವುದು ಸರಿಯಲ್ಲ. ಅಸತ್ಯದಿಂದ ಮುಕ್ತರಾಗಿ ಅರಿವಿನ ಮೂಲಕ ಸತ್ಯದೆಡೆಗೆ ನಡೆಯಬೇಕು ಎನ್ನುತ್ತಾನೆ.

ಡೋಹಾರ ಕಕ್ಕಯ್ಯ: "ಎನ್ನ ಕಷ್ಟಕುಲದಲ್ಲಿ ಹುಟ್ಟಿದೆನೆಂಬ ಕುಟುಂಬ ಕಳೆದು ....ಎನ್ನ ಮನದಲ್ಲಿ ಜಂಗಮದ ನೆಲೆಗಳನ್ನು ಎನ್ನ ಅರುಹಿನಲ್ಲಿ ನೆಲೆಗೊಳಿಸಿದ ....ಅಭಿನವ ಮಲ್ಲಿಕಾರ್ಜುನ" ಇಲ್ಲಿ ತನ್ನ ಮನದಲ್ಲಿ 'ಅರುಹು' ತಿಳುವಳಿಕೆ, ಜ್ಞಾನವನ್ನು ನೆಲೆಗೊಳಿಸಿ ಎಂದಿದ್ದಾನೆ.

ಚೆನ್ನಬಸವಣ್ಣ: "ಸಂಕರ ಸಂಕರವೆಂದು ಸಹಜವರಿಯದೆ
ನುಡಿವ ....
ಸಂಕರವಾವುದೇವರಿಯರಾಗಿ............

ಇಲ್ಲಿ, 'ಸಹಜವರಿಯದೆ' 'ಸಂಕರವಾದುದೆಂದರಿಯರಾಗಿ' ಎಂಬಲ್ಲಿ ಜಾತಿ ಸಂಕರವನ್ನು ಒಪ್ಪಿಕೊಳ್ಳಬೇಕು. ಇದಲ್ಲಾ ವಿರೋಧವಾಗಿ ಧ್ಯಾನಕ್ಕೆ ಸಮಾನ ಎನ್ನುವಲ್ಲಿ 'ಅರಿವು' ವಾಸ್ತವ ಸಂದರ್ಭದ ತಿಳುವಳಿಕೆ ಎಂಬರ್ಥದಲ್ಲಿ ಪ್ರಯೋಗಗೊಂಡಿರುವುದು ಕಂಡುಬರುತ್ತದೆ.

ಬಸವಣ್ಣ: "ತನ್ನ ತಾನರಿಯದೆ ಪರರನರಿಯಲು ಅಳಿವೇ" ಎಂಬಂತೆ ನಮ್ಮೊಳಗಿನ ಆತ್ಮದ ಶೋಧವನ್ನು ನಾನೇ ಮಾಡಬೇಕು. "ಬ್ರಹ್ಮಪದವಿಯನೊಲ್ಲೆ..................ನಿಮ್ಮ ಸದ್ಭಕ್ತರ ಪಾದವನರಿದಿಪ್ಪ

ಒಡಲು ಸೇರಿದ ಅಂತರಾತ್ಮ. ದೇಹವೇ ದೇವಾಲಯವೆಂಬ ಬಸವಣ್ಣನ ಚಿಂತನೆ ದಾಸಿಮಯ್ಯನಲ್ಲಿ 'ತಾನೇ ಘನ' ಎಂಬ ಅರಿವಿನಲ್ಲಿ ವಿಕಾಸ ಹೊಂದಿದೆ.

ಮಾದಾರ ಚೆನ್ನಯ್ಯ: ಮಾದಾರ ಚೆನ್ನಯ್ಯ "ಶುಕ್ಲ ಶೋಣಿತ ಮಜ್ಜೆ ಮಾಂಸ.................ತೋರುವ ತೋರಿಕೆ ಅರಿವಾತ್ಮವೊಂದೆ ಭೇದ. ಆವ ಕುಲವಾದರೂ ಅರಿದಲ್ಲಿಯೇ ಪರತತ್ವಭಾವ ಮರೆದಲ್ಲಿಯೇ ಮಲಮಾಯಾ ಸಂಬಂಧಿ ಇಂತಿ ಉಭಯವನರಿದು ಮರೆಯಲಿಲ್ಲ" ಎಂದು ಈ ವಚನದಲ್ಲಿ ಜಾತಿವ್ಯವಸ್ಥೆಯ ನಿರಾಕರಣೆಯನ್ನು ಮಾಡುತ್ತಾ ಕಾಯಕ ಭಿನ್ನತೆಯಿದ್ದರೂ 'ಅರಿವಾತ್ಮ' ಒಂದೇ ಎಂದು ಬಾಹ್ಯದ ಕುಲಾಚಾರಕ್ಕಿಂತ ಅಂತರಂಗದ 'ಅರಿವಿ' ನ ಮಹತ್ವವನ್ನು ಹೇಳಿದ್ದಾನೆ. ಅರಿದಲ್ಲಿಯೇ ಪರತತ್ತ್ವಭಾವಿ ಎಂದು 'ಅರಿವು' ಆತ್ಮದ ಅನುಸಂಧಾನ ಎಂದು ಹೇಳಿದ್ದಾನೆ. ಅರಿಯಬೇಕು, ಅರಿತು ಮರೆಯದಂತಿರಬೇಕೆಂದು ವಿಶ್ಲೇಷಿಸು. "ಸಂಖ್ಯಾ ಶ್ವಪಚ, ಅಗಸ್ತ್ಯ............ಇಂತೀ ಸಪ್ತಋಷಿಗಳೆಲ್ಲರೂ ಅಸತ್ಯದಿಂದ ಮುಕ್ತರಾದುದನರಿಯದೆ ...." ಎಂದಿದ್ದಾನೆ. ಕುಲ ಮೂಲಗಳೇ ಪ್ರಧಾನವೆಂದು ಅರಿಯದೆ ವರ್ತಿಸುವುದು ಸರಿಯಲ್ಲ. ಅಸತ್ಯದಿಂದ ಮುಕ್ತರಾಗಿ ಅರಿವಿನ ಮೂಲಕ ಸತ್ಯದೆಡೆಗೆ ನಡೆಯಬೇಕು ಎನ್ನುತ್ತಾನೆ.

ಡೋಹಾರ ಕಕ್ಕಯ್ಯ: "ಎನ್ನ ಕಷ್ಟಕುಲದಲ್ಲಿ ಹುಟ್ಟಿದೆನೆಂಬ ಕುಟುಂಬ ಕಳೆದು ....ಎನ್ನ ಮನದಲ್ಲಿ ಜಂಗಮದ ನೆಲೆಗಳನ್ನು ಎನ್ನ ಅರುಹಿನಲ್ಲಿ ನೆಲೆಗೊಳಿಸಿದ ....ಅಭಿನವ ಮಲ್ಲಿಕಾರ್ಜುನ" ಇಲ್ಲಿ ತನ್ನ ಮನದಲ್ಲಿ 'ಅರುಹು' ತಿಳುವಳಿಕೆ, ಜ್ಞಾನವನ್ನು ನೆಲೆಗೊಳಿಸಿ ಎಂದಿದ್ದಾನೆ.

ಚೆನ್ನಬಸವಣ್ಣ: "ಸಂಕರ ಸಂಕರವೆಂದು ಸಹಜವರಿಯದೆ

ನುಡಿವ ....

ಸಂಕರವಾವುದೇವರಿಯರಾಗಿ............

ಇಲ್ಲಿ, 'ಸಹಜವರಿಯದೆ' 'ಸಂಕರವಾದುದೆಂದರಿಯರಾಗಿ' ಎಂಬಲ್ಲಿ ಜಾತಿ ಸಂಕರವನ್ನು ಒಪ್ಪಿಕೊಳ್ಳಬೇಕು. ಇದಲ್ಲಾ ವಿರೋಧವಾಗಿ ಧ್ಯಾನಕ್ಕೆ ಸಮಾನ ಎನ್ನುವಲ್ಲಿ 'ಅರಿವು' ವಾಸ್ತವ ಸಂದರ್ಭದ ತಿಳುವಳಿಕೆ ಎಂಬರ್ಥದಲ್ಲಿ ಪ್ರಯೋಗಗೊಂಡಿರುವುದು ಕಂಡುಬರುತ್ತದೆ.

ಬಸವಣ್ಣ: "ತನ್ನ ತಾನರಿಯದೆ ಪರರನರಿಯಲು ಅಳಿವೇ" ಎಂಬಂತೆ ನಮ್ಮೊಳಗಿನ ಆತ್ಮದ ಶೋಧವನ್ನು ನಾನೇ ಮಾಡಬೇಕು. "ಬ್ರಹ್ಮಪದವಿಯನೊಲ್ಲೆ..................ನಿಮ್ಮ ಸದ್ಭಕ್ತರ ಪಾದವನರಿದಿಪ್ಪ

ಮಹಾಪದವಿಯನೆ ಕರುಣಿಸಯ್ಯಾ" ಎಂಬಲ್ಲಿ 'ಅರಿವು' ಎಂದರೆ ತಿಳಿದ, ಭಕ್ತರ ಮಹತ್ವನ್ನು ಅರಿತುಕೊಂಡಿರುವ ಎಂಬಂಶ ಕಾಣುತ್ತದೆ. ಬಸವಣ್ಣರು ಇನ್ನೊಂದೆಡೆಯಲ್ಲಿ

"ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ

ಜಲವೊಂದೆ ಶೌಚಾಚಮನಕ್ಕೆ

ಕುಲವೊಂದೆ ತನ್ನ ತಾನರಿದವರಿಗೆ

ಎಂದಿದ್ದಾರೆ. ಸಾಮಾಜಿಕ ಅರಿವನ್ನು ಮೂಡಿಸುವ ಸಂದರ್ಭದಲ್ಲಿ ಸೃಷ್ಟಿಯಲ್ಲಿರುವ ವಸ್ತುಸಂಗತಿಗಳಲ್ಲಿ ತಾರತಮ್ಯವಿಲ್ಲ. ಅದೇ ರೀತಿ ಕುಲದ ವಿಚಾರ ಬಂದಾಗ 'ಅರಿವು' ಮೂಡಿದವರಿಗೆ ಅರಿವಿನ ಮಾರ್ಗದಲ್ಲಿ ನಡೆದಾಗ ಕುಲದ ನೆಲೆ ಮುಖ್ಯವಾಗುವುದಿಲ್ಲ. ಅವುಗಳನ್ನು ಮೀರಿ ನಾವು ಬೆಳೆಯಲು ಸಾಧ್ಯ ಎನ್ನುತ್ತಾರೆ. ಇಲ್ಲಿ ಅರಿವು ಅಂದರೆ ಪ್ರಕೃತಿ ಸತ್ಯವನ್ನು ಆ ಮೂಲಕ ತನ್ನನ್ನು ತಾನು ಅರಿತುಕೊಂಡವ ಅಂದರೆ ಆತ್ಮಾನುಸಂಧಾನ ನಡೆಸಿದವರಿಗೆ ಅರಿವು ಮೂಡಿ ಎಲ್ಲ ಭಿನ್ನತೆಗಳನ್ನು ಮೀರಿ ಭಕ್ತನಾಗುತ್ತಾನೆ ಎಂದಿದ್ದಾರೆ.

ಅಕ್ಕಮಹಾದೇವಿ: ಓದಿ ಓದಿ ವೇದ ವಾದಕ್ಕಿಕ್ಕಿತ್ತು......... ಅರಿವೆ ಹೊಂದಿದೆನೆಂದು ಆಗಮ ಅರಿವಾಗಿ ಹೋಯಿತ್ತು....... "ಎಂದರೆ ಅಕ್ಕ ಪ್ರತಿಭಟನಾತ್ಮಕ ನೆಲೆಯನ್ನು ವ್ಯಕ್ತಪಡಿಸುವ ಈ ಸಂದರ್ಭದಲ್ಲೊ ಅರಿವು ತಿಳುವಳಿಕೆ ಎಂಬರ್ಥದಲ್ಲಿ ವ್ಯಕ್ತವಾಗಿದೆ.

'ಗಂಡ ಮೋಹಿಸಿ ಹೆಣ್ಣ ಹಿಡಿದಂತೆ

ಅದು ಒಬ್ಬರ ಒಡವೆ ಎಂದು ಅರಿಯಬೇಕು.

....................'

ಇಲ್ಲಿ ಸ್ತ್ರೀ ಎಂಬ ಭೇದವಳಿದು ಪರಿಪೂರ್ಣತೆ ಹೊಂದಬೇಕು. ಎಂಬಲ್ಲಿ ತಾತ್ವಿಕ ಚರ್ಚೆಯನ್ನು ಎತ್ತಿದ್ದಾಳೆ. ಇಲ್ಲಿ ಅರಿಯಬೇಕು ಎಂಬ ತಿಳಿಯಬೇಕು ಎಂಬಲ್ಲಿಂದ ಅರ್ಥ ಪರಂಪರೆ ಹೊರಟು 'ಉತ್ತರವಾವುದೆಂದರಿಯಬೇಕು. ಎಂಬಲ್ಲಿ ಜ್ಞಾನದ ತಿಳಿವಿನ ಬೆಳಕಿನೆಡೆಗೆ ಅರ್ಥ ವಿಸ್ತರಿಸಲ್ಪಡುತ್ತದೆ.

"......................

ಬುದ್ಧಿಗೇಡಿತನದಿಂದ ಪರಮಾರ್ಥದ ....

ಇದಾವ ಕಾರಣವೆಂದರಿಯದೆ ...."

ತನ್ನ ಬದುಕನ್ನೇ ತಾನು ಸವಾಲುಗಳಿಗೆ ಒಡ್ಡಿಕೊಂಡ ಅಕ್ಕ ಎಲ್ಲವನ್ನು 'ಬಯಲುಗೊಳಿಸಿ ನಿರ್ಲಿಪ್ತಳಾಗಿ ನೋಡುತ್ತಾಳೆ. ಪರಮಾರ್ಥದ ಸುಖವನ್ನು ಕಳೆದುಕೊಳ್ಳುವ ಅವಿವೇಕಿಗಳ ಕಾರಣವನ್ನೂ, ನೆಲೆಯನ್ನೂ 'ಅರಿಮೆ' ಎಂದಿದ್ದಾರೆ.

"............ಚೆನ್ನ ಮಲ್ಲಿಕಾರ್ಜುನನರಿಯದ ಬಳಿಕ

ಆ ಕಾಯವ ನಾಯಿ ತಿಂದಡೇನು ನೀರು ಕುಡಿದಡೇನು?"

"..............ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ......."

ಸಾಮಾಜಿಕ ವ್ಯವಸ್ಥೆಯ ತಿರಸ್ಕಾರ ತನ್ನಿಚ್ಛೆಯ ಬದುಕೊಂದನ್ನು ಕಂಡುಕೊಳ್ಳುವ ತೀವ್ರತರ ಹಂಬಲದಲ್ಲಿ ಎದುರಾದ ಮಾನಸಿಕ ಒತ್ತಡದ ನೆಲೆಯಿದೆ. ಚೆನ್ನಮಲ್ಲಿಕಾರ್ಜುನನ್ನು ಅರಿಯುವುದೆಂದರೆ ಲೌಕಿಕ ಎಲ್ಲಿ ಬಂಧಗಳನ್ನು ಕಳಚಿಕೊಂಡು ಲಿಂಗದೊಂದಿಗೆ ಮಾಡಿಕೊಳ್ಳುವ ಆತ್ಮಸಂಗಾತವಾಗಿದೆ. ಕಾಯವನ್ನು ಹೊಂದಿದ ಮೇಲೆ ಮೀನರಾಶಿಯಾದ ಮಾಯೆಯ ಆಕರ್ಷಣೆಗೆ ಒಳಗಾಗಲೇಬೇಕು. ಅದರಿಂದ ವಿರಕ್ತಿ ಹೊಂದುವಲ್ಲಿ ಅರಿವಾಗಿ ಮಾಯೆ ಕಾಡಿತ್ತು ಎಂದಿದ್ದಾಳೆ.

ಆಯ್ದಕ್ಕಿ ಲಕ್ಕಮ್ಮ: "ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು

..........................ಅರಿವಿಂಗೆ ಹಾನಿ.................."

ಎಂದು ಭಕ್ತರೆಂದು ಅಹಂನಿಂದ ಬೀಗುವವರನ್ನು ಕುರಿತು ಹೇಳಿದ್ದಾಳೆ. ಅದರ ಸಂಪೂರ್ಣ ಕಾಯವನ್ನು ಮಂಡಿಸುತ್ತಾ ನಡೆಯಲ್ಲಿನ ಮಾಡುವ ಯಾವುದೇ ಕಾರ್ಯವಾದರೂ ನಮ್ಮ ಭಾವ, ತಿಳುವಳಿಕೆ ಹಾನಿಯುಂಟುಮಾಡುತ್ತದೆ ಎಂದಿದ್ದಾಳೆ.

ವಚನಕಾರರ ನಂತರದಲ್ಲಿ ಬಂದ ಅರಿತ ಕವಿಯೆಂದು ಗುರುತಿಸಿಕೊಳ್ಳುವ ಸರ್ವಜ್ಞನು ಭಕ್ತಿ, ಜ್ಞಾನ ಸ್ವರೂಪವನ್ನು ವಿಶ್ಲೇಷಿಸುತ್ತಾ,

"ಅರಿವಿನ ಅರಿವು ತಾ ಧರೆಯೊಳಗೆ ಮೆರೆದಿಹನು

ಅರಿವಿನ ಅರಿವ ಹರಿಹರ ಬೊಮ್ಮರೂ

ಅರಿಯರೈ ಕಾಣ ಸರ್ವಜ್ಞ ...." ಎಂದಿದ್ದಾನೆ

ಧರೆಯೊಳಗೆ ಜ್ಞಾನಿಗಳೆಂದು ತಿಳಿದವರು ಮೆರೆಯುತ್ತಿದ್ದಾರೆ. 'ಅರಿವಿ' ನ ನಿಜದ ನೆಲೆಯನ್ನು ಹರಿಹರ ಬ್ರಹ್ಮರೂ ತಿಳಿಯಲು ಸಾಧ್ಯವಿಲ್ಲ ಏಕೆಂದರೆ 'ಅರಿವು' ಅಭಾವದ ಮೂಲಕ ದಕ್ಕುವ ದರ್ಶನವೇ ಹೊರತು ಬಾಹ್ಯಜಗತ್ತಿನ ಸಂಗತಿಯಲ್ಲ. ಇಲ್ಲಿ ಅರಿವು ಪದ ಭಿನ್ನಾರ್ಥದಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ಒಂದೆಡೆ ಅರಿವು ಜ್ಞಾನದ ನೆಲೆಗೆ ಏರಿದ್ದರೆ ಇನ್ನೊಂದು ತಿಳಿವು, ತಿಳಿವಳಿಕೆಯೆಂಬ ವ್ಯಾವಹಾರಿಕ ನೆಲೆಯಲ್ಲಿ ಬಳಕೆಯಾಗಿದೆ.

ಹೀಗೆ ಅಲ್ಲಮನ ಸಮಕಾಲೀನರಾದ ವಚನಕಾರರಲ್ಲಿ ಅರಿವಿನ ನೆಲೆಯು ವಿಸ್ತರಣೆಯನ್ನು ವಿಶ್ಲೇಷಿಸುತ್ತಾ ಹೋದಂತೆ 'ಅರಿವಿನ ವಿಸ್ತಾರ ಲೋಕವೊಂದು ನಮ್ಮೆದುರು ತೆರೆಯುತ್ತದೆ. ಇಲ್ಲೆಲ್ಲ ವಿಶಿಷ್ಟವಾದ 'ಅರಿವು' ಬಳಕೆಯಾಗಿದೆ, ಬಳಸಲ್ಪಟ್ಟಿದೆ. ಗುರು–ಲಿಂಗ –ಜಂಗಮದ ಪರಿಕಲ್ಪನೆಯಲ್ಲಿ

ಜ್ಞಾನದ ಹುಡುಕಾಟವಿದೆ. ಬಾಹ್ಯ ಪ್ರಪಂಚದ ತಿಳಿವು ಹೊಂದುವ ಕಾಳಜಿಯಿದೆ. ಆ ಮೂಲಕ ತನ್ನಂತರಂಗವನ್ನು ಅರಿತುಕೊಳ್ಳಬೇಕಾದ ಆತ್ಮಾವಲೋಕನವಿದೆ. ಇಲ್ಲೆಲ್ಲ ಅರಿವಿನ ಜಿಜ್ಞಾಸೆ ಇದೆ.

ಅನುಭಾವಿ ಅಲ್ಲಮನ ದಾರ್ಶನಿಕತೆಯ ನೋಟ ಭಿನ್ನ ಮಾರ್ಗದ ಮೂಲಕ ಅನುಭಾವದೆಡೆಗೆ ಸಾಗಾಟ, ಬಯಲಲ್ಲ ಬಯಲಾಗುವ ನೆಲೆಯಿದೆ. ಅರಿವೆನೆಂಬುದು ತಾ ಬಯಲು ಅರಿಯೆನೆಂಬುದು ತಾ ಬಯಲು .... ಎನ್ನುತ್ತಾ ನಾನು, ನೀನು ಗುರು –ಲಿಂಗ ಜಂಗಮ ಎಲ್ಲವೂ ಮೀರಿದ ಅರಿವು ಇದೆ. ಓಘತ್ವದ ನೆಲೆಯಿದೆ. ಆಕಾರ, ನಿರಾಕಾರ, ನಿರಾಳವಾಗಿ ಕುರುಹಿಲ್ಲದ ಅನುಭಾವದ ಅವಾಙ್ಮಯ ಸ್ಥಿತಿ ಅಲ್ಲಮನಲ್ಲಿದೆ. ಹೀಗೆ ಅಲ್ಲಮನ ಅರಿವಿನ ಜಿಜ್ಞಾಸೆ ಸೂಕ್ಷ್ಮವಾದ ಅಲೌಕಿಕ ಅಗೋಚರ, ಅಮೂರ್ತ, ಅರಿವಿನ ನೆಲೆಯಾದರೆ ಇತರ ವಚನಕಾರರು ಅರಿವನ್ನು ಗ್ರಹಿಸಿಕೊಂಡ ವ್ಯಾಖ್ಯಾನಿಸಿಕೊಂಡ, ಬಗೆ ತಿಳಿವಿಗೆ, ವ್ಯವಹಾರಕ್ಕೆ ವ್ಯಾಖ್ಯಾನಕ್ಕೆ ದಕ್ಕುವ ಬಗೆಯಷ್ಟೆ ಇದೆ ಎಂಬುದು ಗಮನಾರ್ಹ ಅಂಶವಾಗಿ 'ಅಲ್ಲಮನ ಅರಿವಿನ ಹುಡುಕಾಟದೆಡೆಗೆ ತಮ್ಮ ಚಿಂತನೆಯನ್ನು ತಂದು ನಿಲ್ಲಿಸುತ್ತದೆ. ಹೀಗೆ ವಚನಕಾರರು ಅರಿವು ಮತ್ತು ಜ್ಞಾನದ ಕುರಿತು ಬೇರೆ ಬೇರೆ ನೆಲೆಗಳನ್ನು ಗ್ರಹಿಸಿದ್ದಾರೆ. ಬಸವಣ್ಣನಿಗೆ ವ್ಯಕ್ತಿತ್ವವಿದೆ. ಅವನು ಆಶ್ರಯವಾಗಬಹುದಾದ ಆಲಯ, ಈತನ ಪ್ರಕಾರ ಅರಿವಿನ ದಾರಿ ಒಂದೇ. ಆ ದಾರಿಯಲ್ಲಿ ನಡೆದು ಅರಿವನ್ನು ಪಡೆಯುವುದು ಸಾಧ್ಯ. ಅದು ಆಲಯದ ದಾರಿ. ಬಸವನ ಪ್ರಕಾರ ಅರಿವು ಅವ್ಯಕ್ತವೇ. ಆಚಾರದ ಮೂಲಕ ಮಾತ್ರ ಅರಿವು ಸಾಧ್ಯ. ಆದ್ದರಿಂದ ವಿಚಾರದ ಮೂರ್ತರೂಪ ಆಚಾರವು ಅವನಿಗೆ ಮುಖ್ಯ. ಆಚಾರ ಎಂಬುದು ನಿರ್ದಿಷ್ಟ ಧಾರ್ಮಿಕ ವ್ಯವಸ್ಥೆಯನ್ನು ಒಪ್ಪಿಕೊಂಡ ಜನ ಸಮುದಾಯಕ್ಕೆ ಸಂಬಂಧಿಸಿದ್ದು. ಇದಕ್ಕೆ ವೈಯಕ್ತಿಕ ನಂಬಿಕೆಯೊಂದಿಗೆ ಸಾಮೂಹಿಕ ಒಪ್ಪಿಗೆಯೇ ಮುಖ್ಯ. ಇದರ ಆಚರಣೆಯಿಂದಲೂ ವಿಚಾರದ ಬೆಳವಣಿಗೆ ಸಾಧ್ಯ ಎಂಬುದನ್ನು 'ಅರಿದರಿದು' ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು ಕಣ್ದೆರೆಯನು ಎಂದಿದ್ದಾನೆ.

ಬಸವಣ್ಣ ಹಾಗೂ ಇತರ ವಚನಕಾರರಲ್ಲಿ ಅರಿವು, ಅರಿ, ಅರಿಮೆ ಎಂಬ ಪದಗಳು ಬಳಕೆಯಾಗಿರುವ ವಚನಗಳ ಸಂಖ್ಯೆ ಸೀಮಿತವಾದದ್ದು. ಅಲ್ಲಿ ಅರಿವು ಎಂಬುದನ್ನು ಭಾಷಿಕವಾಗಿ ವ್ಯಾಖ್ಯಾನಿಸದೆ ಇರುವುದು ಗಮನಾರ್ಹ. ತನ್ನಲ್ಲಿರುವ ಅರಿವು ಇತರರ ನಂಬಿಕೆಗೆ, ಹಾಗೆಯೇ ಇತರರ ಅರಿವು ತನ್ನಲ್ಲಿ ವಿಕಾಸಕ್ಕೆ ಕಾರಣವಾಗಬೇಕು ಎಂದು ಬಹಿರಂಗದ ವರ್ತನೆಯನ್ನು ಆಧಾರವಾಗಿಟ್ಟುಕೊಂಡು ಅದರ ಹಿನ್ನೆಲೆಯನ್ನು ವಿವರಿಸಿಕೊಳ್ಳಲಾಗಿದೆ. ಹೀಗೆ ಬಹಿರಂಗದಲ್ಲಿ ಲೋಕದ ವಿಚಾರವನ್ನು ಚೌಕಟ್ಟಿಗೆ ಹೊಂದಿಸಿ ತಾರ್ಕಿಕವಾಗಿ ರೂಪಗೊಳಿಸುವ ಸಿದ್ಧಾಂತದ ನೆಲೆಯೇ ಬಸವ ಹಾಗೂ ಇತರ ವಚನಕಾರರಲ್ಲಿ 'ಅರಿವಿ' ನ ವ್ಯಾಖ್ಯಾನವಾಗಿ ಕಾಣಿಸಿಕೊಳ್ಳುತ್ತದೆ.

ಕೊನೆ ಟಿಪ್ಪಣಿ

1. ಡಾ. ಎಂ. ಪ್ರಭಾಕರ ಜೋಷಿ . ಪ್ರೊ, ಐ. ಎಂ ಹೆಗಡೆ –ಭಾರತೀಯ ತತ್ತ್ವಶಾಸ್ತ್ರ ಪ್ರವೇಶ, ಅಕ್ಷರ ಪ್ರಕಾಶನ ಹೆಗ್ಗೋಡು ೨೦೦೮ ಪು. ಸಂ. ೧೨೮

ಅಧ್ಯಾಯ :೪

ಅಲ್ಲಮನ ಬದುಕು: ಚಿಂತನೆ

೪.೧ ಅಲ್ಲಮನ ಜೀವನ, ವ್ಯಕ್ತಿತ್ವ–ಸಾಧನೆ

೪.೨ ಅಲ್ಲಮನ ಬೆಡಗಿನ ವಚನಗಳು

೪.೧ ಅಲ್ಲಮನ ಜೀವನ, ವ್ಯಕ್ತಿತ್ವ-ಸಾಧನೆ

ಹನ್ನೆರಡನೆಯ ಶತಮಾನದ ಭಕ್ತಿ ಪರಂಪರೆಯಲ್ಲಿ ಸಾಮಾಜಿಕ ಆಂದೋಲನದಲ್ಲಿ ಪ್ರಧಾನ ಪಾತ್ರ ವಹಿಸಿದ ವಚನಕಾರರಲ್ಲಿ ಅಲ್ಲಮ ಪ್ರಭುವಿನ ಸ್ಥಾನ ಮಹತ್ವದ್ದು. ವೀರಶೈವ ಧರ್ಮದ ದಾರ್ಶನಿಕ, ಮೇರು ವ್ಯಕ್ತಿಯಾಗಿರುವ ಅಲ್ಲಮ ಕರ್ನಾಟಕದ ಇತಿಹಾಸ ಕಂಡಿರುವ ಅನುಭಾವಿ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದಾನೆ. ಶಿವಶರಣರ ಮಧ್ಯದಲ್ಲಿ ಆಧಾರವಾಗಿ ನಿಂತು ಮಾರ್ಗದರ್ಶನ ಮಾಡಿದ ಅಲ್ಲಮ ಪ್ರಭುವಿನ ಆಧ್ಯಾತ್ಮ ಪ್ರಪಂಚ ಒಂದು ವಿಸ್ಮಯ. ಆ ಮೂಲಕ ಕಾಲದ, ದೇಶದ ಗ್ರಹಿಕೆಯಿಂದ ಸೀಮಿತನಾಗಿದ್ದರೂ ಆತನ ದೃಷ್ಟಿ, ಸಾಧನೆಗಳಿಂದ ದೇಶ, ಕಾಲಗಳ ವ್ಯಾಪ್ತಿಯನ್ನು ಮೀರಿ ನಿಂತ ವ್ಯಕ್ತಿತ್ವ ಆತನದು. ಎಸ್.ಎಂ. ವೃಷಭೇಂದ್ರ ಸ್ವಾಮಿಯವರು ಹೇಳುವಂತೆ "ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಕರ್ನಾಟಕ ಸಂಸ್ಕೃತಿಯಲ್ಲಿ ಅಲ್ಲಮಪ್ರಭು ದೇವನ ಹೆಸರು ಹಾಸು ಹೊಕ್ಕಾಗಿದೆ. ಹನ್ನೆರಡನೆಯ ಶತಮಾನದಿಂದ 20ನೆಯ ಶತಮಾನದವರೆಗೆ ಅಭಿವ್ಯಕ್ತಗೊಂಡ ನಾಡಿನ ಸಾಂಸ್ಕೃತಿಕ ಅಂಶಗಳಲ್ಲಿ ಪ್ರಭುದೇವನ ದಿವ್ಯ ಜೀವನದ ಐತಿಹ್ಯಗಳು ಮೂಡಿ ನಿಂತಿವೆ. ಸಾಹಿತ್ಯದಲ್ಲಿ ಮೂಡಿದಂತೆಯೂ, ಸಂಸ್ಕೃತಿಯಲ್ಲಿ ಉಳಿದಿರುವ ಅಚ್ಚಳಿಯದ ಕುರುಹುಗಳನ್ನು ಗುರುತಿಸಬಹುದಾಗಿದೆ".[1] ಇಂದ್ರಿಯಾತೀತ ನಿಜಸುಖವು ಆಧ್ಯಾತ್ಮದ ಗುರಿ. ಆತ್ಮದ ಅರಿವೇ ಅದಕ್ಕೆ ಸಾಧನ ಎಂದು ತಿಳಿದಿದ್ದ ಪ್ರಭುದೇವನು ತಾನು ಶ್ರೇಷ್ಠ ಆತ್ಮಾಭಿಮಾನಿಯಾಗಿ ಇತರರಿಗೆ ಆತ್ಮದ ಅರಿವನ್ನುಂಟುಮಾಡಿಕೊಟ್ಟ ಗುರುವಾಗಿ ಕಂಡು ಬರುತ್ತಾನೆ. ತನ್ನ ಬಾಳಿನ ವಿಶಿಷ್ಟ ರೀತಿ ನೀತಿಯಿಂದ ವಿಶ್ವಾತ್ಮವನ್ನು ಸಾಕಾರ ಮಾಡಿಕೊಂಡಂಥ ಅಪರೂಪದ ಸಾಧಕ.

ಜಗತ್ತಿನ ಸಾಹಿತ್ಯ ಇತಿಹಾಸವನ್ನು ನೋಡಿದಾಗ ಉದಾತ್ತ ಕವಿಯಾದವನು, ಅನುಭಾವಿಯೂ ಆಗುವ ಅರ್ಹತೆ ಹೊಂದಿರುವುದು ಕಂಡು ಬರುತ್ತದೆ. ತಮ್ಮ ಕಾವ್ಯತತ್ವದ ಮೂಲಕ ಬಾಳಿನ ಹಿಂದೆ ಅಡಗಿರುವ ಪರತತ್ತ್ವವನ್ನು ಅರಸಿದ ಅನುಭಾವಿಗಳಲ್ಲಿ ಅಲ್ಲಮ ಪ್ರಭುವಿನ ಸ್ಥಾನ ಎದ್ದು ಕಾಣುತ್ತದೆ. ಅಲ್ಲಮನ ಜೀವನ, ವ್ಯಕ್ತಿತ್ವ ಸಾಧನೆಯ ನೆಲೆಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಪ್ರಧಾನವಾಗಿ ಸಿಗುವ ಆಧಾರಗಳೆಂದರೆ ೧. ಅಲ್ಲಮನ ವಚನಗಳು. ೨. ಸಮಕಾಲೀನ ಶಿವಶರಣರ ವಚನಗಳು ೩. ಅಲ್ಲಮನ ಕುರಿತು ರಚನೆಯಾಗಿರುವ ಕಾವ್ಯ, ಪುರಾಣ, ಸಂಪಾದನೆ ಇತ್ಯಾದಿಗಳು. ಅಲ್ಲಮನ ವಚನ ರಚನೆಗಳೆಲ್ಲವೂ ಉಪಲಬ್ಧವಿಲ್ಲ. ದೊರೆತಿರುವ ವಚನಗಳು ಕೇವಲ ಶಬ್ದದ ರೂಪದಲ್ಲಿರುವ ಮಾತುಗಳಲ್ಲ. ಅವನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಶರಣನಾಗಿ ಅನುಭಾವ ದೃಷ್ಟಿಯ ಮೂಲಕ ಜೀವನದರ್ಶನದಲ್ಲಿ ಕಂಡುಕೊಂಡ ವಿಚಾರಶಕ್ತಿಯಿದೆ. ಸಾಧಕನೊಬ್ಬನ ತಲ್ಲಣ, ಅಸಹಾಯಕತೆ, ಅರಿವಿನ ನೆಲೆಗಳು ವ್ಯಕ್ತವಾಗಿದೆ. ಕಠಿಣವಾದ ಸಾಧನೆಯ ಪಥದಲ್ಲಿ ಸಾಧನೆ ಸಿದ್ಧಿಯ ಮೂಲಕ ಎತ್ತರಕ್ಕೇರಿದ ಅನುಭಾವಿಯ ನೆಲೆ ಕಾಣಿಸಿಕೊಳ್ಳುತ್ತದೆ. ವೈಚಾರಿಕತೆ, ಸಂಪ್ರದಾಯಗಳ ಬಂಧನವನ್ನು ಮೀರುವ ಪರಿ, ವ್ಯಕ್ತಿತ್ವದ ಆಳ,

ಗಂಭೀರತೆ ಎಲ್ಲವನ್ನೂ ಪ್ರಯೋಗ – ಪರೀಕ್ಷೆಗಳ ಒರೆಗೆ ಹಚ್ಚಿ ನೋಡುವ ವಿಚಾರಶಕ್ತಿ – ಹೀಗೆ ವ್ಯಕ್ತಿತ್ವಕ್ಕೆ ಸಂಬಂಧಿಸಿದ ವಿವರಗಳನ್ನು ಆತನ ವಚನಗಳ ನೆಲೆಯಲ್ಲಿಯೇ ಗುರುತಿಸಿಕೊಳ್ಳಬಹುದು. ಆದರೆ ಆತನ ಬಹಿರಂಗದ ಜೀವನ ವಿವರಗಳು ವಚನಗಳಿಂದ ಅರಿತುಕೊಳ್ಳಲು ಸಾಧ್ಯವಾಗದು. ಅವನ್ನು ಆತನ ಕುರಿತಾಗಿ ಬಂದಿರುವ ಕಾವ್ಯಗಳಿಂದ ವಿಶ್ಲೇಷಿಸಬೇಕಾಗುತ್ತದೆ.

ಅಲ್ಲಮಪ್ರಭುದೇವನನ್ನು ಕುರಿತು ಸಾಕಷ್ಟು ಕನ್ನಡ ಕಾವ್ಯ ಕೃತಿಗಳು ರಚನೆಯಾಗಿವೆ. ಹರಿಹರನ 'ಪ್ರಭುದೇವರ ರಗಳೆ', ಚಾಮರಸನ 'ಪ್ರಭುಲಿಂಗ ಲೀಲೆ' ಎಳಂದೂರು ಹರೀಶ್ವರನ 'ಪ್ರಭುದೇವರ ಪುರಾಣ', ರಾಘವಾಂಕನ 'ಸಿದ್ಧರಾಮ ಚಾರಿತ್ರ', ಭೀಮಕವಿಯ 'ಬಸವ ಪುರಾಣ', ಮಗ್ಗೆಯ ಮಾಯಿದೇವನ 'ಪ್ರಭುಗೀತೆ' ಹೀಗೆ ಹಲವು ಕಾವ್ಯಗಳಲ್ಲಿ ಪ್ರಧಾನವಾಗಿ ಇನ್ನೂ ಕೆಲವೆಡೆ ಗೌಣವಾಗಿ ಅಲ್ಲಮನ ವ್ಯಕ್ತಿತ್ವದ ಔನ್ನತ್ಯವು ವಿಶಿಷ್ಟವಾಗಿ ಮೂಡಿಬಂದಿದೆ. ಅಲ್ಲದೆ ಶೂನ್ಯಸಂಪಾನೆಗಳಲ್ಲೂ ಅವನ ವ್ಯಕ್ತಿತ್ವವನ್ನು ಸಾಂಕೇತಿಕವಾಗಿ ನಿರೂಪಿಸಲು ಪ್ರಯತ್ನಿಸಲಾಗಿದೆ. ಅಲ್ಲಮನ ಸಾಧನೆಯ ಹಂತಗಳನ್ನು ಈ ಕೃತಿಗಳಲ್ಲಿ ಕಾಣಲು ಸಾಧ್ಯವಿಲ್ಲ. ವೀರಶೈವ ಪುರಾಣಗಳಲ್ಲಿ ಅಲ್ಲಮನನ್ನು ಶಿವನ ಅವತಾರವೆಂಬಂತೆ ಚಿತ್ರಿಸುವುದನ್ನೂ ಕಾಣಬಹುದು. ಪ್ರಭುದೇವರ ರಗಳೆಯಲ್ಲಿ ಶಿವನಿಂದ ಶಾಪ ಹೊಂದಿ ಭೂಲೋಕದಲ್ಲಿ ಹುಟ್ಟಿ ಕಾಮಲತೆಯಿಂದ ಆಕರ್ಷಿತನಾಗಿ ಆಕೆಯೊಂದಿಗೆ ಹಲವು ವರುಷ ಸಾಂಸಾರಿಕ ಬದುಕನ್ನು ನಡೆಸುತ್ತಾನೆ. ಕಾಮಲತೆಯ ಸಾವಿನ ನಂತರ ಜೀವನದ ನಶ್ವರತೆಯ ಅರಿವು ಹೊಂದಿ ವೈರಾಗ್ಯ ಪಡೆದಿಯುತ್ತಾನೆ. ಚಾಮರಸನ 'ಪ್ರಭುಲಿಂಗ ಲೀಲೆ' ಯಲ್ಲಿ ಪರಶಿವನೇ ಅಲ್ಲಮನಾಗಿ ಭೂಮಿಗೆ ಬಂದು ಮದ್ದಳೆಗಾರನಾಗಿ, ಮಾಯಾದೇವಿಯ ಮೋಹಕ್ಕೆ ಸಿಲುಕದೆ ಲೋಕಕಲ್ಯಾಣಕ್ಕಾಗಿ ಜನರಿಗೆ ಮಾರ್ಗದರ್ಶನವನ್ನು ನೀಡಿದವನು. ಶಿವ ಪಾರ್ವತಿಯವರ ನಡುವಿನ ಸ್ಪರ್ಧೆಯಲ್ಲಿ ಅಲ್ಲಮ ಪರೀಕ್ಷೆಗೆ ಒಳಗಾಗುತ್ತಾನೆ. ಮದ್ದಳೆಗಾರನಾದ ಈತನಲ್ಲಿ ರಾಜಕುಮಾರಿ ಮಾಯಾದೇವಿ ಅನುರಕ್ತಳಾದಾಗ, ಅವಳ ಮನಸ್ಸನ್ನರಿತ ಅಲ್ಲಮ ಅವಳ ಕಳವಳವನ್ನು ಕಂಡು ಇಂತಹವರಿಗೆ ಮೋಕ್ಷವಿಲ್ಲವೆಂದು ಮದ್ದಳೆಯನ್ನು ಒಡೆದು ಅಲ್ಲಿಂದ ಹೊರಟು ಬರುತ್ತಾನೆ. ನಂತರ ತನ್ನ ನಿಜರೂಪವನ್ನು ತೋರಿ ಬಯಲಾಗುವನು. ಈ ರೀತಿಯಲ್ಲಿ ಅವನು ಪಾರ್ವತಿದೇವಿಗೆ ಅಲ್ಲಮನ ಲೀಲೆಯನ್ನು ವಿವರಿಸುತ್ತಾನೆ. "ಅಲ್ಲಮ ಪ್ರಭುವಿನ ಸ್ವರೂಪವೇ ನಾನು. ಲೋಕಹಿತಕ್ಕಾಗಿ ಮಹಾಘನಲಿಂಗವೇ ಅಲ್ಲಮಪ್ರಭುವಾಗಿ ಭೂಮಿಯಲ್ಲಿ ಜನಿಸಿ ನನ್ನ ಮೇಲೆ ಲೀಲೆ ತೋರಿದೆ" ಎಂದಿದ್ದಾನೆ. ಹೀಗೆ ಶೈವ ಪುರಾಣಗಳಲ್ಲಿ ಪರಶಿವನ ರೂಪಿ ಅಲ್ಲಮ ಎಂದೇ ಚಿತ್ರಿತನಾಗಿದ್ದಾನೆ.

ಪಾರ್ವತಿದೇವಿಯ ಸಾತ್ವಿಕ ಕಳೆಯಾದ ಅಕ್ಕಮಹಾದೇವಿ ಅಲ್ಲಮ ಪ್ರಭುವಿನಿಂದ ಜ್ಞಾನಮಾರ್ಗವನ್ನು ತಿಳಿದು ಶ್ರೀಶೈಲದಲ್ಲಿ ಐಕ್ಯ ಹೊಂದುತ್ತಾಳೆ. ಗೊಗ್ಗಯ್ಯನಿಗೆ ಅಲ್ಲಮನು ಪ್ರಾಣಲಿಂಗಾನುಸಂಧಾನವನ್ನು ಮಾಡುತ್ತಾನೆ. ಮುಕ್ತಾಯಕ್ಕನಿಗೆ ಸಂಸಾರದಿಂದ ಪಾರಾಗುವ ಮಾರ್ಗ

ತಿಳಿಸುತ್ತಾನೆ. ಕಲ್ಯಾಣದಲ್ಲಿ ಮಹಾದಾಸೋಹ ಕಾರ್ಯವನ್ನು ಮಾಡುತ್ತಿದ್ದ ಬಸವಣ್ಣನಲ್ಲಿ ಆರೋಗಣೆ ಮಾಡಿ ಭಕ್ತಿಯನ್ನು ದಯಪಾಲಿಸುತ್ತಾನೆ. ಹೀಗೆ ಹನ್ನೆರಡನೆಯ ಶತಮಾನದಲ್ಲಿ ಸಮಕಾಲೀನ ಶಿವಶರಣರಿಗೆಲ್ಲರಿಗೂ ಮಾರ್ಗದರ್ಶಕನಾಗಿ, ಚಾರಿತ್ರಿಕ ವ್ಯಕ್ತಿಯಾಗಿ ಗುರುತಿಸಲ್ಪಡುತ್ತಾನೆ. ಅಲ್ಲಮ ಪ್ರಭುವಿನ ವಚನಗಳಲ್ಲಿ ಅವನ ಜೀವನ ರೀತಿಯ ವಿವರಣೆಯಿದ್ದರೆ ಇತರ ವಚನಕಾರರು ಆತನ ಮಹಿಮೆಯನ್ನು ಕೊಂಡಾಡಿದ್ದಾರೆ.

ಬಸವಣ್ಣನವರು "ಅಂಗದ ಮೇಲೆ ಲಿಂಗ ಆಯತವಾಗಿ, ಲಿಂಗಾರ್ಚನೆಯ ಮಾಡಿದರೆ ಭವಹಿಂಗದೆಂದು......... ಕಾಯದ ಕಳವಳ ದಾಸೋಹ ಮುಖದಲ್ಲಲ್ಲದೆ ಹರಿಯದೆಂದು ಜಂಗಮ ಮುಖಲಿಂಗವಾಗಿ ಬಂದು ಎನ್ನ ರಕ್ಷಿಸಿ ಎನ್ನ ಸಂಸಾರದ ಪ್ರಕೃತಿಯ ಹರಿದನಯ್ಯ ಪ್ರಭುದೇವರು. ಚೆನ್ನಬಸವಣ್ಣನ ಮತ್ತು ಪ್ರಭುದೇವರ ಕರುಣದಿಮದ ತಾನು ಬದುಕಿದೆನು" ಎಂದಿದ್ದಾರೆ. ಅಲ್ಲದೆ "ಪ್ರಭುವಿನ ಶ್ರೀಪಾದದೊಳಗಿರ್ದು ಸುಖಿಯಾದೆನು", "ನಾನು ಪ್ರಭುದೇವರ ತೊತ್ತಿನ ಮಗನೆಂಬುದನ್ನು ಮೂರುಲೋಕವೂ ಬಲ್ಲದು", ಪ್ರಭು ಲಿಂಗಾರ್ಚನೆಯ ಮಾಡಲು ನಾನೇ ಪರಿಚಾರಕನು" – ಹೀಗೆ ಹಲವು ಬಗೆಯಲ್ಲಿ ಅಲ್ಲಮನ ವ್ಯಕ್ತಿತ್ವವನ್ನು ಹಾಡಿ, ತನ್ನ ವ್ಯಕ್ತಿತ್ವದ ಮೇಲೆ ಅಲ್ಲಮ ಬೀರಿದ ಪ್ರಭಾವವನ್ನು ಹೇಳುತ್ತಾ ಅಲ್ಲಮನ ಸಾಧನೆಯ ಮಹತ್ವವನ್ನು ಹೇಳುತ್ತಾರೆ. ಅಕ್ಕಮಹಾದೇವಿಯು "ಬಸವಣ್ಣನೇ ಗುರು. ಪ್ರಭುದೇವರೇ ಲಿಂಗ..", "ಪ್ರಭುದೇವರ ತೊತ್ತಿನ ಮಗಳಾದ ಕಾರಣ ಜ್ಞಾನ ಪ್ರಸಾದವ ಕೊಟ್ಟನು", ಇತ್ಯಾದಿ ಬಗೆಬಗೆಯಾಗಿ ವಿವರಿಸಿದ್ದಾಳೆ. ಹೀಗೆ ಅಲ್ಲಮ ಸಮಕಾಲೀನ ವಚನಕಾರರಿಗೆ ಶಿವಭಕ್ತಿ, ಶಿವತತ್ವ, ಶಿವಜ್ಞಾನ, ಮೋಕ್ಷಗಳನ್ನು ನೀಡಿರುವುದು ತಿಳಿದು ಬರುತ್ತದೆ.

ಸಾಮಾನ್ಯರಂತೆ ಲೌಕಿಕನಾಗಿದ್ದ ಅಲ್ಲಮ, ಪ್ರಭುದೇವನಾದ ವಿಕಾಸ ಕ್ರಮವನ್ನು ಬೇರೆ ಬೇರೆ ಘಟ್ಟಗಳಲ್ಲಿ ಗುರುತಿಸಿಕೊಳ್ಳಬಹುದು. ಹುಟ್ಟಿನಿಂದ ಭಕ್ತಜೀವನ ಬೆಳೆದ ಬಗೆ, ನಂತರ ಲಿಂಗ ದೊರಕಿ ಸಾಧಕನಾಗಿ, ಜ್ಞಾನಿಯಾದ ಹಂತ, ಕೊನೆಯಲ್ಲಿ ತನ್ನ ಅರಿವಿನ ಮೂಲಕ ವಚನ ರಚನೆ ಮಾಡಿ, ಇತರರಿಗೆ ಮಾರ್ಗದರ್ಶನ ಮಾಡಿ ಶೂನ್ಯಸಿಂಹಾಸನಾಧೀಶ್ವರನಾಗಿ ಲಿಂಗೈಕ್ಯನಾಗಿ ಲೌಕಿಕ ಜೀವನದ ಎಲ್ಲ ಕಹಿ–ಸಿಹಿ ಅನುಭವಗಳನ್ನುಂಡು ನಶ್ವರತೆಯ ಅರಿವು ಮೂಡಿಸಿ, ಸಾರ್ಥಕ ಜೀವನದತ್ತ ತೆರಳುತ್ತಾನೆ. ಲಿಂಗ ದೊರಕಿದ ನಂತರ ಸಾಧನೆಯ ಹಾದಿಯಲ್ಲಿ ಅನುಭಾವದ ನೆಲೆಯನ್ನು ತಲುಪುತ್ತಾನೆ. ನಂತರ ಸಂತನಾಗಿ ಅಜ್ಞಾನ, ಡಾಂಭಿಕತೆ, ತುಂಬಿದ್ದ ಬದುಕಿನಲ್ಲಿ ಅರಿವಿನ ಮೂರ್ತಿಯಾಗಿ ಹಲವು ಶಿವಶರಣರಿಗೆ ದಾರಿದೀಪನಾಗುತ್ತಾನೆ.

ಅಲ್ಲಮನ ವ್ಯಕ್ತಿತ್ವ ಸಮಕಾಲೀನರಾದ ಎಲ್ಲ ಹಿರಿ – ಕಿರಿಯರಲ್ಲಿ ಭಯ ಭಕ್ತಿ ಮೂಡಿಸುವುದೇ ಹೊರತು ಸಲುಗೆಯನ್ನಲ್ಲ. ಅವನೊಬ್ಬ ಪ್ರಶ್ನಾತೀತ ವ್ಯಕ್ತಿಯಾಗಿ ಕಾಣಿಸುತ್ತಾನೆ. ಅವನ ಬೆಡಗಿನ ವಚನಗಳಂತೆ, ಅಂಕಿತನಾಮದಂತೆ ಅವನ ವ್ಯಕ್ತಿತ್ವವು ಗುಹ್ಯತರವಾಗಿದ್ದು ಎಲ್ಲರಿಗೂ ಸುಲಭಸಾಧ್ಯವಲ್ಲ.

ನಿಷ್ಠುರ ಮಾತು, ವಿಡಂಬನೆ ಮಾಡುವಲ್ಲಿ ತೀರಾ ಕಟುವಾಗಿ ಕಾಣಿಸುತ್ತಾನೆ. ಆತನ ವಚನಗಳೇ ಆತನ ವ್ಯಕ್ತಿತ್ವ ಅಂತರ್ಮುಖಿಯಾಗಿರುವುದೆಂದು ಸ್ಪಷ್ಟಪಡಿಸುತ್ತದೆ. ಬಸವಣ್ಣ ಸಾಮಾಜಿಕ ಜೀವನದಲ್ಲಿ ಬೆರೆತದ್ದು ಕಂಡರೆ ಅಲ್ಲಮನ ವ್ಯಕ್ತಿತ್ವ ಬೇರೆಯವರೊಡನೆ ಬೆರೆಯಲಾಗದ್ದು ಎಂಬುದು ತಿಳಿದುಬರುತ್ತದೆ. ಲೌಕಿಕ ಬದುಕಿನಲ್ಲಿ ವಿರಕ್ತನಾಗಿದ್ದರೂ, ಆತನ ದೃಷ್ಟಿಯು ಬಾಳನ್ನು ಆಸ್ಥೆಯಿಂದ, ಮರುಕದಿಂದ, ಮನುಷ್ಯರನ್ನು ಉದ್ಧಾರಮಾಡುವ ದೃಷ್ಟಿ ಉಳ್ಳದಾಗಿತ್ತು. ಜ್ಞಾನದ ವಿಚಾರದಲ್ಲಿ ಮೇರು ವ್ಯಕ್ತಿಯಾಗಿ, ಅಸಹನೆ ಇದ್ದಲ್ಲಿ ಮಾತುಗಳು ಅಗ್ನಿಯ ಕಿಡಿಗಳಾಗಿ ಗೋಚರವಾಗುತ್ತವೆ. ಏಕಕಾಲದಲ್ಲಿ ವಿರಕ್ತನೂ, ಕವಿಯೂ, ಜ್ಞಾನಿಯೂ, ಅನುಭವಿಯೂ ಆಗಿದ್ದ ಅಲ್ಲಮ ಕೆಲವು ಬಾರಿ ಅತಿಮಾನುಷ ವ್ಯಕ್ತಿಯೂ ಆಗಿದ್ದಿರಬೇಕೆಂಬ ಭಾವವು ಆತನ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದೆಂದು ತಿಳಿದು ಬರುತ್ತದೆ. ಮಾತಿಗೆ ನಿಲುಕದ ಅರಿವು, ಅನುಭಾವಗಳನ್ನು ಮಾತಿನಿಂದಲೇ ನಿರೂಪಿಸಹೊರಡುತ್ತಾನೆ. ಕೆಲವು ಬಾರಿ ಆತನೇ ಅಭಿವ್ಯಕ್ತಿ ಸಾಧ್ಯವಾಗದೇ ಇದ್ದಾಗ 'ಶಬ್ದದ ಲಜ್ಜೆಯ ನೋಡಾ', 'ನಿಶ್ಶಬ್ದವೇ ಅನುಭಾವ' ಎಂದಿದ್ದಾನೆ.

ಅಲ್ಲಮನ ಅಂತರಂಗದ ಬೆಳವಣಿಗೆ ಆತನ ವಚನದಲ್ಲೇ ವ್ಯಕ್ತವಾಗುವ ಬಗೆ ಈ ರೀತಿ ಇದೆ:

'ಎಸೆಯದಿರು ಎಸೆಯದಿರು, ಕಾಮ ನಿನ್ನ ಬಾಣ ಹುಸಿಯಲೇಕೋ
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಇದು ಸಾಲದೇ ನಿನಗೆ?
ಗುಹೇಶ್ವರ ಲಿಂಗದ ವಿರಹದಲ್ಲಿ ಬೆಂದವರ
ಮರಳಿ ಸುಡಲುಂಟೆ ಮರುಳು ಕಾಮಾ'

ವಿರಹದ ಸ್ವರೂಪ ಇಲ್ಲಿ ವ್ಯಕ್ತವಾಗಿರುವುದು ಲೌಕಿಕತೆಯ ನೆಲೆಯಿಂದಲಿ ಗೊಹೇಶ್ವರ ಲಿಂಗದ ವಿರಹದಲ್ಲಿ ಶರಣ ಬೇಯುವ ಬಗೆ, ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ ವಿರಹದಲ್ಲಿ ಬೇಯುವಂತೆ ಇಲ್ಲಿ ಲಿಂಗದ ಸತ್ಯ ಮಾಯೆಯ ಮಿಥ್ಯೆಯನ್ನು ಅಲ್ಲಗೆಳೆಯುತ್ತದೆ. ಅಲ್ಲಮನ ಭಾಷೆ ಆತನ ವೈಚಾರಿಕತೆಯನ್ನು ನಿಯಂತ್ರಿಸದೆ, ಬೇಕಾದಂತೆ ನಿಯಮಿತಗೊಂಡು ಅರ್ಥವನ್ನು ಪ್ರಕಟಿಸುತ್ತದೆ. ಇದಕ್ಕೆ ಕಾರಣ ಅಲ್ಲಮನ ಜ್ಞಾನ, ತಿಳುವಳಿಕೆ ಒಂದು ಸುಸಂಗತ ತಾರ್ಕಿಕತೆಯ ಅನುಭವವನ್ನು ಮೀರಿರುವುದಾಗಿದೆ. ಅಲ್ಲಮ ಸಂಸಾರದ ಅಂದರೆ ಲೌಕಿಕದ ಎಲ್ಲ ಬಂಧಗಳನ್ನು ಕಳಚಿಕೊಂಡು ಗುಹೇಶ್ವರನೊಂದಿಗೆ ಸಂಬಂಧ ಬೆಳೆಸಿಕೊಂಡವನು. ಆದ್ದರಿಂದ ಶಬ್ದದೊಂದಿನ ಆತನ ಸಂಬಂಧವು ನಿಶ್ಶಬ್ದವೇ ಆಗಿದೆ. ಲಿಂಗವನ್ನು ಕುರಿತು ಆತ ಹೇಳುವ 'ಶಬ್ದದೊಳಗಣ ನಿಶ್ಶಬ್ದದಂತೆ ಗೊಹೇಶ್ವರಾ ನಿಮ್ಮ ಶರಣ ಸಂಬಂಧ' ಎಂಬ ಮಾತು ವಿಶಿಷ್ಟತೆಯನ್ನು ಎತ್ತಿ ಹಿಡಿಯುತ್ತದೆ. ಹೀಗೆ ಅಲ್ಲಿಯ ವ್ಯಕ್ತಿತ್ವ ಮತ್ತು ಆತನ ಶಬ್ದಗಳು ಸಂಬಂಧಗಳ ಹಂಗಿಲ್ಲದೆ ಬೆಳಗುವ ಅನುಭಾವ ಜ್ಯೋತಿಯಾಗಿದೆ. ಅಲ್ಲಮನದು ಜ್ಞಾನ ಮಾರ್ಗ. ಕರ್ಮಮಾರ್ಗವಲ್ಲ. ಏಕೆಂದರೆ ಕರ್ಮಮಾರ್ಗದ ಮೂಲಕ ತಲುಪುವ ಗಮ್ಯ ಕೇವಲ ಸೀಮಿತವಾದುದೇ ಆಗಿದೆ ಎಂಬುದೇ ಆತನ ನಂಬಿಕೆ.

ಹೀಗೆ ಅಲ್ಲಮನ ವ್ಯಕ್ತಿತ್ವ ವ್ಯಕ್ತವಾಗುವುದೆ ಭೌತಿಕ ನೆಲೆಗಳಿಂದ ಸಂಪೂರ್ಣವಾಗಿ ಪ್ರತ್ಯೇಕ ಹೊಂದುವ ನೆಲೆಯಿಂದ. ಆತನ ವ್ಯಕ್ತಿತ್ವದಲ್ಲೇ ಕಾಣುವ ವಿಶಿಷ್ಟತೆ ಎಂದರೆ ಆಧ್ಯಾತ್ಮಿಕ ಒಂಟಿತನ. ಇದರ ಮೂಲಕ ಸಾಧಿಸುವ ಅರಿವಿನ ಅನುಭಾವದ ನೆಲೆಯೇ ಗಟ್ಟಿಯಾದದ್ದು ಎನ್ನುವ ದೃಷ್ಟಿಕೋನ. ಆದ್ದರಿಂದಲೇ ವಿದ್ವಾಂಸರ ಪ್ರಕಾರ ಅಲ್ಲಮನ ಅಂಕಿತನಾಮ 'ಗುಹೇಶ್ವರ' ಎಂಬುದು ಕೇವಲ ಆಕಸ್ಮಿಕವಲ್ಲ. ಅದು ಸಾಂಕೇತಿತಾರ್ಥದ ಮೂಲಕ ಆತ ಆಶಿಸುವ ಆಧ್ಯಾತ್ಮಿಕ ಒಂಟಿತನ ಆಗಿದೆ. ಜ್ಞಾನದ, ಅರಿವಿನ, ಅನುಭಾವ ಬೆಳಕು ಮೂಡಲು ಸೂಕ್ತ ಅಂಕಿತವಾಗಿ ಸಮರ್ಥನೀಯವಾಗುತ್ತದೆ. ಹಾಗೆಯೇ ಆತನ ಬದುಕಿನ ನೆಲೆಯು ಪ್ರಜ್ಞಾಪೂರ್ವಕ ಆಯ್ಕೆಯಾಗಿರಬೇಕು ಎಂಬುದು ಕಂಡುಬರುತ್ತದೆ. ಯಾಕೆಂದರೆ ಎಲ್ಲ ಕಾಲಕ್ಕೂ ಅನುಭಾವಿಗಳ ಸಾಧನೆಯ ಪಥದಲ್ಲಿ ಸಮಾಜದಿಂದ ಪರಿತ್ಯಕ್ತನಾಗಿರುವ ನೆಲೆ ಕಂಡು ಬರುತ್ತದೆ. ಹಾಗೆಯೇ ಲೌಕಿಕ ಬದುಕಿನ ಬಾಂಧವ್ಯದಿಂದ ದೂರವಾಗುವಲ್ಲಿ ಕುಟುಂಬ ರಚನೆಯ ನಿರಾಕರಣೆ. ಹಾಗೆಯೇ ಸಾಮಾಜಿಕ ರಚನೆಯ ನಿರಾಕರಣೆಯು ಕಂಡುಬರುತ್ತದೆ. ಹೀಗೆ ಅಲ್ಲಮನ ವಚನಗಳನ್ನು ಅಧ್ಯಯನದ ಆಳಕ್ಕೆ ಒಳಗುಪಡಿಸಬೇಕಾದಾಗ, ಲೌಕಿಕವನ್ನು ಮೀರುವ ತೀವ್ರ ಹಂಬಲ ವ್ಯಕ್ತವಾಗುತ್ತದೆ. ಆ ಮೂಲಕ ಅನುಭಾವಿಗೆ ಅವಶ್ಯವಾದ ಒಂಟಿತನ ಹಾಗೂ ಲೌಕಿಕ ಸಮಾಜವನ್ನು ಮೀರಿದಂಥ ವ್ಯಕ್ತಿ ವಿಶಿಷ್ಟತೆಯನ್ನು ಅಲ್ಲಮ ಪ್ರತಿಪಾದಿಸುತ್ತಾನೆ.

ಅಲ್ಲಮನ ಖಾಸಗಿ ಬದುಕಿನ ಕುರಿತಾಗಿ ಸಿಗುವ ಮಾಹಿತಿಗಳು ಸಂಪೂರ್ಣವಾಗಿ ಬದುಕಿನ ವಿಚಾರಗಳನ್ನು ತೋರಿಸಿರುವಂತೆ ಕಂಡುಬರುವುದಿಲ್ಲ. ಅನುಮಾನ, ಸಂದೇಹ, ಪ್ರಶ್ನೆಗಳು ಕಾಡುತ್ತಲೇ ಇವೆ. ಆದರೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಿಗುವ ಮಾಹಿತಿಗಳ ಆಧಾರದಲ್ಲಿ, ಅಲ್ಲಿನ ಮಾತುಗಳ ಛಾಯೆಯನ್ನು, ಧ್ವನಿಯನ್ನು ಗಮನಿಸಿದರೆ ಸಾಕಷ್ಟು ಕತ್ತಲಿನ ದಿನಗಳನ್ನು ಕಳೆದಿದ್ದಾನೆಂಬುದು ತಿಳಿದುಬರುತ್ತದೆ. ಆದರೆ ಸಾಧಕನಾಗಿ ಅಲ್ಲಮನ ಬದುಕು ಆ ಕತ್ತಲನ್ನು ಕಳೆದು ಬೆಳಕಿನೆಡೆಗೆ ಸಾಗಿ ಬಂದಿರುವುದು ಕಂಡುಬರುತ್ತದೆ ಅಲ್ಲಮನ ವಚನಗಳನ್ನೇ ಗಮನಿಸಿದರೂ ಅವನ ಆಧ್ಯಾತ್ಮ ಜೀವನದ ಆರಂಭದ ಹೆಜ್ಜೆಗಳು, ಹಂತಗಳು ಸ್ಪಷ್ಟವಾಗಿಲ್ಲ. ಆದರೆ ಅಲೌಕಿಕವಾದ ರೀತಿಯಲ್ಲಿ ಆತ್ಮಜ್ಞಾನ ಹೊಂದಿರುವನೆಂಬುದು ಬಹುತೇಕ ನಿಸ್ಸಂಶಯವಾಗುತ್ತದೆ. ತನಗೆ ಗುರುದರುಶನವಾದ ಸಂದರ್ಭವನ್ನು ಅಲ್ಲಮ "ಆಕಾರ ನಿರಾಕಾರವ ನುಂಗಿ, ಬಯಲು ಸಮಾಧಿಯಲ್ಲಿ ಸಿಲುಕಿತ್ತು ನೋಡಾ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಜ್ಞಾನವನ್ನು ಅರಸಿ ಹೊರಟ ಅವನಿಗೆ 'ಅರಸುವ ಬಳ್ಳಿ ಕಾಲ ಸುತ್ತಿತ್ತೆಂಬಂತೆ ಎದುರಾಯಿತು ಎಂದಿದ್ದಾನೆ. ಅನಿಮಿಷ ಗುರುನಾಥರಿಂದ ಜ್ಞಾನಧಾರೆಯನ್ನು ಅನುಗ್ರಹಿಸಿಕೊಂಡ ಅಲ್ಲಮ ಅದನ್ನು ಅನುಭವಕ್ಕೆ ತಂದುಕೊಂಡು, ಜಗತ್ತಿಗೆ ನೀಡಿದ ಪರಿ ವಿಶಿಷ್ಟವಾದದ್ದು. ಶ್ರೀ ಗುರುವಿನಿಂದ ಜ್ಞಾನ ಪ್ರಾಪ್ತವಾದ ಸಂದರ್ಭದಲ್ಲಿ ಅಲ್ಲಮನು –

'ನೆನಹು ಸತ್ತಿತ್ತು, ಭ್ರಾಂತು ಬೆಂದಿತ್ತು, ಅರಿವು ಮರೆಯಿತ್ತು,

ಕುರುಹುಗೆಟ್ಟಿತ್ತು, ಗತಿಯನರಸಲುಂಟೆ? ಮತಿಯನರಸಲುಂಟೆ?

ಅಂಗವೆಲ್ಲ ನಷ್ಟವಾಗಿ, ಲಿಂಗ ಲೀಯವಾಯಿತ್ತು ಕಂಗುಳಂಗದ

ಕಳೆಯ ಬೆಳಗಿನ ಭಂಗ ಹಿಂಗಿತ್ತು ಗೋಹೇಶ್ವರ'

ಎಂದಿದ್ದಾನೆ. ಸೃಷ್ಟಿ, ಸ್ಥಿತಿ, ಲಯ, ಹಾಗೆಯೇ ಭಕ್ತಿ, ಭಕ್ತ, ಕರ್ಮ–ಇವುಗಳ ವಿಚಾರದಲ್ಲೂ ಅಲ್ಲಮನ ನಿಲುವು, ದೃಷ್ಟಿಕೋನ ವಿಶಿಷ್ಟವಾದದ್ದು. ಆತ ಕಾಣಿಸಿಕೊಳ್ಳುವುದೇ ಗುರುವಾಗಿ, ಜ್ಞಾನಿಯಾಗಿ, ಅನುಭಾವಿಯಾಗಿ ಗೊಗ್ಗಯ್ಯನ ಅಂತರಂಗ ಕೃಷಿ ಮಾಡಿಸುತ್ತಾನೆ. ಸಿದ್ಧರಾಮನ ಕರ್ಮಯೋಗಕ್ಕೆ ಜ್ಞಾನದ ಮೆರುಗು ನೀಡುತ್ತಾನೆ. ಅಲ್ಲಮ ಬಾಹ್ಯ ಜಗತ್ತನ್ನು ನಿರಾಕರಿಸುತ್ತಾ ಪೂಜೆಗೂ ಬಾಹ್ಯಪರಿಗಳ ಅಗತ್ಯವಿಲ್ಲವೆನ್ನುತ್ತಾನೆ. ಸಂಸಾರ ಕುರಿತ ನಿರಾಕರಣೆ, ಗುರು–ಶಿಷ್ಯರ ಸಂಬಂಧ –ಮಹತ್ವ ಧಾರ್ಮಿಕ ಆಚರಣಾ ವಿಧಾನಗಳ ವಿರೋಧ ಅಲ್ಲಮನಲ್ಲಿ ಕಂಡುಬರುತ್ತವೆ. ಜ್ಞಾನದ ಎತ್ತರದಲ್ಲಿಯೇ ನಿಂತು ಜಗದ ಬಾಳನ್ನು ನಿಟ್ಟಿಸುವ ಅಲ್ಲಮನಲ್ಲಿ ಆತ್ಮವಿಶ್ವಾಸವು ಆತ್ಮಜ್ಞಾನದ ಅನುಭಾವಿಯ ಆನಂದವೂ ಇದೆ. ಸಂಸಾರದ ಪರಿಯನ್ನು ಕುರಿತು.

"ಧರೆಯ ಮೇಲೊಂದು ಪಿರಿದಪ್ಪ ಸಂತೆಯ ನೆರವಿಗೆ ಬಂದವರನೇಂಬೆನು? ಪರಿಪರಿಯ ಬಂಡದ ವ್ಯವಹಾರದೊಳಗೆ ಕೊಡಲಿಲ್ಲ ಕೊಳಲಿಲ್ಲ ವೃಥಾ ವಿಳಾಸವಿದೇನೋ?" ಎಂದಿದ್ದಾರೆ. ಜ್ಞಾನವಿರುವಲ್ಲಿ ಮರೆವಿಲ್ಲ. ಮರೆವಿದ್ದಲ್ಲಿ ಜ್ಞಾನವಿಲ್ಲ. ಅಖಂಡ ಸಚ್ಚಿದಾನಂದ ಜ್ಞಾನರೂಪಿ ನಿರುಪಮ ಅಗೋಚರ ಎಂದು ಪರತತ್ತ್ವವನ್ನು ಹೊಗಳುತ್ತದೆ. ಮಾತನ್ನು ಜ್ಯೋತಿರ್ಲಿಂಗವನ್ನಾಗಿ ಏರ್ಪಡಿಸಿದ ಅಲ್ಲಮಪ್ರಭು ಶ್ರೇಷ್ಠ ಅನುಭಾವ ಸಾಹಿತಿಯಾಗಿದ್ದಾನೆ.

೪.೨ ಅಲ್ಲಮನ ಬೆಡಗಿನ ವಚನಗಳು

ವಚನ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಬೆಡಗಿನ ವಚನಗಳು ವಿಶಿಷ್ಟ ಸ್ಥಾನವನ್ನು ಪಡೆದಿವೆ. ಅವುಗಳೊಳಗಿನ ಅರ್ಥವನ್ನು ವ್ಯಾಖ್ಯಾನಿಸಿಕೊಳ್ಳಲು ಆ ಪಾರಿಭಾಷಿಕ ಪದಗಳ, ಪ್ರತಿಮೆಗಳ ಸ್ಥೂಲ ಪರಿಚಯ ಬೇಕಾಗುತ್ತದೆ. ಬೆಡಗು ಅಂದರೆ ಬೆರಗು, ಸೌಂದರ್ಯ, ಮನೋಜ್ಞ, ಜಾಣ್ಮೆ, ಚತುರೋಕ್ತಿ ಮೊದಲಾದ ಅರ್ಥಗಳಿವೆ. ಅಸ್ಪಷ್ಟವಾದುದನ್ನು, ಅನಂತವಾದುದುನ್ನು ವಾಸ್ತವದ ಖಚಿತತೆಗೆ ಆರೋಪಿಸುವ ಬಗೆಯೆ ಬೆಡಗಿನ ವಚನಗಳು. ೧೨ನೇ ಶ ದ ವಚನಸಾಹಿತ್ಯದಲ್ಲಿ ಬೆಡಗು ಪದ ವಿಶಿಷ್ಟತೆಯನ್ನು ಗಳಿಸಿಕೊಂಡಿತು. ಬೆಡಗಿನ ವಚನಗಳಲ್ಲಿ ಬಾಹ್ಯ ಶಿಲ್ಪದ ಮೂಲಕ ಗೋಪ್ಯವಾದ ಗೂಢಾರ್ಥವನ್ನು ವಿಶಿಷ್ಟ ಶಬ್ದ ರೂಪಗಳ ಯೋಜನೆಯ ಹಿನ್ನೆಲೆಯಲ್ಲಿ ವಿವರಿಸಿಕೊಳ್ಳಬೇಕು. ಇಲ್ಲಿಯ ಅರ್ಥವೆಂಬುದು ಬುದ್ಧಿಯ ಮತ್ತು ಸರಳ ತರ್ಕದ ಕೆಲಸವಲ್ಲ. ಬೆಡಗಿನ ವಚನಗಳ ಬೆರಗು ಅನುಭವಕ್ಕೆ ಬರಬೇಕಾದರೆ ಅಲ್ಲಿ ಒಂದು ಸಂಬಂಧ ಏರ್ಪಡಬೇಕು. ಅದೆಂದರೆ ಅನುಭವಕ್ಕೆ ಕಾರಣವಾಗುವ ವಸ್ತು

ಮತ್ತು ನಮ್ಮ ನಡುವೆ ಏರ್ಪಡುವ ಸಂಬಂಧದ ಬಗೆ. ಇಲ್ಲಿ ಸಾದೃಶ್ಯಗಳನ್ನು, ಕಾವ್ಯ ಪ್ರತಿಮೆಗಳನ್ನು ನೇರವಾಗಿ ಬಳಸದೆ ಸಾಂಕೇತಿಕವಾಗಿ, ಗೂಢಾರ್ಥಕ್ಕೆ ಕಾರಣವಾಗುವ ರೀತಿಯಲ್ಲಿ ಅಳವಡಿಸುವುದು. ಇದಕ್ಕೆ ಲೌಕಿಕತೆಯ ಸ್ಪರ್ಶವಿಲ್ಲ. ಇವುಗಳು ಅನುಭವಕ್ಕೆ ಬರಲು ಸಿದ್ಧ ಸಂಕೇತಗಳ ಪಾರಿಭಾಷಿಕ ಪದಗಳ ಅರ್ಥ ತಿಳಿದಿರಬೇಕು. ಏಕೆಂದರೆ ಇಂತಹ ವಚನಗಳ ಹಿಂದೆ ಆಧ್ಯಾತ್ಮದ ಭಾವ ಇದ್ದೇ ಇರುತ್ತದೆ. ಪಾರಮಾರ್ಥಿಕ ಅನುಭವ, ಗಹನವಿಚಾರ ವ್ಯಕ್ತಪಡಿಸುವಲ್ಲಿ ಇಂತಹ ಪರಿಭಾಷೆಗಳ ಬಳಕೆ ಕಂಡು ಬೆಡಗಿನ ವಚನಗಳು ರಚನೆಯಾಗುತ್ತವೆ. ಏಕೆಂದರೆ ನೇರವಾದ ಮಾತಿನಲ್ಲಿ ಆ ಭಾವಗಳನ್ನು ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲ. ಇಲ್ಲಿ ಬಳಕೆಯಾಗುವ ಪ್ರತಿಮೆಗಳಿಗೆ ಅರ್ಥವಿರುವುದಿಲ್ಲ. ಅವು ಸ್ವತಂತ್ರವಾಗಿದ್ದು ಗಹನವಾದ ಅನುಭವಗಳು ಸಾಂಕೇತಿಕವಾಗಿ ಕಟ್ಟಿಕೊಡುತ್ತವೆ.

ಹೆಸರು, ವ್ಯಕ್ತಿತ್ವ, ಸಾಧನೆಗಳ ಮೂಲಕ ಸಹಜವಾಗಿಯೇ ಬೆರಗು ಹುಟ್ಟಿಸಬಲ್ಲ ವ್ಯಕ್ತಿತ್ವ ಅಲ್ಲಮನದು. ನೇರ ಮಾತುಗಳಿಂದಲೇ ಅದ್ಭುತ ಪರಿಣಾಮ ಸಾಧಿಸಬಲ್ಲ ಅಲ್ಲಮ, ವಚನಕಾರರಲ್ಲಿ, ಬೆಡಗಿನ ವಚನಗಳ ಬಳಕೆಯಲ್ಲಿ ಮುಖ್ಯವಾಗುತ್ತಾನೆ. ಪ್ರಮಾಣ ಮತ್ತು ಪರಿಣಾಮದ ದೃಷ್ಟಿಯಿಂದಲೂ ಅಲ್ಲಮನ ಬೆಡಗಿನ ವಚನಗಳು ಮಹತ್ವದೆನಿಸುತ್ತದೆ. ಹೊರ ನೋಟಕ್ಕೆ ಅಸಂಗತವಾಗಿ ಅಸಂಬದ್ಧವಾಗಿ ಕಾಣುವ ಬೆಡಗಿನ ವಚನಗಳಲ್ಲಿ ಅನುಭಾವ ಪಥದ ವಿಶಿಷ್ಟ ಹಂತ ವ್ಯಕ್ತವಾಗುತ್ತದೆ.

ಕೆಂಡದ ಗಿರಿಯ ಮೇಲೊಂದು ಅರಗಿನ ಕಂಬವಿದ್ದಿತ್ತು ನೋಡಾ
ಅಯ್ಯ ಅರಗಿನ ಕಂಭದ ಮೇಲೊಂದು ಹಂಸೆಯಿದ್ದಿತ್ತು.
ಕಂಬ ಬೆಂದಿತ್ತು ಹಂಸೆ ಹಾರಿತ್ತು ಗುಹೇಶ್ವರಾ

ಮಹಾಜ್ಞಾನಾಗ್ನಿಯೇ ಕೆಂಡದಗಿರಿ. ಅದರ ಮೇಲೆ ಶರಣನ ಭಾವವೆಂಬ ಕಂಬವಿದೆ. ಆ ಭಾವಸ್ತಂಭದ ಮೇಲೆ 'ಪರಮಹಂಸ' ವೆಂಬ ತತ್ತ್ವವಿದೆ. ಆ ಭಾವ ಜ್ಞಾನಾಗ್ನಿಯಲ್ಲಿ ಬೆಂದು ಹೋಗಬೇಕು. ಆಗ ಅಲ್ಲಿ ಉಳಿಯುವುದು ಬರೀ ಬೆಳಗು ಮಾತ್ರ, ಅದರಲ್ಲಿ ಆಡುವ ಮಾತು ಜ್ಯೋತಿರ್ಲಿಂಗವಾಗುತ್ತದೆ. ಅನುಭಾವವೆಂಬುದು ತೋರಿಕೆಯ ಅಸ್ಥಿರ ವಸ್ತು ಸತ್ಯದಿಂದ ಶಾಶ್ವತವನ್ನು ಅನುಭವಿಸುವುದರ ಕಡೆಗೆ ಸಾಗುತ್ತದೆ. ಅನುಭಾವವೆಂಬುದು ಕೇವಲ ಅರಿವಲ್ಲ. ದೃಷ್ಟಿಯೂ ಅಲ್ಲ ಎಂದಿದ್ದಾನೆ.

ಅಲ್ಲಮನ ಬೆಡಗಿನ ವಚನಗಳ ಮುಖ್ಯ ಆಶಯ ಜೀವಿಗಳನ್ನು ಸಾಂಸಾರಿಕ ಬಂಧನದ ಪರಿಮಿತಿಯಿಂದ ಸಮರ್ಥವಾಗಿ ಹೊರಕ್ಕೆ ತರುವುದು. ಬೆಡಗಿನ ಸಾದೃಶ್ಯಗಳ ಮೂಲಕ ಜೀವನದ ಅಜ್ಞಾನವನ್ನು ನಶ್ವರತೆಯನ್ನೂ ಅದನ್ನು ಕಳೆದುಕೊಳ್ಳುವುದರಿಂದ ಉಂಟಾಗುವ ಅನುಪಮ ಆನಂದವನ್ನು ತಂದುಕೊಡಲು ಬಯಸುತ್ತದೆ.

ಆನೆಯೆ ಹೆಣ ಬಿದ್ದರೆ ಕೋಡಗ ಮುದ್ದಾಡಿಸಿತ್ತ ಕಂಡೆನಯ್ಯಾ
ಕಾಡೊಳಗೊಬ್ಬ ಸೂಳೆ ಕರೆಕರೆದೊತ್ತೆಯ ಕೊಂಬುದ ಕಂಡೆನಯ್ಯಾ

ಹಾಳೂರೊಳಗೆ ನಾಯ ಜಗಳವ ಕಂಡೆ
ಇದೇನು ಸೋಜಿಗ ಹೇಳಾ ಗುಹೇಶ್ವರ

ಇಲ್ಲಿ ಬರುವ ಪ್ರಾಣಿ ಪ್ರಪಂಚವನ್ನು ಬೆಡಗಿನ ಪ್ರತೀಕಗಳಾಗಿ ಬಳಸಿ ಒಂದೊಂದು ಪ್ರಾಣಿಗೂ ಭಿನ್ನ ಸ್ವಭಾವವನ್ನು ಆರೋಪಿಸುತ್ತಾನೆ. ಆನೆ ಅಹಂಕಾರದ ಪ್ರತೀಕ. ಅಹಂ ಜೀವನಾಶಕವಾಗಿ ಶರೀರದೊಳಗೆ ಸೇರಿಕೊಂಡಿದೆ. ಬದುಕಿಯೂ ಸತ್ತಂತಿರುವ ಶರೀರಗತ ಜೀವವನ್ನು ಮರ್ಕಟಮನಸ್ಸು ಲಾಲಿಸುತ್ತದೆ. ಹುಟ್ಟು-ಸಾವು ಭವ ಬಂಧನಗಳಿಂದ ಆವೃತ್ತವಾಗಿರುವ ಕಾಡಿನಲ್ಲಿ ಸೂಳೆ ತನ್ನ ಆಕರ್ಷಕತೆಯನ್ನು ಬೀರಿ ಎಲ್ಲರನ್ನೂ ಸೆಳೆದುಕೊಳ್ಳುತ್ತಿದ್ದಾಳೆ. ನಾಯಿಗಳ ಜಗಳ ಕರಣಕ್ಕೆ ಕರ್ಕಶತೆಯನ್ನು ತೋರುತ್ತಿದೆ. ಅಂತರಂಗದ ಸಾಧಕನಾದ ಶರಣನಿಗೆ ಆಶ್ಚರ್ಯಕರ ರೀತಿಯಲ್ಲಿ ಅನುಭವಕ್ಕೆ ಬಂದು ಇವನ್ನು ದಾಟಿ ಮುಂದೆ ಹೋಗಲು ಸಿದ್ಧನಾಗುತ್ತಾನೆ. ಅಲ್ಲಮನಲ್ಲಿ ಜ್ಞಾನಕ್ಕೆ ಹೆಚ್ಚು ಪ್ರಾಧಾನ್ಯ. ಎಲ್ಲ ಅನುಭವಗಳಿಗೂ ಜ್ಞಾನದ, ಅನುಭಾವದ ಹೊಳಪು ನೀಡಿದವನು. ಅಂತಹ ಬೆಡಗಿನ ವಚನ –

ಊರ ಹೊರಗೊಂದು ದೇಗುಲ
ದೇಗುಲದೊಳಗೊಬ್ಬ ಗೊರತಿ ನೋಡಯ್ಯ!
ಗೊರತಿಯ ಕೈಯಲ್ಲಿ ಸೂಜಿ
ಸೂಜಿಯ ಮೊನೆಯಲ್ಲಿ ಹದಿನಾಲ್ಕು ಲೋಕ
ಗೊರತಿಯ ಸೂಜಿಯ ಹದಿನಾಲ್ಕು ಲೋಕವ
ಒಂದಿರುವೆ ನುಂಗಿತ್ತ ಕಂಡೆ ಗುಹೇಶ್ವರ.

ದೇಹಗುಣದಿಂದ ಹೊರಗೆ ಚೈತನ್ಯದಾಯಕವಾದ ಶಿವಾಲಯವಿದೆ. ಅಲ್ಲಿ ಜ್ಞಾನಶಕ್ತಿ ಎಂಬ ಗೊರತಿ ಮನವೆಂಬ ಸೂಜಿ ಹಿಡಿದು ಕಾದಿದ್ದಾಳೆ. ಆ ಸೂಜಿ ಮೊನೆಯಲ್ಲಿ ಹದಿನಾಲ್ಕು ಭುವನಗಳಿವೆ. ಶಿವಾನುಭವದಿಂದ ಬಂಧಿಸಲ್ಪಟ್ಟ ಈ ಮನದಲ್ಲಿ ಹದಿನಾಲ್ಕು ಲೋಕಗಳು ಅಡಗಿವೆ. ವಿಶಿಷ್ಟಜ್ಞಾನದ ಮೂಲಕ ಅದನ್ನು ಸರ್ವವ್ಯಾಪಕವಾಗಿ ತನ್ನೊಳಗೆ ಅಡಗಿಸಿಕೊಳ್ಳಬೇಕು. ಆ ಸರ್ವ ವ್ಯಾಪಕತೆಯನ್ನು ಒಂದು ಇರುವೆ ನುಂಗಿತ್ತು- ಎಂದು ಅರ್ಥವತ್ತಾಗಿ ಹೇಳುತ್ತಾನೆ. ಜ್ಞಾನ ಮಾರ್ಗದ ಸಾಧನೆಯ ಸರ್ವವ್ಯಾಪಕ ಶಕ್ತಿಯನ್ನು ಈ ಬೆಡಗಿನ ವಚನ ಎತ್ತಿ ಹಿಡಿಯುತ್ತದೆ.

ಬೆಡಗಿನ ವಚನಗಳ ವಿಚಾರದಲ್ಲಿ ಅಲ್ಲಮನ ಸ್ಥಾನ ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ, ಗುಣದೃಷ್ಟಿಯಿಂದಲೂ ವಿಶಿಷ್ಟವಾದುದು. ಮಾತಿಗೆ ಮೀರಿದ ಅನುಭವಗಳನ್ನು ಹಿಡಿದಿಡುವ ಸಾಂಕೇತಿಕ ಪ್ರತಿಮೆಗಳ ಪ್ರಚೋದಕ ಶಕ್ತಿ ಈ ಬೆಡಗಿನ ವಚನಗಳಲ್ಲಿದೆ. ಸಂಸಾರದಲ್ಲಿ ಸಿಕ್ಕು ಬಳಲುತ್ತಿರುವ ಜೀವದ ಸ್ಥಿತಿಯನ್ನೂ ಈ ರೀತಿ ನಿರೂಪಿಸದಲಾಗಿದೆ.

ಆರೂ ಇಲ್ಲದಾರಣ್ಯದೊಳಗೆ ಮನೆಯ ಕಟ್ಟಿದಡೆ

ಕಾಡುಗಿಚ್ಚು ಎದ್ದುಬಂದು ಹತ್ತಿತ್ತಲ್ಲಾ;
ಆ ಉರಿಯೊಳಗೆ ಮನೆ ಬೇವಲ್ಲಿ
ಮನೆಯೊಡೆಯನೆತ್ತ ಹೋದನೋ?
ಲಿಂಗ ಪ್ರಾಣವೆಂಣಬುದರ ನಿರ್ಣಯವನಿಂದು
ಕಂಡೆ ಗುಹೇಶ್ವರ

ಈ ರಸಕೂಪದಲ್ಲಿರುವ ವಿಷಯರಸವನ್ನು ಜೀವವೆಂಬ ಮೃಗವು ಬಂದು ಕುಡಿಯ... ನಂತರ ಅದರಲ್ಲಿ ಮುಳುಗಿ ಅಂತ್ಯವಾಗುತ್ತದೆ. ಅದನ್ನು ಉರಿಯ ಬಾಣ ಅಂದರೆ ಜ್ಞಾನದ ಕಿಡಿ... ಸೋಂಕಿಸಿ ಮೇಲೆತ್ತಬೇಕು. ಗಾಯವಿಲ್ಲದೆ ಜೀವವೆಂಬ ಮೃಗ ಶಿವಭಾವವನ್ನು ಪಡೆದು ಸತ್ತ... ಸಾಗಿದಾಗ ಆ ಮೂಲಕ ಅಂಗ-ಲಿಂಗ ಸಾಮರಸ್ಯ ಸಾಧ್ಯ ಎನ್ನುತ್ತಾನೆ. ಹೀಗೆ ಅಜ್ಞಾನಿ ... ಜ್ಞಾನಮುಖವಾಗಿ ಶಿವಯೋಗದ ಸುಖ ಪಡೆಯುವ ಸಾಧನೆಯ ಪಥವನ್ನು ಬೆಡಗಿ... ನಿರೂಪಿಸಲಾಗಿದೆ.

ಬೆಡಗಿನ ವಚನಗಳಲ್ಲಿ ಗೂಢಾರ್ಥ ಅಡಗಿರುವಂತೆ ನಿರ್ದಿಷ್ಟ ಧಾರ್ಮಿಕ ಆಚರಣೆಗಳ ಧ... ಹಿನ್ನೆಲೆಯ ಪ್ರತಿನಿಧೀಕರಣವಿದೆ. ಯಾವುದೇ ಶರಣರ ಬೆಡಗಿನ ವಚನಗಳು ಪ್ರಾಣಲಿಂಗಿ ಸ್ಥ... ಅಧಿಕವಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಅಲ್ಲಮಪ್ರಭುವಿನಲ್ಲಿ ಇದಕ್ಕೆ ಅಪವಾದವೆಂಬಂತೆ ಎಲ್ಲೆಡೆ... ವ್ಯಾಪಿಸಿದೆ. ವಿಶಿಷ್ಟ ಪರಿವೇಷದಿಂದ ಮೂಡಿಬಂದ ಪ್ರಭುವಿನ ಬೆಡಗಿನ ವಚನಗಳಲ್ಲಿ ಸಾಧ... ದೊರೆಯುತ್ತದೆ. ಹೀಗೆ ಬೆಡಗಿನ ವಚನಗಳ ಮೂಲಕ ಹೊಸ ಪ್ರತಿಮೆಗಳನ್ನು ಮುರಿದು ಕಟ್ಟುವ ಪ್ರ... ಕಾಣಿಸುತ್ತವೆ.

ಹೀಗೆ ಬೆಡಗಿನ ವಿಶಿಷ್ಟ ಬೆಳಕನ್ನು ಪ್ರಭುದೇವರ ವಚನಗಳಲ್ಲಿ ಗಮನಿಸಬಹುದು. ... ಅರ್ಥಗಳ ಜಾಡನ್ನು ಹಿಡಿದು ಒಳನುಗ್ಗಿದರೆ ಅನುಭಾವ ಪ್ರಪಂಚದ ದೇದೀಪ್ಯಮಾನವಾದ ಪ್ರಭೆ... ಕಾಣಬಹುದು. ಬೆಡಗಿನ ವಚನಗಳ ಸಂಖ್ಯೆ ಮತ್ತು ಗುಣ ಈ ಎರಡೂ ದೃಷ್ಟಿಯಿಂದಲೂ ಅ... ಸ್ಥಾನ ವಿಶಿಷ್ಟವಾದುದು. ಈ ಬೆಡಗಿನ ವಚನ ವಿಶ್ಲೇಷಣೆ ಅಲ್ಲಮನ ಅರಿವು ಅನುಭಾವದ ... ಚಿಂತನೆಗೆ ಪೂರಕವಾಗಿ ಕಂಡುಬರುತ್ತವೆ.

ಕೊನೆ ಟಿಪ್ಪಣಿ

1. ವೃಷಭೇಂದ್ರ ಸ್ವಾಮಿ – ಸಂಸ್ಕೃತಿಯಲ್ಲಿ ಅಲ್ಲಮಪ್ರಭುದೇವನ ಕುರುಹುಗಳು. ಎಸ್. ಕೆ. ಕೊಪ್ಪಾ (ಸಂ)-ಅಲ್ಲಮಪ್ರಭು ಚಿಂತನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೨೦೦೪, ಪು. ಸಂ. ೧

ಅಧ್ಯಾಯ: ೫

ಅಲ್ಲಮನಲ್ಲಿ 'ಅರಿವಿ'ನ ಸಂಕಥನ

೫.೧ ಅಲ್ಲಮನ ವಚನಗಳಲ್ಲಿ 'ಅರಿವು'

೫.೨ ಅಲ್ಲಮನ 'ಜ್ಞಾನ' ಸಂಬಂಧಿ ವಿವೇಚನೆ ಮತ್ತು 'ಅರಿವು'

೫.೩ ಅಲ್ಲಮನಲ್ಲಿ 'ಅರಿವು'– 'ಅನುಭಾವ'ದ ನೆಲೆಗಳು

೫.೧ ಅಲ್ಲಮನ ವಚನಗಳಲ್ಲಿ 'ಅರಿವು'

ಬಯಲಿನಂತೆ ವಿಶಾಲ ಆಯಾಮದಲ್ಲಿ ಕಾಣಿಸಿಕೊಳ್ಳುವ ಅಲ್ಲಮ ಒಂದು ಸಿದ್ಧ ಮಾದರಿಯನ್ನು ಒಡೆಯುವ ಪ್ರಯತ್ನ ಮಾಡುತ್ತಾನೆ ಎಂಬ ಬಗೆಯ ಸಾಂಸ್ಥಿಕ ಚೌಕಟ್ಟುಗಳನ್ನು ಮೀರಿ ಬಯಲಿನಲ್ಲಿ ಬಯಲಾಗುವ ಅಲ್ಲಮನಲ್ಲಿ 'ಅರಿವು' ಬೌದ್ಧಿಕತೆಗಿಂತ ಭಿನ್ನವಾಗಿ ಗ್ರಾಹ್ಯವಾಗುವ ಮೂಲಕ ಆತನ ವಿಚಾರಧಾರೆಗಳು ಅವನ ವ್ಯಕ್ತಿತ್ವದಂತೆ ಅನನ್ಯವಾಗುತ್ತವೆ. ತಾನು ಬಳಸುವ ಮತ್ತೆ ಜಿಜ್ಞಾಸೆಗೆ ಒಳಗುಮಾಡುವ ಪರಿಕಲ್ಪನೆಗಳನ್ನು ಸಿದ್ಧ ಅರ್ಥಗಳನ್ನು ಒಡೆದು ಹೊಸ ಪರಿಭಾಷೆಯಲ್ಲಿ ಅವುಗಳನ್ನು ಬಳಸುತ್ತಾನೆ. ಶೋಧನೆಯ ನೆಲೆಯೇ ಪ್ರಧಾನವಾದ ಅಲ್ಲಮನ ಬದುಕು, ಚಿಂತನೆಯ ಮಾತು ಎಲ್ಲವೂ ಅನ್ವೇಷಣಾತ್ಮಕವಾದುದೇ ಆಗಿದೆ.

ಅನುಭಾವಿ ಅಲ್ಲಮನಲ್ಲಿ ಜ್ಞಾನ ಮತ್ತು ಅಧ್ಯಾತ್ಮ ಬೇರೆ ಬೇರೆ ಅಲ್ಲ. ಅವೆರಡನ್ನ ಅದ್ವೈತದ ಕಲ್ಪನೆಯಲ್ಲಿ ಗ್ರಹಿಸಿದ್ದಾನೆ. ಜ್ಞಾನ ಮಾರ್ಗದಲ್ಲಿ ನಡೆದು ಅನುಭಾವವನ್ನು ಹೊಂದುವ ಕ್ರಿಯೆ ಅವನದು. ಅಂದರೆ ಅಧ್ಯಾತ್ಮದಿಂದ ಜ್ಞಾನ, ಜ್ಞಾನದಿಂದ ಅನುಭಾವ ಆ ಮೂಲಕ ಅಂತರಂಗದಲ್ಲಿ ಹೊಳೆಯುವ ಒಂದು ವಿಶಿಷ್ಟ ಸ್ಪಂದನ. ಅದು ಗೋಚರವಲ್ಲ ಬೌದ್ಧಿಕತೆಗೆ ತಕ್ಕಂತೆ ನಿಲುಕುವಂಥದ್ದಲ್ಲ. ಅನುಭಾವದ ಪ್ರತಿಹಂತದ ಎಚ್ಚರದೊಳಗೆ ಹೊಂದುವ ಒಂದು ಅನುಭೂತಿ. ಅಲ್ಲಮನಿಗೆ ಗುಹೇಶ್ವರನೇ ಅಂತಿಮ ಸತ್ಯ. ಇಲ್ಲಿನ ಅರಿವು ಓದಿ, ಕೇಳಿ, ನೋಡಿ, ಹಾಗೂ ಕೇವಲ ಬಹಿರಂಗದ ಅರ್ಥ ವ್ಯಾಪಾರವಾಗಿರದೆ ಅಮೂರ್ತದ ಸಂಗತಿಗಳನ್ನು ಶಿವಸ್ವರೂಪವನ್ನು ಅನುಭವ ಕಂಡುಕೊಳ್ಳುವ ಮೂಲಕ ಅನುಭಾವ ಹೊಂದುವ ಕ್ರಿಯೆಯಾಗಿದೆ.

ಅಲ್ಲಮನ ವಚನಗಳ ಪರಿಭಾಷೆ, ಜ್ಞಾನದ ಬೆಡಗಿನ ವಚನಗಳ ನಿಗೂಢತೆ ಎಲ್ಲವೂ ಅವುಗಳ ಆಚಾರ ವಿಚಾರಗಳ ಕೆಳಕ್ಕಿಳಿದು ಒಡೆದು ನೋಡುವ ಅನಿವಾರ್ಯತೆ ಇದೆ. ಅದಕ್ಕೆ ತಕ್ಕುದಾದ ಸಿದ್ಧತೆಯನ್ನು ಅಧ್ಯಯನಕ್ಕೆ ಸಂಬಂಧಿಸಿ ಮುಖ್ಯವಚನಗಳನ್ನು ಅವುಗಳ ವಿಶಿಷ್ಟ ನೆಲೆಗಳನ್ನು ವಿವರಿಸಿಕೊಳ್ಳಲಾಗಿದೆ. ಇತರ ವಚನಕಾರರಲ್ಲಿ ಜ್ಞಾನ, ಅರಿವು, ಅನುಭಾವದ ಸಾಧನೆಯ ಹಂತದ ಅನಿವಾರ್ಯ ಬೆಳವಣಿಗೆಯಾಗಿ ಕಾಣಿಸಿಕೊಂಡಿದೆ. ಆದರೆ ಅಲ್ಲಮನಲ್ಲಿ ಅರಿವನ್ನು ಹೊಂದಿದ ಸಿದ್ಧನೊಬ್ಬನ ವ್ಯಕ್ತಿತ್ವ ಕಾಣಿಸಿದೆ. ನಿಧಾನ ಬೆಳವಣಿಗೆಗಿಂತ ಪ್ರಸಿದ್ಧ ಅವಸ್ಥೆಯೇ ಕಾಣಿಸುವುದರಿಂದ ಅವನ ಸಾಧಕಸ್ಥಿತಿಯ ತೊಳಲಾಟ ಅಷ್ಟಾಗಿ ಅನುಭವಕ್ಕೆ ಬರುವುದಿಲ್ಲ. ಅನುಭಾವ ಸ್ವರೂಪದ ಬಗ್ಗೆ ವಿವರಿಸುತ್ತಾ ಅಂಗ-ಲಿಂಗ ಸಂಬಂಧ ಸ್ವರೂಪವನ್ನು ಮುಂದಿಡುತ್ತಾ ಗಾಂಭೀರ್ಯದ ನೆಲೆಯನ್ನು ಕಾಣಿಸುತ್ತವೆ. ಅರಿವಿನ ವಿಶ್ಲೇಷಣೆಗೆ ತೊಡಗುವಲ್ಲಿಯೂ ಕೂಡ ಲಿಂಗ-ಜಂಗಮದ ಪ್ರಧಾನ -ಅಧೀನ ನೆಲೆಗಳಲ್ಲದೆ ಅದ್ವೈತದ ಮೂಲಕ ಪರಿಪೂರ್ಣತೆಯನ್ನು ಹೊಂದುವುದೇ ಮುಖ್ಯವಾಗುತ್ತದೆ.

ನೆಲೆ ಜಲ, ವಾಯು, ಅಗ್ನಿ ಇವುಗಳ ಅಸ್ತಿತ್ವವೇ ಇಲ್ಲದಂದು, ಅರಿದೆನೆಂಬ ವಿಚಾರದಲ್ಲಿ ನೆಲೆಗೊಳ್ಳುವುದು ಅಗಮ್ಯವಾದ ಗುಹೇಶ್ವರನ ನಿಲುವೊಂದೇ ..... ಅಂದರೆ ಅಮೂರ್ತನಾದ ಗುಹೇಶ್ವರ ಅರಿವು ಬಾಹ್ಯದ ಎಲ್ಲ ಬಂಧನಗಳಿಂದ ಮುಕ್ತನಾಗಿ ಗ್ರಹಿಕೆಗೆ ಬರುವಂಥಾದ್ದು. ಶರಣನಾಗಿ ಗುಹೇಶ್ವರನ ಅಸ್ತಿತ್ವವನ್ನು ಅರ್ಥೈಸಿಕೊಳ್ಳುವ ಮುನ್ನ ನಿಜದ ನೆಲೆ ಅಂದರೆ ವಾಸ್ತವದ ಬದುಕಿನ ತಿಳುವಳಿಕೆ ಮೂಡಲು ಸಾಧ್ಯವಿಲ್ಲ. 'ಎನ್ನ ನಾನರಿಯದಂದು ಮುನ್ನ ನೀನೇನಾಗಿದ್ದೆ ಹೇಳಾ .... ನಿನ್ನ ಬೆಡಗಿನ ಬಿನ್ನಾಣವನರಿದೆ ನೋಡಾ' ಎಂದು ಗುಹೇಶ್ವರನ ನಿಲುವು ಗ್ರಾಹ್ಯವಾಗಬೇಕಾದರೆ ತನ್ನತನದ ಅರಿವು ಶರಣನಲ್ಲಿ ನೆಲೆಗೊಳ್ಳಬೇಕು. ಆ ಮೂಲಕ ಮಾತ್ರ ಆಧ್ಯಾತ್ಮದ ನೆಲೆ ಜ್ಞಾನದ ಪರಿಯನ್ನು ಕಂಡುಕೊಳ್ಳಲು ಸಾಧ್ಯ. ಜ್ಞಾನದ ಬೆಳಕು ಪ್ರವೇಶವಾಗುವದನ್ನು ಗುಹೇಶ್ವರನಲ್ಲಿ ಲಯವಾಗುವುದರ ಮೂಲಕ ಎಂದಿದ್ದಾನೆ. ಪ್ರಪಂಚದ ಸೃಷ್ಟಿಯಲ್ಲಿ ಜೀವವು ತನ್ನ ಸ್ವಭಾವಗಳನ್ನು ಮರೆತು ಅಭಿನ್ನವನ್ನು ಹೊಂದಿದಂದಿನ ನೆಲೆಯನ್ನು ಅರಿಯದೆ ಪರಬ್ರಹ್ಮವನ್ನು ಅರಸುತ್ತಾ ವ್ಯರ್ಥ ಪ್ರಭುತ್ವದಲ್ಲಿ ಮುಳುಗಿದೆ. ತನ್ನನ್ನು ತಾನರಿಯದೆ ಆತ್ಮಜ್ಞಾನದ ಮೂಲಕ ಪರಬ್ರಹ್ಮವನ್ನು ಅರ್ಥೈಸಿದರೆ ನಾನೇ ಎಂಬ ಪೂರ್ಣಜ್ಞಾನ ಪ್ರಾಪ್ತವಾಗಿ ಅರಿವು-ಮರವೆಗಳನ್ನು ತನ್ನಲ್ಲಿ ಹುಟ್ಟಿಸಬಲ್ಲ ಅರಿವಿನ ಬೆಳಕು ಉದಯಿಸುತ್ತದೆ. ಆತ್ಮಜ್ಞಾನ ಹೊಂದದ ಹೊರತು ಕಾಣುವ ಪ್ರತಿಯೊಂದು ಅಗಮ್ಯವಾದುದೇ ಆಗಿರುತ್ತದೆ. ಬ್ರಹ್ಮಾಂಡದೊಳಗಿರುವ ಸೃಷ್ಟಿಯ ರಹಸ್ಯವೆಲ್ಲವೂ ಜೀವಿಯೊಳಗೆ ಅಡಗಿದೆ. ಆತ್ಮಜ್ಞಾನದ ಮೂಲಕ ಮಾತ್ರ ಜೀವಿಯ ಅರಿವಿಗೆ ಅದು ದಕ್ಕುತ್ತದೆ. ಆದ್ದರಿಂದ ತನ್ನತನವೆನ್ನುವುದು ಕಿರಿದಲ್ಲ, ಬ್ರಹ್ಮಾಂಡವೆನ್ನುವುದು ಹಿರಿದಲ್ಲವೆಂದು ಅರಿವುದೇ ಅರಿವಿನ ಪ್ರಕಾರವನ್ನು ಹೊಂದಿರುವುದು. ತನ್ನ ತಾನರಿಯದೆ ಉತ್ಪತ್ತಿಯೆಂಬ ಅರಿವನ್ನು ಹೊಂದದೆ ಅದೇ ಕಳಂಕದಂತೆ ಆವರಿಸುತ್ತದೆ. ಆತ್ಮಜ್ಞಾನವನ್ನು ಅರಿಯಲೀಯದ ಹೊರತು ಆಹ್ವಾನ ಕಳೆದು ಶಿವತತ್ತ್ವದ ಅರಿವು ಮೂಡದು.

ಜೀವಿಗಳು ಭೌತಿಕ ಪ್ರಪಂಚದಲ್ಲಿ ತಮ್ಮ ತಾವರಿಯದೆ ಇಂದ್ರಿಯ ಘನಕ್ಕೆ ಸಿಲುಕಿದ್ದಾರೆ. ಸಾಂಸಾರಿಕ ಬದುಕಿನ ಕತ್ತಲಿನಲ್ಲಿ ತಿಳುವಳಿಕೆಯಿಲ್ಲದೆ ದೇಹದ ನಶ್ವರತೆಯನ್ನು ಅರಿಯದೆ ಸುಖಲೋಲುಪರಾಗಿದ್ದಾರೆ. ಸುಜ್ಞಾನ ಬೋಧೆಯ ಮೂಲಕ ನೆನೆವ ಮನದಲ್ಲಿ ಸಂಕಲ್ಪಭಾವ ಮೂಡಿ ಮನೋಮೂರ್ತಿಯೇ ತಾನೆಂಬ ಅರಿವು ಮೂಡಿ ನಿಶ್ಚಲವಾಯಿತು. ಭವವೆಂಬ ಅರಣ್ಯದೊಳಗೆ ದಾರಿಗೆಟ್ಟು ನಡೆವಾಗ ಕರಣಗಳು ಎನ್ನಬಿಡದೆ ಬೆನ್ನು ಹತ್ತಿ ವಿವೇಕ ಕಳೆದು ಜ್ಞಾನಜ್ಯೋತಿ ಆರಿ ಅಂಧಕಾರ ನೆಲೆಗೊಳ್ಳುತ್ತದೆ. ಅಸಾಧ್ಯವೆಲ್ಲಾ ಶಿವತತ್ತ್ವಕ್ಕಾಗಿ ಹಂಬಲಿಸಿ ಪಡೆಯಲಾಗದೆ ಮಿಥ್ಯಾ ಸಂಸಾರದಲ್ಲಿ ಮುಳುಗಿಹೋಗುತ್ತದೆ. ಜೀವಿಗಳ ಹುಟ್ಟು, ಸಾವು, ಯಾರಿಗೂ ಹೇಳಿ ಕೇಳಿ ಬರುವುದಿಲ್ಲ. ಹಾಗೆಯೇ ಅರಿವು ಅನ್ನುವುದು ನಮ್ಮ ಇರುವಿಕೆ. ಅದು ಅಸ್ತಿತ್ವಮಾತ್ರದಿಂದಲೇ ಬರಲು ಸಾಧ್ಯವಿಲ್ಲ. ಹಾಗೆಯೇ ಗುಹೇಶ್ವರ ಲಿಂಗದ ಅಸ್ತಿತ್ವವನ್ನು ಅರಿಯದೆ ಹೋದವರೇ ಆಧ್ಯಾತ್ಮದ ನೆಲೆಯನ್ನು ಹೊಂದದ ಹೊರತು

ಅರಿವು ಮೂಡಲಾರದು. ಜೀವಿಗಳನ್ನು ದೇಹಭಾಗದಲ್ಲಿ ಬಂಧಿಸಿ ಪ್ರಕೃತಿಯ ನೆಲೆಯಲ್ಲಿ ಪರಶಿವನು ಯಂತ್ರವಾಹಕನಾಗಿ ಆಡಿಸುತ್ತಿದ್ದಾನೆ. ಈ ಮಿಥ್ಯೆಯನ್ನು ದೃಢತೆಯಿಂದ ಕುರಿತು ಪರಬ್ರಹ್ಮನನ್ನು ಅರ್ಥೈಸಿಕೊಂಡರೆ ಮಾತ್ರ ಲಿಂಗ-ಭಕ್ತನ ನಡುವೆ ದ್ವೈತಭಾವ ಅಳಿದು ಅವಿನಾಭಾವ ಸಂಬಂಧ ರೂಪುಗೊಳ್ಳುತ್ತದೆ. ದೇಹಭಾವವನ್ನು ಬಂಡಿಗೆ ಹೋಲಿಸುತ್ತಾ ಪಂಚೇಂದ್ರಿಯಗಳೇ ಈ ಕಾಯವನ್ನು ಮುನ್ನಡೆಯುವಂಥದ್ದು ಎನ್ನುತ್ತಾರೆ. ಇಲ್ಲಿ ದೇಹಭಾವ ಉಳಿಯಬೇಕಾದರೆ ಇಂದ್ರಿಯಗಳ ಇಷ್ಟದಂತೆ ನಡೆಯಬೇಕು. ಇಲ್ಲದೆ ಹೋದರೆ ದೇಹಭಾಗವೇ ಬಿದ್ದುಹೋಗುತ್ತದೆ. ಹೀಗೆ ಪ್ರತಿ ಹಂತದಲ್ಲೂ ಅರಿವಿನ ವಿಚಾರದಲ್ಲೇ ಭೌತಿಕ ಹಾಗೂ ಬೌದ್ಧಿಕ ಜ್ಞಾನ ರೂಪುಗೊಳ್ಳುತ್ತದೆ. ಜೀವಿಯ ಅಂತರಂಗದಲ್ಲಿ ಆತ್ಮಜ್ಞಾನದ ಬೆಳಗು ಪ್ರವಹಿಸಲು ಅಜ್ಞಾನದ ಅಂಧಕಾರ ಕಳೆದು ಪರಮಾತ್ಮನಲ್ಲಿ ನೆಲೆಯೂರುತ್ತಾನೆ. ಆ ಮೂಲಕ ಜೀವನ ಕೃತಾರ್ಥವಾಗಿ ಜೀವ ಪಶುವಿನ ಮೇಲಿನ ಜ್ಞಾನ ರತ್ನದ ಬೆಳಗಿನಲ್ಲಿ ಪಶುತ್ವವನ್ನು ಕಳೆದುಕೊಂಡು, ಕಾಯದ ಮೋಹದಿಂದ ಮುಕ್ತವಾಗಿ ಅಗಮ್ಯವಾಗಿ ಲಿಂಗದ ಕರಸ್ಥಲದಲ್ಲಿ ಲೀನವಾಗುತ್ತದೆ.

ಶರಣನೊಳಗೆ ಅರಿವು ಮೂಡಿದ ನೆಲೆಯನ್ನು ಅಲ್ಲಮ ಈ ರೀತಿಯಾಗಿ ವ್ಯಾಖ್ಯಾನಿಸುತ್ತಾನೆ: ಜ್ಞಾನದ ವಾಸನೆ ಮೂಡಿದಾಗ ಸಕಲ ವಿಸ್ತಾರದ ತಿಳಿವು ಬಂತು. ಜೀವ ರೂಪದಲ್ಲಿ ಹೇಗೆ ಬಂತು ಎಂಬುದು ಅರಿವಾಗಲಿಲ್ಲ. ಆದರೆ ಜ್ಞಾನದ ಮೂಲಕ ಗುರುವಿನ ಮಹತ್ವ ಗೋಚರವಾಗಿ, ಗುರುವಿನಿಂದ ಜ್ಞಾನದ ಕಿಡಿ ಸೋಂಕಲು ಅರಿವು ಮೂಡಿತು. ಅಂದರೆ ಅರಿವು ಹೊಂದುವ ಮಾರ್ಗವನ್ನು ಶರಣನ ಅನುಭವಕ್ಕೆ ಬಾರದೆ ತನ್ನೊಳಗೆ ಕಾಣುವ ನೆಲೆಯಿದೆ. ಎಣ್ಣೆ ಬತ್ತಿ ಹಣತೆಗಳ ಸಂಗಮದಲ್ಲಿ ಜ್ಯೋತಿ ಬೆಳಗಿತು. ಮೂಳೆ ಮಾಂಸ ದೇಹದಿಂದ ಪ್ರಾಣ ಮೂಡಿತು. ದೃಷ್ಟಿಯ ಗ್ರಹಿಕೆ ಮನಸ್ಸಿಗೆ ನಾಟಿದ ಪರಿ ಯಾವುದು, ಅನುಭಾವವನ್ನು ಅರಿತುಕೊಂಡಾಗ ಬೆಳಗು ಕಂಡಿತು, ಆಧ್ಯಾತ್ಮದ ಈ ಪರಿಯನು "......ಇದು ಕಷ್ಟವೆಂದರುಹಿದೆನು ಗುಹೇಶ್ವರ" ಎಂದಿದ್ದಾನೆ.

ಭೌತಿಕ ಪ್ರಪಂಚಕ್ಕೆ ಒಂದು ಎಲ್ಲೆಯ ಮಿತಿಯಿದೆ. ಜೀವಿಯ ಅನುಭವ, ಅನುಭವ ಜಗತ್ತು ಎಲ್ಲವೂ ಇದರೊಳಗೆ ರೂಪುಗೊಳ್ಳುತ್ತದೆ ವಿನಾ ಇದನ್ನು ಮೀರಿ ಅದರ ಅಸ್ತಿತ್ವವಿಲ್ಲ. ಕಣ್ಣಿಗೆ ಗೋಚರವಾಗುವ ಭೌತಿಕ ಸಂಗತಿಗಳು ತಿಳಿವಿಗೆ ಬರುತ್ತವೆಯೇ ಹೊರತು ಅಂತರಂಗದೊಳಗಿನ ಅಮೂರ್ತ ಸಂಗತಿಯನ್ನು ತಿಳಿಯಲು ದಾರಿತೋರಬಲ್ಲವನೇ ಗುಹೇಶ್ವರ. ಜೀವಿಗಳಲ್ಲಿ ತಮ್ಮಲ್ಲೆ ತಾವು ಇದನ್ನು ಅರಿತುಕೊಳ್ಳುವಲ್ಲಿ ಅಳಿವಿಲ್ಲ ಎಂದಿದ್ದಾನೆ. ಆ ಮೂಲಕ ಅಂತಿಮ ಬಾಹ್ಯ ಸಂಗತಿಗಳಿಂದ ಗೋಚರವಾಗುವುದಿಲ್ಲ. ಅಂತರಂಗದಲ್ಲಿ ಹೊಳೆಯುವ ಜ್ಞಾನದ ಬೆಳಗು ಎನ್ನುತ್ತಾನೆ.

ಭಕ್ತ, ಗುರು, ಲಿಂಗ, ಈ ತ್ರಿವಿಧಸ್ಥಲವನ್ನು ಅರಿಯಲಾಗದವರನ್ನು ಸಹಿಸಲಾಗದು. ಸಾಂಸ್ಥಿಕ ಚೌಕಟ್ಟುಗಳನ್ನು ಒಡೆಯುವ ಅಲ್ಲಮನ ನಿಲುವಿನಲ್ಲಿ ಮತ್ತೆ ನಾಮಸೂಚನೆಯ ಮೂಲಕ ಮಿತಗೊಳ್ಳುವ

ಜ್ಞಾನದ ಬಗೆಗೆ ಅಸಹನೆ ಇದೆ. ಆ ವಿಧವನ್ನು ಅರಿಯಲಾರದವರು ಕೆಟ್ಟರು ಎನ್ನುತ್ತಾರೆ. ಅಕ್ಷರ ಜ್ಞಾನ ಮತ್ತು ವೇದಾಧ್ಯಯನದಿಂದಲೇ ಜ್ಞಾನವನ್ನು ಹೊಂದಿವೆಂಬ ಮಿಥ್ಯದ ಭ್ರಮೆಯಲ್ಲಿ ಕಳೆದು ಹೋಗುವರು, ಸಾಮಾನ್ಯ ಜ್ಞಾನವನ್ನು, ಅಷ್ಟೇಕೆ ತಮ್ಮನ್ನು ತಾವು ಅರಿತಿರುವುದಿಲ್ಲ. ಇಂತಹವರನ್ನು ಕುರಿತು ... ಭಕ್ತಿಯನರಿಯರು. ಮುಕ್ತಿಯನರಿಯರು ಇವರು ಗುಹೇಶ್ವರನ್ನು ಅರಿಯಲು ಸಾಧ್ಯವಿಲ್ಲ. "ಅರಿವರಿಯದೆ ವಿಭವವಳಿಯದೆ .... "ಲೌಕಿಕದ ಭಾವವಿಕಾರಗಳಿಂದ ಮುಕ್ತರಾಗದೆ ಬರೀ ಬಾಯಿ ಮಾತಿನಲ್ಲಿ ಭಕ್ತರಾದೆವೆಂಬವರ ಬಗ್ಗೆ ಅಲ್ಲಮ ಮರುಕವನ್ನು ವ್ಯಕ್ತಪಡಿಸಿದ್ದಾನೆ. ಶಿವನ ನುಡಿಯನ್ನು ಅರಿತೆವೆಂದು ಹೇಳುವವರು ಪ್ರಾಣಲಿಂಗವನ್ನು ಅರಿಯದೆ ಮರುಳಾದರು. ಆಧ್ಯಾತ್ಮದ ಅರಿವನ್ನು ಹೊಂದಿದ ಮೇಲೆ ಲಿಂಗ–ಭಕ್ತ ಬೇರೆಯಲ್ಲ. ಅದ್ವೈತದ ನೆಲೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಶರೀರವನ್ನು ಹೊಂದಿದ ಜೀವಿಯು ಪಂಚೇಂದ್ರಿಯಗಳ ಗೀಳಿಗೆ ವಶವಾಗಿ ಭವಾವಳಿಯಿಂದ ಹೊರಗೆ ಬರಲಾಗದೆ ಸಶರೀರವಾಗಿ ಭಕ್ತನಾಗಿ ಲಿಂಗವನ್ನು ಅರಿದಿಹೆನೆಂಬುದು ಅದು ಭ್ರಮೆ ಮಾತ್ರ ಆಗಿರುತ್ತದೆ. ಹಾಗೆಯೇ ಅರಿಯದೆ ಮಾಡುವ ಆಡಂಬರವನ್ನು ಗೇಲಿ ಮಾಡುತ್ತಾರೆ. ಇರದುದರೆಡೆಗೆ ತುಡಿಯುತ್ತಾ ಎದುರಾದ ಅವಕಾಶಗಳನ್ನು ಕಳೆದುಕೊಳ್ಳುತ್ತಾ, ಬಳಲುವವರು ಲಿಂಗವನ್ನು ಹೇಗೆ ತಾನೇ ಅರಿಯಲು ಸಾಧ್ಯ? ಆದ್ಯರು, ಮೇಧಾವಿಗಳು ಹಿರಿಯರೆಂದೆನಿಸಿಕೊಳ್ಳುವವರು ಶಿವಶರಣರನ್ನು ತಾಕಲಾಡುವವರನ್ನು ಕಂಡು ಆಧ್ಯಾತ್ಮವನ್ನು ಅರಿಯದ ಕರ್ಮ ಜೀವಿಗಳು ಎಂದಿದ್ದಾನೆ.

'ಆದ್ಯರಲ್ಲಿ ವೇದ್ಯರಲ್ಲಿ ಸಾಧ್ಯರಲ್ಲದ ಹಿರಿಯರ ನೋಡಾ। ತನು ವಿಚಾರ, ಮನ ವಿಚಾರ, ಇಂದ್ರಿಯವಿಕಾರದ ಹಿರಿಯರ ನೋಡಾ। ಶಿವಚಿಂತೆ ಶಿವಜ್ಞಾನಿಗಳ ಕಂಡರೆ ಅಳವಾಡಿ ನುಡಿವರು. ಗುಹೇಶ್ವರನನರಿಯದ ಕೃರ್ಮಿಗಳಯ್ಯ'[5] ಎಂದು ಇಂದ್ರಿಯ ವಿಕಾರಗಳಿಗೆ ಒಳಗಾದ ಜೀವಿಗಳು ಮೋಹದಲ್ಲಿ ಮೈಮರೆತು ಶಿವನ ಇರವನ್ನು ಅರಿಯದೆ ಹೋದರು. ಅಂದರೆ ವೇದಪುರಾಣಗಳು ಅರಿವನ್ನು ತಂದು ಕೊಡುವುದಿಲ್ಲ. ಆ ವಿಚಾರಗಳನ್ನು ಆತ್ಮಾವಲೋಕನದ ಮೂಲಕ ತಮ್ಮದಾಗಿಸಿಕೊಂಡಾಗ ಹೊಳೆವ ಆಧ್ಯಾತ್ಮದ ಬೆಳಗೇ ಅರಿವು. ಅದು ಇಂತಹ ಕರ್ಮ ಜೀವಿಗಳ ಅನುಭವಕ್ಕೆ ಸಿಗಲಾರದು. ಶಿವಶರಣರಾದವರು ಬಾಹ್ಯದ ಎಲ್ಲ ಚಟಗಳಿಂದ ಮುಕ್ತರಾಗಿ ತ್ರಿಲೋಕಗಳನ್ನು ಅರಿತು ಅನುಭಾವವನ್ನು ಹೊಂದುತ್ತಾರೆ.

ಲಿಂಗಭಕ್ತನೆಂದು ಜಗವೆಲ್ಲಾ ಸಾರುತಿಪರು ಲಿಂಗಭಕ್ತನ ಇಂಬಾವುದೆಂದರಿಯರು .... ಭಕ್ತನೆಂದು ಜಗವೆಲ್ಲ ತಿಳಿಯುವಂತೆ ಮೆರೆಯುವವರು ಬಹಿರಂಗದ ನೋಟಕ್ಕೆ ಮಾತ್ರ ಭಕ್ತರಂತೆ ತೋರುತ್ತಾರೆ. ಇಂತಹ ಡಾಂಭಿಕರಿಗೆ ನಿಜಭಕ್ತನ ಬಗೆಯೇನು, ವ್ಯಕ್ತಿತ್ವವೇನು ಎಂಬುದು ತಿಳಿದಿಲ್ಲ. ಭಕ್ತನಾದವನು ಅಹಂನಿಂದ ಮುಕ್ತನಾಗಿ ಕಾಯದ ಮಮಕಾರ ಕಳೆದುಕೊಂಡವನು ಉಳಿದಂತೆ ಎಲ್ಲವೂ

ತೋರಿಕೆಗೆ ಸಂಬಂಧಿಸಿದ್ದು. ಗುಹೇಶ್ವರನೊಳಗೆ ಈರೇಳು ಭುವನಗಳು ಅಡಗಿವೆ. ಈತನಿಗೆ ಲಿಂಗಾರ್ಚನೆ ಪೂಜೆಗಳ ಅಗತ್ಯವಿಲ್ಲ. ಭವಬಂಧನಗಳಿಂದ ಮುಕ್ತನಾದ ಈತ ಅಸ್ತಿತ್ವ ಹೊಂದುವುದೇ ಭಕ್ತರ ಭಕ್ತಿಯಲ್ಲಿ.

'ಒಳಗ ತೊಳೆಯಲರಿಯದೆ ಹೊರಗ ತೊಳೆದು ಕುಡಿವುತಿದ್ದರಯ್ಯ. ಪಾದೋದಕ ಪ್ರಸಾದವನರಿಯದೆ ಬಂದ ಬಟ್ಟೆಯಲ್ಲಿ ಮುಳುಗುತ್ತೈದಾರೆ ಗುಹೇಶ್ವರ"7. ಅಂತರಂಗ ಶುದ್ಧಿಯಿಲ್ಲದೆ ಬಹಿರಂಗ ಶುದ್ಧಿಯಿಂದ ಭಕ್ತರೆಂದು ಹೇಳಿ ಮೆರೆಯುತ್ತಿರುವವರು. ಭಕ್ತಿಯ ನಿಜದ ನೆಲೆಯನ್ನು ಅರಿಯದೆ ಸಾಂಸಾರಿಕ ಬಂಧನದೊಳಗೆ ಕಾಯವನ್ನು ಹೊಂದಿ ಬಳಲುತ್ತಿದ್ದಾರೆ. 'ಪ್ರಸಾದವೆಂದರಿಯದೆ' ಎಂದರೆ ಅನುಭಾವದ ತಿಳುವಳಿಕೆಯಿಲ್ಲದೆ ಡಾಂಭಿಕ ಭಕ್ತರಾಗಿದ್ದಾರೆ. ಅಂತಹವರನ್ನು ವಿಡಂಬಿಸುತ್ತಾ ಕೇವಲ ಮಾತು ಆಚರಣೆಗಳಿಂದ ಲಿಂಗವಾಗಿ ಮುಟ್ಟಲಾಗದು. ಅನುಭಾವ ಪ್ರಪಂಚದಿಂದ ದೂರವಿರುವ ಡಾಂಭಿಕರು ಹಿಂದೂ ಅನುಭಾವಿಗಳ ಭಕ್ತಿಯ ಸ್ವರೂಪವನ್ನು ಅರಿಯಲು ಅರ್ಹರಲ್ಲ. ಅವರೆಲ್ಲ ಗುಹೇಶ್ವರ ಲಿಂಗವನ್ನು ಮುಟ್ಟಿ ಮುಕ್ತಿ ಪಥದಲ್ಲಿ ನಡೆದಿದ್ದಾರೆ.

'ಅರಿದರಿದು ಅರೆದು ಬರುದೊರೆವೋಯಿತ್ತು. ಕುರುಹ ತೋರಿದಡೆಂತು ನಂಬರು? ತೆರಹಿಲ್ಲದ ಘನವ ನೆನೆದು, ಗುರುಶರಣೆಂಬುದಲ್ಲದೆ ಮರುಹು ಬಂದಿಹುದೆಂದು ಗುರು ಕುರುಹ ತೋರಿದನಲ್ಲದೆ ಬಲ್ಲಡೆ ಗುಹೇಶ್ವರ ಲಿಂಗವು ಹೃದಯದಲ್ಲೈದಾನೆ' [8]

ನಿರಾಕಾರ ನಿಸ್ಸಂಗಿಯಾದ ಗುಹೇಶ್ವರನನ್ನು ಕುರುಹಿನ ಮೂಲಕ ತೋರಲು ಸಾಧ್ಯವಿಲ್ಲ. ಕುರುಹಿನ ಮೂಲಕ ಅಸ್ತಿತ್ವ ಪಡೆಯಲು ಸಾಧ್ಯವಿಲ್ಲ. ಮಾತಿಗೆ, ಕುರುಹಿಗೆ ನಿಲುಕದ ಗುಹೇಶ್ವರನನ್ನು ಅರಿಯುವ ಮಾರ್ಗವನ್ನು ಗುರು ತೋರಬಲ್ಲ. ಆದರೆ ಅದನ್ನು ಅರಿಯುವವನು ತಾನೇ ಆಗಬೇಕು. ಇದು 'ಅರಿವಿನ' ಪರಿ ಅಂದರೆ ಅರಿವು ಹೊಂದುವ, ಅರಿವನ್ನೂ ನಮ್ಮದಾಗಿಸಿಕೊಳ್ಳುವ ಸಮಷ್ಟಿ ನೆಲೆ. ಲೌಕಿಕದ ಸಂಗತಿಗಳನ್ನೂ ಹೆಸರಿನ ಮೂಲಕ ಸಂಬಂಧಗಳ ಮೂಲಕ ಗ್ರಹಿಸಿಕೊಳ್ಳುತ್ತೇವೆ. ಆದರೆ ಇವು ಯಾವುವು ಶಾಶ್ವತ ಸಂಬಂಧಗಳಲ್ಲ. ಕಾಯ, ಜೀವ ಮತ್ತು ಪ್ರಾಣ ಇವುಗಳ ನಡುವಿನ ತ್ರಿವಿಧ ಸಂಬಂಧ ಮಾತ್ರ ಅಂತಿಮ ಸತ್ಯ. ಈ ತ್ರಿವಿಧವನ್ನು ಅರಿತವನು ಮಾತ್ರ ಗುಹೇಶ್ವರನ ಶಾಶ್ವತ ಸಂಬಂಧಿಯಾಗುತ್ತಾನೆ.

ಪಂಚಭೂತಗಳು (ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ) ಚತುಷ್ಟಯ ಕರಣಂಗಳು (ಮನ, ಬುದ್ಧಿ, ಚಿತ್ತ, ಅಹಂಕಾರ) ಆತ್ಮದ ಅರಿವನ್ನು ಹೊಂದಲಾರವು. ಆತ್ಮಶಕ್ತಿಯನ್ನು ಹೊಂದುವುದರ ಮೂಲಕ ಪಂಚಭೂತ, ಕರಣಂಗಳನ್ನು ಅರಿತರೆ ಸಮತೆ, ಸದಾಚಾರ, ಕೇಂದ್ರದಲ್ಲಿ ನೆಲೆಸುವುದು. ಆತ್ಮದ ಅರಿವೇ ಗುಹೇಶ್ವರ ಲಿಂಗನ ಅರಿವು. ಜ್ಞಾನ, ಆತ್ಮಶಕ್ತಿ ಎನ್ನುವುದು ದೈವಸ್ವರೂಪಿಯಾದದ್ದು. ಅಲ್ಲಿ ದೈವದ ಅರಿವು ಬೇರೆಯಲ್ಲ. ಆತ್ಮದ ಅರಿವು ಬೇರೆಯಲ್ಲ. ಆತ್ಮಶಕ್ತಿಯನ್ನು ಅರಿತವನು ಲಿಂಗವನ್ನು ಅರಿತಂತೆ. ಅದೇ ಜ್ಞಾನ. ಅದೇ ಅನುಭಾವ. 'ಒಡಲುವಿಡಿದು ಪಾಷಾಣಕ್ಕೆ ಹಂಗಿಗರಾದಿರಲ್ಲಾ? ಲಿಂಗಸಂಗಿಗಳೆಲ್ಲಾ ಮಹಾಘನವರಿಯದೆ ನಿಂದಿರೊ.......9. ಎಂದು ಕಾಯದ ಗುಣವನ್ನು ಮುಂದಿಡುತ್ತಾನೆ. ಶರೀರವನ್ನು

ಹೊಂದಿದವನಿಗೆ ಅದನ್ನು ನಾಶಗೊಳಿಸಬಲ್ಲ ಪಾಷಾಣದ ಹಂಗು ಇದೆ. ಅಂತಹವರು ಮಹಾಘನನಾದ ಗುಹೇಶ್ವರನ ನಿಲುವನ್ನು ಅರಿಯದೆ ವ್ಯರ್ಥ ಪೂಜೆಗಳಿಂದ ಮೆರೆಯುತ್ತಾ ಸಾಗುತ್ತಿದ್ದಾರೆ.

'ಇರುಳಿನ ಮುಖ ಹಗಲೆಂದರಿಯರು ...... (10) ಇಲ್ಲಿ ಇರುಳು ಮತ್ತು ಹಗಲಿನ ಸಂಬಂಧದ ವಿಶ್ಲೇಷಣೆಯಿದೆ. ಅವು ಒಂದರ ಇರುವಿಕೆಯಿಂದ ಇನ್ನೊಂದು ಅಸ್ತಿತ್ವ ಪಡೆದುಕೊಳ್ಳುತ್ತದೆ. ಅಜ್ಞಾನದ ಮುಖದಿಂದ ಜ್ಞಾನ ಮೂಡುವ ಹಾಗೆ. ಅಜ್ಞಾನದ ಮುಖದಲ್ಲಿ ನವಲಿಂಗ ಪ್ರಯುಕ್ತವಾದ ಜ್ಞಾನರತ್ನ ಅಡಗಿದೆ. ಅರಿವಿನ ಮುಖದಲ್ಲಿ ವಿವೇಕವೆಂಬ ವೃಕ್ಷವಿದೆ. ಆ ಲಿಂಗಜ್ಞಾನ ರತ್ನವನ್ನು ವಿವೇಕ ಗ್ರಹಿಸಿದರೆ ಅರಿವು ಮೂಡಿ ಪಾಣಲಿಂಗಕ್ಕೆ ಸುಖ ಸಿದ್ಧಿಸುತ್ತದೆ. ಪ್ರಾಣಲಿಂಗವೆಂಬುದು ಲಿಂಗ ಸಂಸಾರಿ. ಅದಕ್ಕೆ ಕಾಯವ ಹಂಗಿದೆ. ಜಂಗಮವೆಂಬುದು ಲಿಂಗ ಸಂಸಾರಿ. ಯಾವುದು ಪ್ರಾಣಲಿಂಗ ಮತ್ತು ಜಂಗಮ ತನ್ನಷ್ಟೇ ತಾನು ನಿರಪೇಕ್ಷನಾದುದಲ್ಲ. ನಿರಯವನಾದ ಗುಹೇಶ್ವರ ಲಿಂಗದ ನಾಮಕ್ಕೆ ನಾಚುವರು.

"ಇರುಳಿನ ಸಂಗಮ ಹಗಲೆಂದರಿಯರು ಹಗಲಿನ ಸಂಗವ ಇರುಳೆಂದರಿಯರು. ವಾಯಕ್ಕೆ ನಡೆವರು, ವಾಯಕ್ಕೆ ನುಡಿವರು. ವಾಯವೆಂಬ ಪ್ರಾಣಿಗಳು ಗುಹೇಶ್ವರನೆಂಬ ಅರಿವಿನ ಕುರುಹು ಆರಿಗೆಯೂ ಅಳವಡದು"[11] ಅಂದರೆ ಇರುಳು– ಹಗಲು ಕತ್ತಲು ಬೆಳಕು, ಅಜ್ಞಾನ –ಜ್ಞಾನ ಇವುಗಳ ಪರಸ್ಪರ ಸಂಗವನ್ನು ಅರಿಯರು. ಇದು ಒಂದರ ಅಸ್ತಿತ್ವದಿಂದಲೇ ಇನ್ನೊಂದು ರೂಪುಗೊಳ್ಳುತ್ತದೆಂದರಿಯರು. ಅರಿವಿನ ಅನುಭಾವದ ಕುರುಹಾಗಿ ಗೋಚರವಾಗುವ ಗುಹೇಶ್ವರನ ನಿಲುವು ಇಂತಹವರಿಗೆ ಅಳವಡದು.

'ಉಲಿವ ಉಯ್ಯಾಲೆಯ ಹರಿದು ಬಂದೇರುಲು, ತಾಗದೆ ತೂಗುವುದು, ಭವಸಾಗರ ಮರಳಿ ಬಾರದಂತೆ! ಹಂಸೆಯ ಮೇಲೆ ತುಂಬಿ ಕುಳ್ಳಿದ್ದು ಸ್ವರಗೆಯ್ಯು ಘೋಷವದೇನೋ? ಆತನಿದ್ದ ಸರ ಅರಿಯದೆ ಇದ್ದಿತ್ತು. ದೇಹಿಗಳೆಲ್ಲ ಅರಿವರೆ ಗುಹೇಶ್ವರನ ಆಹಾರ ಮುಖವ" [12]

ಸಾಂಸಾರಿಕ ಭವಬಂಧನದಿಂದ ಮುಕ್ತವಾಗಿ ಜೀವಹಂಸನ ಮೇಲೆ ಶಿವೋಹಂ ಎಂಬ ಸ್ವಾನುಭವ ನೆಲೆನಿಂತು ವರ್ತಿಸಲು ಪರಿಪೂರ್ಣತೆ ಸಿದ್ಧಿಸುತ್ತದೆ. ಬ್ರಹ್ಮನಾದಮಯವೆಂಬ ಆ ಶಬ್ದ ಖಂಡಿತವಲ್ಲದ ಅಖಂಡಿತ ಸುಖ ಆ ಸುಖವು ಮಹಾಲಿಂಗಕ್ಕೆ ಸಮರ್ಪಿತವಾದ ಭೇದವನ್ನು ಕಾಯವನ್ನು ಹೊಂದಿ ಭವಬಂಧನದಲ್ಲಿ ಸಿಲುಕಿದ ದೇಹಿಗಳು ಅರಿಯಲು ಸಾಧ್ಯವಿಲ್ಲ.

.... 'ಅರಿವಿನ ಆಪ್ಯಾಯನ ಮರಹಿನ ಸುಖವೋ!.......... "[13] ಸಾಂಸಾರಿಕ ವಿಷಯಕೂಪವೆಂಬ ತನುವಿನ ಭಾವವಳಿದು ಸರ್ವಾಂಗಲಿಂಗವಾಗಲು ದೇಹವೇ ಪರಮಾಮೃತ ರೂಪ– ಮನಸ್ಸೆಂಬ ಘಟದಲ್ಲಿ ಆ ಅಮೃತರಸವನ್ನು ಮೊಗೆದು ಲಿಂಗಮೊಗದಿಂದ ಆರೋಗಿಸಲು, ಸಪ್ಪೆಯಾದುದೆಂದು ಬೇಸರಿಸಬಾರದು. ಪರುಷ ಸಂಗದಿಂದ ಲೋಹವು ಹೊನ್ನಾದ ಹಾಗೆ ಪರಮಾನಂದಸುಖಕ್ಕೆ ಕಾರಣವಾಗುವುದು. ಅಂತಹ ಅರಿವಿನ ತೃಪ್ತಿಯ ಪರವಶವೆ ಪರಮಸುಖ. ನಿರಾಳ,

ನಿರಾಕಾರ ಎಂಬುದು ಮಾತು, ದೃಷ್ಟಿಯ, ಹಿಡಿತಕ್ಕೆ ಸಿಲುಕುವಂಥದ್ದಲ್ಲ. ಅದರಿಂದೆಲ್ಲ ಮುಕ್ತರಾಗಿ ವಿಶಾಲವಾಗಿರುವಂಥದ್ದು. ಅದನ್ನು ಮಾತಿನಲ್ಲಿ ಹಿಡಿಯಲು ಹೊರಟರೆ ಶಬ್ದವು ನಾಚುತ್ತದೆ. ಗುಹೇಶ್ವನ ನಿಲುವು, ಅರಿವು ಅದೇ ಬಗೆಯದ್ದು. ಸಾಮಾನ್ಯರ ಅನುಭವಕ್ಕೆ ದಕ್ಕದೆ ಭಕ್ತಿಯ ಮೂಲಕ ಮಾತ್ರ ಅನುಭವಕ್ಕೆ ದೊರೆಯುವುವಂಥದ್ದು. ಅಗ್ನಿ ಮುಟ್ಟದ ಮುನ್ನ ತೃಣದೊಳಗೆ ಅಗ್ನಿಯು ಮಂದಾಗ್ನಿಯಾಗಿ ವಿಶ್ರಮಿಸಿರುವುದು. ಹಾಗೆಯೇ ಲಿಂಗ ಮುಟ್ಟಿದ ಮೇಲೆಯೇ ಅಂಗವು ಲಿಂಗವೆಂಬುದು ಮುಖ್ಯವಲ್ಲ. ಏಕೆಂದರೆ ಲಿಂಗ ಮುಟ್ಟದ ಮುನ್ನವೇ ಅಂಗದೊಳಗೆ ಲಿಂಗವಿದ್ದು ಲಿಂಗಸೋಂಕಿಂದ ಆ ಅಂಗವು ಲಿಂಗವೇ ಆಯಿತು. ಅನಂತರ ಜ್ಞಾನಾಗ್ನಿ ಮನಸ್ಸನ್ನು ಆಶ್ರಯಿಸಿ ಮನದಲ್ಲಿ ಜ್ಞಾನ ನೆಲೆಯಾಯಿತು. ಆ ನಿಜದ ನಿಲವು ತನುತ್ರಯವನ್ನು ನುಂಗಿತು. ಆತ್ಮತತ್ತ್ವವನ್ನು ಅವಗ್ರಹಿಸಿತು. ಜಡತ್ವ ಹೊಂದಿದವರು ಇದನ್ನು ಅರಿಯಲಾರರು. ಇದೆ ನಿಜ ತತ್ತ್ವ ಇದನ್ನರಿತವನೇ ಶರಣ. ಶಿವಾನುಭಾವಯೋಗದಿಂದ ಲಿಂಗಾನುಭಾವ ಸಂಪನ್ನತೆ ತಲೆದೋರಿ ನಿರಾಳ ಶಿವತತ್ತ್ವದಲ್ಲಿ ವಿರಮಿಸುವುದು. ಆಗ ನಿಜದ ಅರಿವು ಬ್ರಹ್ಮಜ್ಞಾನದಲ್ಲಿ ಸ್ಥಾಯಿಯಾಗುತ್ತದೆ. ಬ್ರಹ್ಮ ಜ್ಞಾನದೊಳಗೆ ಆತ್ಮನನ್ನು ಅವಗ್ರಹಿಸಿ ಪರಮಾತ್ಮ ಸ್ವರೂಪನನ್ನು ಅರಿಯಲು ಆ ಸುಖವನ್ನು ಶಿವಶರಣನು ಲೋಕಕ್ಕೆ ಉಸುರದೆ ತಾನೆ ಅರಿತುಕೊಳ್ಳುತ್ತಾನೆ.

ಪ್ರಾಣಲಿಂಗವು ಸರ್ವಾಂತರ್ಯಾಮಿಯೆಂದು ಅಣುರೇಣು ತೃಣಕಾಷ್ಠದೊಳಗೂ ಶಿವನಿದ್ದಾನೆಂದು ತಿಳಿದು ಅದರ ಅಂತರಂಗವನ್ನು ಗ್ರಹಿಸಿ, ಶಿವನ ಪ್ರಭೆ ಪರಂಜ್ಯೋತಿ ತಾನೆಂದು ಶಿವಶರಣನು ಅರಿವ ಮೂಲಕ ಉಪಮಾತೀತನಾಗುತ್ತಾನೆ. ವಿಸ್ತಾರವಾದ ಅನುಭವದಿಂದ ಶಿವಜ್ಞಾನವನ್ನು ತನ್ನದಾಗಿಸಿಕೊಂಡು ಸದಾಚಾರದಿಂದ ಸಮಾಧಾನ ಹೊಂದಿದಾಗ –ತ್ರಿವಿಧಗಳು ಏಕಾರ್ಥದಲ್ಲಿ ನೆಲೆಗೊಂಡು ಅರಿವು ಗೋಚರವಾದುದನ್ನು ಅನಂತಲೋಕದ ಅಸಂಖ್ಯಾತ ಶಿವಮಹಾಗಣಗಳು ಲಿಂಗಭಾವಭರಿತರಾಗಿ ಕಣ್ತೆರೆದು ತೋರಿದರು. ಆ ಮೂಲಕ ಭಕ್ತಿ ರಾಜ್ಯವನ್ನು ಪ್ರವೇಶಿಸಿ ಲಿಂಗವನರಿತು ವಿವೇಕ ಮೂಡಿ ಪರಮಾನಂದದ ಪರಿಣಾಮ ಜ್ಯೋತಿ ಪ್ರಾಣಲಿಂಗದಲ್ಲಿ ಮೂರ್ತಗೊಂಡು ಅಖಂಡ ಪರಿಪೂರ್ಣತೆ ಸಾಧಿತವಾಯಿತು. ಇದೇ ಅರಿವು ಅನುಭಾವ, ಆತ್ಮಜ್ಞಾನ ಹೊಂದುವ ಪರಿಯಾಗಿದೆ.

'ಸುಳಿವ ಸುತ್ತುವ ಮನದ ವ್ಯವಹರಣೆಯುಳ್ಳನ್ನಕ್ಕರ, ಅರಿಯೆನರಿಯೆ ನೆರೆ ಶಿವಪಥವ
ಗುಹೇಶ್ವರಲಿಂಗದ ನಿಜವನರಿದ ಬಳಿಕ ಅರಿಯೆನರಿಯೆ ಲೋಕದ ಬಳಕೆಯ' [14]

ಸ್ಥಿರವಲ್ಲದ ಚಂಚಲ ಮನಸ್ಸು ಬಾಹ್ಯ ಪ್ರಪಂಚದಲ್ಲಿ ಸುತ್ತುತ್ತಾ ಪ್ರಲೋಭನೆಗಳಿಗೆ ಒಳಗಾಗುತ್ತಿರುತ್ತದೆ. ಈ ಜಂಜಡ ಇರುವವರೆಗೆ ಶಿವಪಥವನ್ನು ಅರಿಯಲಾಗದು. ಅಂದರೆ ಅನುಭಾವ ಜಗತ್ತಿನೊಳಗೆ ಪ್ರವೇಶವಾಗದು, ಗುಹೇಶ್ವರಲಿಂಗದ ನಿಜದ ನೆಲೆಯನ್ನು ತಿಳಿದ ಬಳಿಕ ಮಾತ್ರ ಅನುಭಾವ ಜಗತ್ತಿನ ಅರಿವು ಸಾಧ್ಯ. "ನೆನಹು ಸತ್ತಿತ್ತು, ಭ್ರಾಂತು ಬೆಂದಿತ್ತು, ಅರಿವು ಮರೆಯಿತ್ತು............" [15]

ನೆನಹು, ಭ್ರಾಂತಿ, ಕುರುಹು ಎಲ್ಲ ನಾಶವಾದ ಸ್ಥಿತಿ. ಅದನ್ನು ಹಿಂತಿರುಗಿ ಪಡೆಯಲು ಸಾಧ್ಯವೇ? ಅಂಗನಷ್ಟವಾಗಿ ಲಿಂಗಲಯವಾಗಿ ಕಂಗಳಿಗೆ ಬೆಳಗಿನ ಅರಿವುದೋರಿತು. ಅಂದರೆ ಅರಿವು ಸಾಧ್ಯವಾಯಿತು.

"ಅರಿವಿನ ಕುರುಹಿದೇನೋ ...." [16] ಅನುಭಾವ ಆಧ್ಯಾತ್ಮದ ಕುರುಹಾಗಿ, ಸಂಕೇತವಾಗಿ ಇದೆಯೆ? ಅನಿಮಿಷನಾಥನು ಇರಲು ಭಕ್ತನಾರು ದೇವನಾರು ಎಂಬುದು ಮುಖ್ಯವಾಗುವುದಿಲ್ಲ. ಅದಲು-ಬದಲಾಗುವ ಈ ಪ್ರಕ್ರಿಯೆಯೇ ಶಿವ-ಶರಣನ ನಡುವಿನ ಸಂಬಂಧ. ಕಾಯಪಲ್ಲಟದ ಮುಖಾಂತರ ಅನುಭಾವ ಹೊಂದುವ ಬಗೆ ಇದು. ಆತ್ಮ-ಪರಮಾತ್ಮನ ನಡುವೆ ಭೇದವಿಲ್ಲ, ತನ್ನ ಅಸ್ತಿತ್ವದ ಅರಿವನ್ನು ಹೊಂದಿದ ಬಳಿಕ ಭಿನ್ನತೆ ತೊಡೆದು ಹೋಗುತ್ತದೆ. ದೇಹ ಭಾವದಿಂದ ಮುಕ್ತನಾಗಿ ಅನುಭಾವವನ್ನು ಅರಿದು ಭಾವರಹಿತನಾಗಿ ಗುಹೇಶ್ವರನಲ್ಲಿ ಲೀನವಾಗುತ್ತಾನೆ. ಅನುಭಾವದ ಮಾರ್ಗದಲ್ಲಿ ಅಂಗ ಮತ್ತು ಲಿಂಗಗಳೆರಡು ಒಂದನ್ನೊಂದು ಅವಿನಾಭಾವ ಸಂಬಂಧದಲ್ಲಿ ನೆಲೆಯಾಗಿದೆ. ಅಂಗದ ಮೇಲೆ ಲಿಂಗವೇ, ಅರಿವಿನಲ್ಲಿ ಕುರುಹು ಮೂಡುತ್ತದೆಯೋ ಅಥವಾ ಕುರುಹಿನ ಜ್ಞಾನದ ಮೂಲಕ ಮನದಲ್ಲಿ ಅರಿವು ಮೂಡುತ್ತದೆಯೋ ತಿಳಿಯದು. ಇಲ್ಲಿ ನಾನು ನೀನು ಅಂದರೆ ಅಂಗ-ಲಿಂಗ, ಅರಿವು-ಕುರುಹು ಎಂಬ ದ್ವಿಧಾಭಾವಗಳು ಪರಸ್ಪರ ಸಂಬಂಧದಲ್ಲಿ ನೆಲೆಗೊಂಡಿವೆ. ಪರಂಪರೆಯ ನೆಲೆಯನ್ನು ಅರಿಯಲಾಗದವರು ಅರಿವು ಹೊಂದುವಲ್ಲಿ ಅಸಮರ್ಥರಾದರು. ಬೆಳಗಲ್ಲಿ ಹುಟ್ಟಿ ಅಸ್ತಮಾನದಲ್ಲಿ ಕಳೆದುಹೋಗುವ ಇವರು ಕಾಯದಲ್ಲಿ ಧರಿಸಿ ನಾಶಹೊಂದುತ್ತಾರೆ. ಇಂತವರಿಗೆ ಗುಹೇಶ್ವರ ಲಿಂಗದ ಅರಿವು ಸಿದ್ಧಿಸುವುದಿಲ್ಲ. ಆಚಾರ-ನಿಯಮಗಳನ್ನು ಪಾಲಿಸುವಾತನ ಅರಿವು ಆಚರಣೆಯ ಮಿತಿಗೆ ಸೀಮಿತವಾದದ್ದು. ಭಕ್ತನ ತಿಳಿವು ಭಕ್ತಿಯೊಳಗೆ ನೆಲೆಗೊಳ್ಳುವಂಥದ್ದು. ಹೀಗೆ ಅರಿವು ಅನ್ನುವುದು ಅವರವರ ಭಾವ ಮತ್ತು ಕ್ರಿಯಾಪ್ರಪಂಚದೊಳಗೆ ಮೂಡುವಂಥದ್ದು. ಪ್ರಾಪಂಚಿಕ ಬಂಧನದಲ್ಲಿ ಸಿಲುಕಿ ಅದರೊಳಗೆ ನಿತ್ಯವು ಹೊರಳುವ ಜೀವಿಗಳ ಬದುಕು ಕೊಳಚೆಯಲ್ಲಿ ಹೊರಳುವ ಕ್ಷುದ್ರ ಜೀವಿಗಳ ಬದುಕಂತೆ ವ್ಯರ್ಥವಾಗುತ್ತದೆ. ಶಿವನಿಚ್ಚೆಯ ಅರಿವು ಮೂಡಲು ಸಾಧ್ಯವಿಲ್ಲ.

ಆತ್ಮದ ಮರವೆಯಲ್ಲಿ ಭವವೆಂಬ ಅಡವಿ ಹುಟ್ಟಿತು. ಆ ಅಡವಿಯಲ್ಲಿ ಕಾಮವೆಂಬ ವ್ಯಾಧನು ಜೀವವೆಂಬ ಮೃಗವನ್ನು ತನ್ನ ವಶದಲ್ಲಿ ಹಿಡಿದುಕೊಂಡು ಜೀವನಷ್ಟವ ಮಾಡಿದನಲ್ಲದೆ ಆ ವ್ಯಾಧನು ನಾಶವಾಗಲಾರ. ಹೀಗೆ ಜೀವಭಾವ ಹಿಂಗಿದವರೆ 'ಅರಿವು ಬರಿದುಂಟೆ' ಗುಹೇಶ್ವರ ಎಂದಿದ್ದಾನೆ. ವೇದ ಪುರಾಣ ಶಾಸ್ತ್ರಗಳು ತಮ್ಮ ವಿಚಾರಗಳನ್ನು ಜೀವಿಗಳಿಗೆ ಸಮರ್ಥವಾಗಿ ಮುಟ್ಟಿಸುವಲ್ಲಿ ಸೋತು ಹೋದವು. ಹಿರಿಯರು ಪರಂಪರೆಯ ವಿಚಾರಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ಅನುಸರಿಸಿ ಕೆಟ್ಟರು. ಇಂತಹವರು ತಮ್ಮತನವನ್ನು ಕಳೆದುಕೊಂಡರು. ತಮ್ಮ ಆತ್ಮದ ಅರಿವು ಹೊಂದಲು ವಿಫಲರಾದ ಇವರು ಗುಹೇಶ್ವರ ಲಿಂಗವನ್ನು ಹೇಗೆ ತಾನೆ ಅರಿಯಲು ಸಾಧ್ಯ? ಅಜ್ಞಾನ ಮುಸುಕಿಕೊಂಡಿರುವ ಜೀವಕ್ಕೆ ಸುವಿವೇಕ ಬೋಧೆಯನ್ನು ಮಾಡಲು ಮನಸ್ಸು ನಿರ್ಮಲವಾಗಿ ಅಲ್ಲಿ ಜ್ಞಾನರತ್ನ ಕಾಣಿಸುತ್ತದೆ. ಜ್ಞಾನವನ್ನು

ಹೊಂದಿದ್ದೇವೆಂದು ಮರೆಯುವವರು ನಾಶವಾಗಿ ಹೋದರು. ಕರಿಯ ಘಟವೆಂಬ ಅಜ್ಞಾನದಿಂದ ಹೊರಬಂದು ಜ್ಞಾನವನ್ನು ಹೊಂದಿದವರಿಗಲ್ಲದೆ ಇತರರಿಗೆ ನಿಜತತ್ತ್ವ ಕಾಣದು. ಲಿಂಗ-ಜಂಗಮ ಸಂಬಂಧವನ್ನು ಅರಿತಿಹೆವೆಂಬುವರು ಗುರು ಮೊದಲೋ ಶಿಷ್ಯ ಮೊದಲೋ ಎಂಬ ಅರಿವನ್ನು ಹೊಂದಲು ಅಸಮರ್ಥರಾದು. ಭಕ್ತನಾದವನ ಭಕ್ತಿ, ಆಚಾರಗಳು ಬಿರುಗಾಳಿಯಂತೆ ಬೀಸದೆ ಪರಿಮಳ ಬೀರುವ ತಂಗಾಳಿಯಾಗಬೇಕು. ಆ ಮೂಲಕ ಜೀವನು ಜಂಗಮನಾಗಿ ಗುಹೇಶ್ವರನ ಕೃಪೆಗೆ ಪಾತ್ರನಾಗಬೇಕು. ಅಲ್ಲದಿದ್ದರೆ ಇಹ ಪರದಲ್ಲಿ ಅರಿವುದೋರದೆ ಉಭಯಭ್ರಷ್ಟನಾಗುತ್ತಾನೆ.

"ಏನೆಂದರಿಯರು ಎಂತೆಂದರಿಯರು! ಅರಿವನರಿವೆಂಬರು: ಮರೆದೆವೆಂದೆಂಬರು ಒಂದನರಿದೆನೆಂದಡೆ ಮುಖ ಮೂರಾಯಿತ್ತು............"[17] ಅರಿವು- ಮರಹುಗಳ ಕುರಿತ ಜಿಜ್ಞಾಸೆ ಇದೆ. ಅರಿವು ಎಂದರೆ ಏನು? ಅರಿವನ್ನು ಹೊಂದುವ ಬಗೆ ಹೇಗೆ? ಮರಹು ಎನ್ನುವುದರ ಸ್ವರೂಪವೇನು? ಇದಾವುದನ್ನು ತಿಳಿಯದೆ ಅರಿವನ್ನು ಹೊಂದಿದ್ದೇವೆಂಬ ಶರಣರ ಮುಖವು ನೋಡಲಾಗದು ಎಂದಿದ್ದಾನೆ. ಬದುಕಿನಲ್ಲಿ ಕಾಯಹೊಂದಿ ಹುಟ್ಟಿದ ಬಳಿಕ ಕಾರ್ಯವೇನೆಂದರಿಯರು, ಬದುಕಿನ ಕೊರತೆ ಯಾವುದೆಂದು ಅರಿಯದೆ ದಿನನಿತ್ಯದ ಜಂಜಡದಲ್ಲಿ ನರಳುತ್ತಾ ಜ್ಞಾನಿಗಳೆಂದು ಬೀಗುವವರ ಕಂಡು ನಾಚಿದೆನೆಂದು ಮರುಕ ವ್ಯಕ್ತವಾಗಿದೆ. ಮಾಯೆಯ ವಶಕ್ಕೆ ಸಿಲುಕಿಕೊಂಡು ಅಜ್ಞಾನದಲ್ಲಿ ತೊಳಲಾಡುವಾಗಲೇ ಅರಿವನ್ನು ಪಡೆದೆನೆಂದು ಬೀಗುವವರು ಗುಹೇಶ್ವರನಿಂದ ದೂರವೇ ಉಳಿಯುತ್ತಾರೆ. ಮಾಯೆ ವಶದಿಂದ ಮುಕ್ತನಾದಾಗಲೇ ಅರಿವು ಮೂಡತೊಡಗಿ ಅಜ್ಞಾನದಿಂದ ಮುಕ್ತನಾಗಿ ಅರಿವಿನೆಡೆಗೆ ಬೆಳಗು ಮೂಡಿತು. ಮನದ ಮರವೆ ಶರೀರದೊಂದಿಗೆ ಇರುವವರೆಗೂ ಅರಿವು ಸಾಧ್ಯವಿಲ್ಲ. ಭವಿ ಮತ್ತು ಭಕ್ತ ಎರಡರಲ್ಲಿ ಏಕಕಾಲದಲ್ಲಿ ನಿಲ್ಲುವ ಪ್ರಯತ್ನ ನಡೆದಾಗ ನೆಲೆ ಸಾಧ್ಯವಿಲ್ಲ. ಹಾಗೆ ಭವಬಂಧನದಿಂದ ಮುಕ್ತನಾಗದ ಹೊರತು ಶರಣನಾಗಲು ಸಾಧ್ಯವಿಲ್ಲ. ಜೀವಬಂಧನದಲ್ಲಿ ಎದುರಾದ ಎಲ್ಲಾ ಅಡೆತಡೆಗಳನ್ನೂ ಎದುರಿಸಿ ಬಾರದಿರುವುದನ್ನು ಕಳೆದು ಕಾಯವನ್ನು ಹೊಂದಿದ ಜೀವಿಗಳು ಕಳವಳಿಸಿ ಬದುಕನ್ನು ಸವೆಸಿದರು. ಲಿಂಗದ ಹವಣರಿಯದೆ ಅಶನಕ್ಕಾಗಿ ಕಳವಳಿಸಿದರು. ಇಂತಹವರಿಗೆ ಗುಹೇಶ್ವರನ ನಿಲುವು ಅಗಮ್ಯವಾದುದು. ಸುಖ, ಸಂತೋಷಗಳ ನಿಜದ ವ್ಯಾಖ್ಯಾನವನ್ನರಿಯದವರು ಭ್ರಮೆಯಲ್ಲಿ ಅದಕ್ಕಾಗಿ ಬಳಲಿ ಸವೆದರು. ಗುಹೇಶ್ವರನ ಅರಿವು ಹೊಂದಿದವನಿಗೆ ಸಹಜವಾದ ಕಷ್ಟಸುಖಗಳ ಬದುಕೆ ಸತ್‌ಸುಖವಾಗುತ್ತದೆ. ಆದಿ-ಅನಾದಿ, ಇಂದು- ನಾಳೆ, ಹಿಂದು-ಮುಂದು ಎಲ್ಲವೂ ಒಂದರೊಳಗಿಂದ ಇನ್ನೊಂದು ಅಸ್ತಿತ್ವ (identity) ಹೊಂದುವಂಥವು. ಗುಹೇಶ್ವರನ (ಆಧ್ಯಾತ್ಮ, ಅನುಭಾವ) ನೆಲೆಯನ್ನು ಅರಿತವನಿಗೆ ಏಕದೃಷ್ಟಿ ಪ್ರಾಪ್ತವಾಗುತ್ತದೆ.

ಸಂಸಾರವೆಂಬ ತೊರೆಯನ್ನು ಹಾಯಲು ದೇಹವೇ ಹರಿಗೋಲು. ಕರಣೇಂದ್ರಿಯಗಳೇ ಸವಾರಿ ಮಾಡುವವರು. ಆ ಸಂಸಾರ ಸಾಗರದಗಲದಲಿ ಕ್ರೀಡಿಸುವ ಕಾಲನೆಂಬ ಮೊಸಳೆ ಯಾವುದೋ

ಘಳಿಗೆಯಲ್ಲಿ ಹರಿಗೋಲನ್ನು ನುಂಗಿಬಿಡುವುದು, ಎಚ್ಚೆತ್ತು ನಡೆದಾಗ ಮಾತ್ರ ದಡ ಸೇರಲು ಸಾಧ್ಯ. ಈ ಮರ್ಮವನ್ನರಿಯುವುದೇ ಹುಟ್ಟು-ಸಾವುಗಳ ರಹಸ್ಯ. ಭವದಿಂದ ಮುಕ್ತನಾಗಿ ಕಾಯಗುಣವಳಿದು ಅಂತರ್ಗತವಾದ ಸಕಲ ಕರಣಗಳನ್ನು ಅಳಿಸಿ ಹಾಕಿದಾತನೆ "ಇದರೊಳಹೊರಗನರಿದಾತನ ...." [18] ಎಂದಿದ್ದಾನೆ. ಅಂತಹವನೆ ಸೃಷ್ಟಿಯ ಮರ್ಮವನ್ನರಿತ ಸುಜ್ಞಾನಿಯಾಗುತ್ತಾನೆ.

'ಬಲ್ಲನಿತ ಬಲ್ಲರಲ್ಲದೆ, ಅರಿಯದುದನೆಂತು ಬಲ್ಲರಯ್ಯ? ಅರಿವು ಸಾಮಾನ್ಯವೆ? ಅರಿಯದುದನಾರಿಗೂ ಅರಿಯಬಾರದು. ಗುಹೇಶ್ವರನೆಂಬ ಲಿಂಗವನರಿಯದಡೆರಡು ಅರಿದಡೊಂದೆ!"[(19)]

'ಅರಿದೆವರಿದೆವೆಯಿರಿ! ಅರಿದ ಪರಿಯೆಂತು ಹೇಳಿರೆ? ಅರಿದವರಿರೆದೆವೆಂಬರೇ? ಅರಿಯ ಬಾರದ ಘನವನರಿದವರು ಅರಿಯದಂತಿಪ್ಪರು ಗುಹೇಶ್ವರ![(20)]

ನಮ್ಮ ತಿಳಿವಿನ ವಿಸ್ತಾರ ವ್ಯಾಪ್ತಿಯ ಹಿನ್ನೆಲೆಯಲ್ಲಿ ಅರಿವು ಬರಬಹುದೇ ಹೊರತು ಅದಕ್ಕಿಂತ ಮೀರಿದ್ದು ನಮ್ಮ ಅನುಭವಕ್ಕೆ ದಕ್ಕಲಾರದ ಸಂಗತಿ. ಅರಿವು ಸಾಮಾನ್ಯವೆ? ಎಂಬ ಮಾತೇ ಅದರ ಸೂಕ್ಷ್ಮ, ಆಳ, ವಿಸ್ತಾರತೆಯನ್ನು ಮುಂದಿಡುತ್ತದೆ. ಅರಿವೆಂಬುದು ಕೇವಲ ವಿಷಯದ ಬಾಹ್ಯ ತಿಳುವಳಿಕೆಯಲ್ಲ. ಅದನ್ನು ಒಳಹೊಕ್ಕು ಅರ್ಥೈಸಿಕೊಂಡು ಅನುಭವಕ್ಕೆ ಒಳಗಾಗಿಸುವ ಪ್ರತಿಯೊಂದು ಅರಿವಿನ ಭಾಗ ಮಾತ್ರ. ಆದ್ದರಿಂದ ಅರಿವಿನ ನೆಲೆ ಯಾವುದು ಎಂದು ಹೇಳುವುದು ಸುಲಭಸಾಧ್ಯವಲ್ಲ. ಅನುಭಾವ, ಅರಿವು, ಅನುಭವದ ಮೂಲಕ ಅಂತರಂಗದಲ್ಲಿ ಹೊಳೆವ ಜ್ಯೋತಿಯೇ ಹೊರತು ಬಾಹ್ಯದ ವಿವರವನ್ನು ಅರಿತಿದ್ದೇವೆ ಎಂದವರಿಗೆ ಅರಿವಿನ ನಿಜದ ನೆಲೆಯೇ ತಿಳಿದಿರುವುದಿಲ್ಲ. ಆದರೂ ಜ್ಞಾನಿಗಳೆಂದು, ಜ್ಞಾನವನ್ನು ತಮ್ಮದಾಗಿಸಿಕೊಂಡಿದ್ದೇವೆಂದು ಮೆರೆಯುತ್ತಾರೆ. ಅರಿದವರು ಯಾವತ್ತೂ ಅರಿದವರಂತೆ ತೋರುವುದಿಲ್ಲ. ಅರಿಯಬಾರದ ಘನವೇ 'ಅರಿವು'. ಅನುಭಾವವನ್ನು ಅನುಭವಕ್ಕೆ ತಂದುಕೊಳ್ಳುವ ಮೂಲಕ ಹಂತಹಂತವಾಗಿ ಅರಿವು ಮೂಡಬೇಕು ಎಂದು ಅರಿದೆವೆಂಬ ಅಜ್ಞಾನಿಗಳನ್ನು ವಿಡಂಬಿಸುತ್ತಾ, ಅರಿವಿನ ನಿಜದ ನೆಲೆಯ ಸ್ವರೂಪವನ್ನು ಈ ರೀತಿ ವಿಶ್ಲೇಷಿಸುತ್ತಾರೆ.

ತನುವಿನ ಮರವೆಯಿಂದ ಮನಸ್ಸು ಮರ್ಕಟವಾಯಿತು. ಶಿವನನ್ನು ಅರಿತು ಮುಕ್ತರಾಗುವೆವೆಂಬ ಜ್ಞಾನಿಗಳಿಗೆ ಅರಿವನ್ನು ಹೊಂದದಂತೆ ಮಾಡಿ ಪ್ರಾಪಂಚಿಕತೆಯಲ್ಲಿ ಕೆಡಹಿತು. ಮನೋವಿಕಾರಗಳು ಅಳಿಯದ ಹೊರತು ನಿರ್ವಿಕಾರ ಜ್ಞಾನ ಅಳವಡದು. ಎಲ್ಲ ದುಶ್ಚರಿತಗಳಿಂದ ಮುಕ್ತನಾಗಿ ಹುಟ್ಟು-ಸಾವು ಕರಣಗಳನ್ನು ಗೆದ್ದುಕೊಳ್ಳುವ ಮರ್ಮವನ್ನು ಅರಿದಾತನೇ ಅರಿವಿನ ಬಗೆಯಲ್ಲಿ ಲಿಂಗೈಕ್ಯನಾಗುತ್ತಾನೆ.

"ತನ್ನನರಿದ ಅರಿವೆಂತುಟೋ? ತನ್ನ ಮರೆದ ಮರೆಹೆಂತುಟೋ? ಅರಿದು ಮರೆದವರು ನಿಮ್ಮ ಪ್ರತಿಬಿಂಬದಂತಿಪ್ಪರು ಕಾಣಾ ಗುಹೇಶ್ವರ" [21]

ತನ್ನನ್ನು ತಾನರಿತ ಭಕ್ತನ ಆತ್ಮಜ್ಞಾನ ಯಾವ ಬಗೆಯದ್ದೋ ತಿಳಿಯದು. ಬಾಹ್ಯವನ್ನು ಮರೆತ ಮರೆವಿನ ಪರಿ ಯಾವುದೋ ತಿಳಿಯದು. ಆದರೂ ಈ ರೀತಿ ಬಾಹ್ಯದ ಹಂಗನ್ನು ಕಳೆದು ಆತ್ಮಜ್ಞಾನದ

ಮೂಲಕ ಅರಿವಿನ ಪಥದಲ್ಲಿ ನಡೆದವರು ಲಿಂಗದ ಪ್ರತಿಬಿಂಬದಂತಾದರು. ಇಲ್ಲಿ ಅರಿವಿನ ಮೂಲಕ ಶರಣ ಮತ್ತು ಲಿಂಗದ ನಡುವೆ ಒಂದಾಗುವ ಪ್ರಕ್ರಿಯೆ ಕಾಣಿಸಿಕೊಳ್ಳುತ್ತದೆ. ಮಾಯೆ-ಮೋಹಗಳು ಮನದಿಂದ ದೂರವಾಗದೆ, ತನುವನ್ನು ಹೊಂದಿ ಮಾಡುವ ಕಾರ್ಯಗಳಿಂದ ಮುಕ್ತನಾಗದೆ ಅರಿವು ಬರುವುದೇ? ಅರಿವಿನ ನಿಜ ಸಾಧ್ಯವಿಲ್ಲ. ಗುಹೇಶ್ವರಲಿಂಗದ ಅರಿವು ಮೂಡಬೇಕಾದರೆ ಭಕ್ತನಾದವ ತನ್ನೊಳಗನ್ನು ತಾನು ಮೊದಲು ಅರಿಯಬೇಕು. ಅದು ಮಾಯೆ-ಮೋಹ, ಕಾಯಗಳನ್ನು ಅಳಿದು ಹೊಂದುವ ಆತ್ಮಜ್ಞಾನದ ಮೂಲಕ ಮಾತ್ರ ಸಾಧ್ಯ. 'ಅರಿವಿನಲ್ಲಿ ಉದಯಿಸಿ ಮರೆದು ನಷ್ಟವಾಗಿದ್ದ ಶರಣನ ಪರಿಯನರಿಯಲುಂಟೆ?………" [22]

ಅರಿವನ್ನು, ಆತ್ಮಜ್ಞಾನವನ್ನು ಆ ಮೂಲಕ ಬ್ರಹ್ಮಜ್ಞಾನವನ್ನು ಹೊಂದಿದ ಶರಣನು ಮರಹು ನಷ್ಟ ಹೊಂದಿದನು. ಒಮ್ಮೆ ಅರಿವು ಹೊಂದಿದ ಮೇಲೆ ಆತನ ಹಿಂದಣ ಪರಿಯನ್ನು ಅರಸಲು ಸಾಧ್ಯವಿಲ್ಲ. ಏಕೆಂದರೆ ಅದರ ಯಾವ ಕುರುಹೂ ಅಲ್ಲಿ ಉಳಿದಿರುವುದಿಲ್ಲ. ಅದೇನಿದ್ದರೂ ಕನಸಿನಲ್ಲಿ ಕಂಡು ಕಾಣದಾದ ಚಿತ್ರಗಳಂತೆ. ಹಿಡಿತಕ್ಕೆ, ಆಕಾರಕ್ಕೆ, ವ್ಯಾಖ್ಯಾನಕ್ಕೆ ಸಿಗದೇ ಹೋಗುತ್ತದೆ. ಇದು ಅರಿವು ಪಡೆದ ಬಳಿಕ ತಾನಾಗಿ ಮರವೆಗೆ ಸಂದಿತ್ತು. ಇದು ಗುಹೇಶ್ವರನ ನಿಲುವು ಹೌದು, ಅರಿದ ಶರಣನ ನಿಲುವು ಹೌದು.

'………… ಅರಿವಿನೊಳಗಣ ಮರವು ಮರಹಿನೊಳಗಣ ಅರಿವು! ಗುಹೇಶ್ವರನೆಂಬ ಲಿಂಗವು ತ್ರಿಕಾಲ ಪೂಜೆಯ ನುಂಗಿತ್ತು.' [(23)] ದೇಹದಲ್ಲಿ ಜನಿಸಿದುದು ಪ್ರಕೃತಿ. ಆ ಪ್ರಕೃತಿಯೆಂಬ ಮಿಥ್ಯೆಯನ್ನು ಅಳಿದರೆ ದೇಹಭಾವದ ಮೂಲಶಕ್ತಿಯು ಮೂಡುತ್ತದೆ. ಆ ಶಕ್ತಿಯ ದೃಢತೆಯಿಂದ ಇಂದ್ರಿಯಗಳು ನಷ್ಟವಾಗುತ್ತವೆ. ಮೋಕ್ಷಮಾರ್ಗಕ್ಕೆ ಅನುಕೂಲವಾದ ಜ್ಞಾನಶಕ್ತಿಯು ಪರಮಾತ್ಮನಲ್ಲಿ ಆ ಮೂಲಕ ಆತ್ಮಜ್ಞಾನದಲ್ಲಿ ಮೂಡಿ ನಿಶ್ಯಬ್ದವಾಯಿತು. ಇಂಪಾಗಿ ಅರಿವಿನೊಳಗೆ ತನ್ನ ತಾನು ಕುರುಹಿಡುವುದನ್ನು ಮರೆಯಲು, ಅದರೊಳಗಿಂದ ನಿಜದರಿವು ಮೂಡಿ ತ್ರಿಕಾಲ ಪೂಜೆಯನ್ನು ನಾಶಮಾಡಿತು. ಅರಿವು ಮೂಡಿದ ಬಳಿಕ ಲಿಂಗ, ಪ್ರಸಾದಗಳೆಲ್ಲ ಅರ್ಥಹೀನವಾಗುತ್ತದೆ. ಮನದೊಳಗೆ ಮೂಡಿದ ಅರಿವು, ಆತ್ಮಜ್ಞಾನವೇ ಗುಹೇಶ್ವರನಲ್ಲಿ ಐಕ್ಯಗೊಂಡು ಲಿಂಗದ ಹಂಗನ್ನು ತೊರೆಯುವಂತೆ ಮಾಡುತ್ತದೆ.

'ನ ಎಂಬುದೆ ನಂದಿಯಾಗಿ 'ಮ' ಎಂಬುದೇ ಮಹತ್ತಾಗಿ 'ಶಿ' ಎಂಬುದೆ ರುದ್ರನಾಗಿ 'ವಾ' ಎಂಬುದೆ ಹಂಸೆಯಾಗಿ 'ಯ' ಎಂಬುದೆ ಅರಿವಾಗಿ, ಓಂಕಾರವೇ ಗುರುವಾಗಿ ಸಂಬಂಧವೆ ಅಸಂಬಂಧವಾಗಿ ಅಸಂಬಂಧವೆ ಸಂಬಂಧವಾಗಿ, ಎರಡೊಂದಾಗಿ ಗುಹೇಶ್ವರ ಲಿಂಗದಲ್ಲಿ ಸಂಬಂಧಿ.'[(24)]

(ನ-ಚಿತ್ತ) ಚಿತ್ತವೆ ಲೋಕವೆಲ್ಲಕ್ಕೂ ಆದಿಯಾದ ನೆಲೆಯಿಂದ ಅದೆ ಅಂಗದಲ್ಲಿ ಅಳವಟ್ಟಿತ್ತು. (ಮ-ಬುದ್ಧಿ) ಬುದ್ಧಿಯೆಂಬುದು ನಿಶ್ಚಿತವಾಗಿ ಚಿತ್ತದಲ್ಲಿ ನೆಲೆಯಾಯಿತು. ಆಗ (ಶಿ-ರುದ್ರ) ಶಿಕಾರವೆ ಶಿವಸ್ವರೂಪವಾಗಿ ಸರ್ವಾಂಗದಲ್ಲಿ ವ್ಯಾಪಿಸಿ ಭವಬಂಧದಿಂದ ಮುಕ್ತಗೊಳಿಸಿತು. (ವ-ವಾಯು)

ಪ್ರಾಣವಾಗಿರುವ ವಾಯುವೇ ಲಿಂಗಸ್ವರೂಪಿಯಾಯಿತು. (ಯ-ಜ್ಞಾನ) ಅನಂತರ ಸುಜ್ಞಾನ ನೆಲೆಗೊಂಡು ಅರಿವು ಮೂಡಿತು. ಆ ಮೂಲಕ ಶರಣನು ಸಮಸ್ತ ಲೋಕದ ಗುರುವಾದ ಓಂಕಾರವಾದನು. ಹೀಗೆ ಷಡಕ್ಷರಗಳೇ ಭಕ್ತನ ಸರ್ವಾಂಗದಲ್ಲಿ ಅಳವಟ್ಟು ಉಭಯನಾಮಗಳನ್ನು ಅಳಿದು ಶರಣನಾದನು.

'.................... ಅರಿವು ಕುರುಹನು ಮರವೆ ನುಂಗಿತ್ತು. ಗುಹೇಶ್ವರನುಳಿನವ್ವ'[25] ದೇಹ ಪ್ರಕೃತಿ, ಪ್ರಾಣಧರ್ಮ ಎಲ್ಲವೂ ನಾಶವಾಗುವಂತವು, ಅದನ್ನು ಕಳೆದುಕೊಳ್ಳುವುದರ ಮೂಲಕ ಉದಯಿಸುವ ಸುಜ್ಞಾನ (ಅರಿವು) ಶಿಶು ಮಾತ್ರವೇ ಕರಸ್ಥಲದ ಲಿಂಗವಾಗಿ, ನಾಲಗೆಯ ಮಂತ್ರವಾಗಿ ನಿಲ್ಲುತ್ತದೆ. ಇದರ ಮೂಲಕ ಗುಹೇಶ್ವರನ ನಿಲುವು ಸಾಧಿತವಾಗುತ್ತದೆ. 'ಅರಿ' ವು ಅರಿವೆನುತ್ತಿಪ್ಪಿರಿ ಅರಿವು ಸಾಮಾನ್ಯವೇ?............" [26] ಹಿಂದೆ ತಾನೇನಾಗಿದ್ದೆ ಎಂಬುದನ್ನು ಅರಿಯದ ಹೊರತು, ಈಗ ಏನಾಗಿದ್ದೇನೆ, ಮುಂದೆ ಏನಾಗಬೇಕು ಎಂಬ ವಿಚಾರ ಸಾಧ್ಯವಾಗದು. ದೇಹಧರ್ಮವಳಿದು ಆತ್ಮಜ್ಞಾನದಲ್ಲಿ ನಿಂದು ಸುಜ್ಞಾನ ಪ್ರಕಾಶವಾಗಬೇಕು. ತನ್ನ ನಿಜದ ನೆಲೆಯನ್ನು ಅರಿಯುವುದೇ 'ಅರಿವು' .... ಅಜ್ಞಾನಿಯಾದವನಿಗೆ ಅರಿವು ತಾನೆಲ್ಲಿಯದೋ? ಸುಜ್ಞಾನಿಯಾದವಂಗೆ ಮರೆದು ತಾನೆಯಲ್ಲಿಯದೋ? .... " [27] ಅಜ್ಞಾನಿಯಾದವನಿಗೆ ಅರಿವು ಅಸಾಧ್ಯ. ಆದರೆ ಜ್ಞಾನಹೊಂದಿದವನಿಗೆ ಅರಿವು ಶಾಶ್ವತವಾದುದು. ಸಾಂಸಾರಿಕ ಸಂಬಂಧವೊಂದನ್ನು ಮುಂದಿಟ್ಟು ಲೌಕಿಕದ ನಿರಾಕರಣೆಯನ್ನು ಮಾಡುತ್ತಿದ್ದಾನೆ. ಅಲ್ಲಮನ ಪ್ರಕಾರ ಇವು ವ್ಯಕ್ತಿತ್ವದ ಅಂದಿನ ನೆಲೆಗಳನ್ನು ಸಾಧ್ಯಮಾಡದೆ ಕೇವಲ ಪ್ರಾಪಂಚಿಕ ತೊಳಲಾಟದಲ್ಲಿ ತೊಡಗುವುದನ್ನು ಮಾಡುತ್ತದೆ.

ಆದ್ದರಿಂದಲೇ ಮನುಷ್ಯನ ಅನುಭಾವದ ಅರಿವಿನ ನೆಲೆಗೂ ಹಾಗೂ ಬದುಕಿನ ನೆಲೆಗೂ ಇರುವ ವಿರೋಧ ಸಂಬಂಧವನ್ನು ನಿರಾಕರಿಸುತ್ತಾನೆ.

'ಇರುಳ ನುಂಗಿತ್ತು ಇರುಳಿಲ್ಲ. ಹಗಲ ನುಂಗಿತ್ತು ಹಗಲಿಲ್ಲ,
ಅರಿವ ನುಂಗಿತ್ತು ಅರಿವಿಲ್ಲ, ಮರೆವ ನುಂಗಿತ್ತು ಮರಹಿಲ್ಲ,
ಕಾಯುವ ನುಂಗಿತ್ತು ಕಾಯವಿಲ್ಲ, ಜೀವವ ನುಂಗಿತ್ತು ಜೀವವಿಲ್ಲ,
ಇವೆಲ್ಲವ ನುಂಗಿತ್ತು ಇದೇನಯ್ಯ ಸಾವ ನುಂಗದು ಗುಹೇಶ್ವರ?" [28]

ಜೀವನ ಆತ್ಮದಲ್ಲಿ ಶಿವಜ್ಞಾನ ಉದಿಸಲು, ಇರುಳು ಹಗಲುಗಳೆರಡೂ ಅದರಲ್ಲಿ ಅಡಗಿ ಹೋಗಿ ಅಜ್ಞಾನಗಳು ಅಳಿದು ಕಾಯ- ಜೀವವೆಂಬ ಉಭಯಭಾವಗಳು ನಾಶವಾದುವು. ಈ ರೀತಿ ಆತ್ಮಭಾವ ಹುಟ್ಟಿ ಅಲ್ಲಿ ತಾನೆಂಬ ಭಾವ ಉಳಿದು ಉಳಿದೆಲ್ಲ ಬಾಹ್ಯಂಗಳು ಅಳಿದು ಹೋಯಿತು.

'ಅರಿವಿನೊಳಗೊಂದು ಮರವೆಯಿದೆ, ಮರವೆಯೊಳಗೊಂದು
ಅರಿವಿದೆ ಅರಿವು ಮರಹುಯೆಂದೆರಡು ಅಳಿದರೆ ನಿರ್ವಯಲದೆ
ತಾನೆಂಬಲ್ಲಿ ನಿಷ್ಪತಿಯದೆ; ಇದೇನು ಹೇಳಾ ಗುಹೇಶ್ವರ?' [29]

ಅರಿವು –ಮರವು ಇವು ಒಂದರೊಳಗೊಂದು ಸೇರಿಕೊಂಡಿವೆ. ಅರಿವು ಹೊಂದುವಲ್ಲಿ ಪ್ರಧಾನವಾಗುವುದು ಬಾಹ್ಯದ ಅಥವಾ ಕಾಯದ ಮರೆವು. ಅದೇ ಮರವು ಸಾಧ್ಯವಾಗುವುದು ಅರಿವು ಹುಟ್ಟಿದಾಗ. ಇದೆರಡು ಜತೆಯಾಗಿ ಅಳಿಯುವುದೇ ಅನುಭಾವ 'ಅರಿದೆನರಿದೆನೆಂದರೆ ಅದೇಕೋ ಮುಂದೆ ಮರೆವೆ? ....ನೀನರಿ ಮರುಳೇ ಅನುಭಾವಿಯಾದಡೆ'[30] ಎಂಬಲ್ಲಿ ಅರಿವಿನ ಮುಂದೆ ಮರವೆಯು ಘನತರ ರೂಪದ್ದಲ್ಲ. ಗುಹೇಶ್ವರ ಲಿಂಗವ ಅರಿಯದೆ ಅರಿವು ಅರಿವಲ್ಲ. ಅದು ಬಾಹ್ಯದ ಸಂಗತಿ. ಅನುಭಾವಿಯಾದಡೆ ಅರಿವು ಘನಸ್ತರದಲ್ಲಿ ನೆಲೆಯಾಗುತ್ತದೆ. ಜ್ಞಾನ ಭಾವವು ಹರಿದು ಹಂಚಿ ಹೋದರೆ ಆತ್ಮಜ್ಞಾನದ ಸೂಕ್ಷ್ಮತೇಜದಲ್ಲಿ ಅರಿವು ಮರವೆಗಳೆರಡೂ ಅಳಿದುಹೋಗುತ್ತವೆ. ಅದರ ಪರಿಣಾಮವಾಗಿ ಮನೋಲಯವಾದ ಶರಣನು ಸಕಲ ಚೈತನ್ಯವನ್ನು ಧರಿಸಿಕೊಂಡು ಸಮರಸವನ್ನು ಹೊಂದುತ್ತಾನೆ.

'ಅರಿದೆನೆಂಬುದು ತಾ ಬಯಲು ಅರಿಯೆನೆಂಬುದು
ತಾ ಬಯಲು ಅರೆವಿನ ಕುರುಹಿನ ಮರಹಿನೊಳಗೆ
ಗುಹೇಶ್ವರನೆಂಬುದು ತಾ ಬಯಲು.' [31]

ಅರಿವು, ಮರೆವು, ಕುರುಹು_ ಈ ಮೂರು ಗುಹೇಶ್ವರನ ಅರಿವಿನಲ್ಲಿ ಬಯಲಾಗುತ್ತವೆ. ಅರಿವು ಹೊಂದಿದ ಮೇಲೆ ಅಲ್ಲಿ ಯಾವುದೇ ಭಿನ್ನತೆಯಲ್ಲಿ ಎಲ್ಲವೂ ಬಯಲೇ. ಅಲ್ಲಿ ನಿಗೂಢತೆಗೆ, ಅಗಮ್ಯತೆಗೆ, ಅಮೂರ್ತತೆಗೆ ಅವಕಾಶವಿಲ್ಲ. ಅದೇ ರೀತಿ ಮರೆವು, ಕುರುಹು ಎಲ್ಲವೂ ಒಂದಾದ ಸ್ಥಿತಿಯಲ್ಲಿ ಗುಹೇಶ್ವರನೆಂಬುದು ಬಯಲಾಗಿ ನಿಲ್ಲುತ್ತದೆ. ಅರಿವೆಂಬುದು ಜೀವದ ತಿಳಿವಿನ ಮರೆಯಲಿದ್ದುದನ್ನು ಅರಿಯದೆ ಅಜ್ಞಾನದಿಂದ ಅರಿವೆಂಬುದು ಪರತತ್ತ್ವವೆನ್ನುತ್ತಿದ್ದರು, ಜ್ಞಾನವನರಿಯಲಾರದ ಅಜ್ಞಾನಿಗಳು ಗುಹೇಶ್ವರಲಿಂಗವನರಿಯದ ಅನುಭಾವಿಗಳಿಲ್ಲ. ಅರಿವರಿಲ್ಲದೆ ಮಡುವಿನೊಳಗೆ ಬಿದ್ದ ಆಲಿಕಲ್ಲಿನಂತೆ ಗುಹೇಶ್ವರನ ನಿಲುವು ಯಾರೂ ಅರಿಯದೇ ಹೋದರು. ಕರ್ಪೂರದ ಗಿರಿಗೆ ಉರಿ ಸೋಂಕಿದೊಡನೆ ಅಲ್ಲಿ ಯಾವ ಕುರುಹು ಉಳಿಯಲಾರದು. ಕೆಂಡದ ಗಿರಿಗೆ ಅರಗಿನ ಬಾಣವನ್ನು ಎಸೆದರೆ ಬಾಣವನ್ನು ಮರಳಿ ಪಡೆಯಲು ಸಾಧ್ಯವಿಲ್ಲ. ಅದೇ ರೀತಿ ಗುಹೇಶ್ವರ ಲಿಂಗವನ್ನು ಅರಿದ ಬಳಿಕ ಮರಳಿ ಭವ ಬಂಧನವಿಲ್ಲ. ಅನುಭಾವದ ಮೂಲಕ ಮುಕ್ತಿಯೊಂದೇ ಸಾಧಿತವಾಗುತ್ತದೆ. ಲಿಂಗದ ಅರಿವೆ ಭಕ್ತನಿಗೆ ಮುಖ್ಯವಾದುದುದನ್ನು ಅರಿಯದೆ ಬೇರೇನೆ ಅರಿದರೂ ಫಲವಿಲ್ಲ ಹಾಗೆಯೇ ಲಿಂಗವನ್ನರಿಯದೆ ಜ್ಞಾನವೇ ಅಂತಿಮ ಸತ್ಯ. ಅದರಾಚೆ ಬೇರೆ ಅರಿವಿನ ಅಗತ್ಯವಿಲ್ಲ. ಎಲ್ಲ ಜ್ಞಾನಕ್ಕೂ ಆಧಾರಪ್ರಾಯ ಸರ್ವ ಕಾರಣ ಲಿಂಗದರಿವು ಅದರೊಳಗೆ ಶರಣ ಜ್ಞಾನವನ್ನು ಹೊಂದಬೇಕು. ಜ್ಞಾತೃ, ಜ್ಞಾನ, ಜ್ಞೇಯವೆಂಬ ತ್ರಿವಿಧ ಸಾಧನಗಳಿಂದ ಲಿಂಗವನ್ನು ಅರಿದ ಬಳಿಕ ಅವುಗಳ ಹಂಗು ಕಳೆದು ಹೋಯಿತು. ಲಿಂಗವನ್ನು ಅರಿದ ಮಾರ್ಗದಲ್ಲಿ ಅವು ಸಾಧನಗಳು. ಒಮ್ಮೆ ನಿಜದ ನಿಲವನ್ನು ಅರಿತ ಶರಣನು ಮರಳಿ ಅರಿವಿನ ಮರವೆಗೆ ಸಿಲುಕಲಾರನು.

ಹೀಗೆ ಅಲ್ಲಮನ ವಚನಗಳಲ್ಲಿ ಕಾಣುವ ಹುಡುಕಾಟ ಪ್ರಧಾನವಾಗಿ 'ಅರಿವಿಗೆ' ಅನುಭಾವ' ಕ್ಕೆ ಸಂಬಂಧಿಸಿದ್ದು. ಇದು ಭಕ್ತಿ ಪಂಥದ ದ್ವೈತಭಾವ ಹಾಗೂ ಸಾಕಾರ ಸ್ವರೂಪಗಳ ಅನುಭಾವ ನೆಲೆಯನ್ನು ನಿರಾಕರಿಸುತ್ತಾ ಅದ್ವೈತದ ನೆಲೆಯನ್ನು ಮುಂದಿಡುತ್ತದೆ. ಏಕೆಂದರೆ ದ್ವೈತಭಾವದ ಪ್ರಧಾನ ನೆಲೆಯಾದ ಸಂಬಂಧದ ಸ್ವರೂಪವನ್ನು ನಿರಾಕರಿಸುವುದು ಸ್ಪಷ್ಟವಾಗಿದೆ. ದ್ವೈತ ಸ್ವರೂಪದ ಭಕ್ತಿಯು ಆಳದಲ್ಲಿ ತಿರುಗಿ ಲೌಕಿಕ ನೆಲೆಗೆ ಸೇರಬಹುದಾದ ಆಶಯಗಳಿಗೆ ಹತ್ತಿರವಾಗುತ್ತದೆಯೆಂಬ ಭಾವವು ಅಲ್ಲಮನಲ್ಲಿ ಆತಂಕವಾಗಿ ಕಾಣಿಸಿಕೊಳ್ಳುತ್ತದೆ. ಇದೇ ರೀತಿ ಲಿಂಗ-ಶರಣನ ಸಂಬಂಧವನ್ನು ವಿವೇಚಿಸಿದ್ದಾನೆ.

'ಆನು ನೀನೆಂಬುದು ತಾನಿಲ್ಲ
ತಾನರಿದ ಬಳಿಕ ಮತ್ತೇನೂ ಇಲ್ಲ! ಇಲ್ಲ!
ಇಲ್ಲದ ಇಲ್ಲವೆಯೆಲ್ಲಿಂದ ಬಪ್ಪುದೊ?
ಅನುವರಿನರಿದು ತನುವ ಮರೆದ
ಭಾವರಹಿತ ಗುಹೇಶ್ವರ' [32]

ಈ ವಚನವು ತನುವ ಮರೆದು ಭಾವರಹಿತನಾಗುವ ಸ್ಥಿತಿಯನ್ನು ಮುಂದಿಡುತ್ತದೆ. 'ಕಾಯ' ಮತ್ತು 'ಭಾವ' ದೇಹ ಮತ್ತು ಮನಸ್ಸಿಗೆ ಸಂಬಂಧಿಸಿದ್ದಾಗಿದೆ. ದ್ವೈತದ ಮುಖ್ಯ ಸ್ವರೂಪವಾಗಿ ಕಾಣಿಸುವ 'ಆನು-ನೀನು' ಎಂಬ ಸಂಬಂಧದ ನಿರಾಕರಣೆ. ಅಜ್ಞಾನದ ನೆಲೆಯ ಕುರಿತು-

'ನೀ ನಾನೆಂಬ ಭಾವವಾರಿಂದಾಯಿತ್ತು ಹೇಳಾ?
ನೀನೆಂಬುದೇ ಅಜ್ಞಾನ!
ನಾನೆಂಬುದೇ ಮಾಯಾಧೀನ!
ಭಿನ್ನವಲ್ಲದೆ ಅರಿಯಬಲ್ಲಡೆ
ಆ ಸುಖವು ನಿಮಗರ್ಪಿತ ಕಾಣಾ ಗುಹೇಶ್ವರ'[33]

ಇಲ್ಲಿ ನೀನು ಮತ್ತು ನಾನು ಎಂಬ ಭಾವ ಉದಿಸಲು ಅಜ್ಞಾನದ ನೆಲೆಯೆ ಕಾರಣವೆಂಬುದು ಅಲ್ಲಮನ ನಿಲವು. ಆ ದ್ವೈತ ಭಾವವಿಲ್ಲದೆ ಜ್ಞಾನವನ್ನು, ಅನುಭಾವವನ್ನು ಹೊಂದುವ ಪರಿಯೇ ಅರಿವು. ಆ ಸುಖ ಗುಹೇಶ್ವರನಿಗೆ ಅರ್ಪಿತ ಎನ್ನುತ್ತಾನೆ.

ಶಿವನ ಸ್ವರೂಪದ ಕುರಿತ ಸಾಕಾರ ಮತ್ತು ನಿರಾಕಾರಗಳನ್ನು ಸಮನಾಗಿ ಕಾಣುವ ಅಲ್ಲಮನಿಗೆ ತನ್ನತನದ ಅರಿವನ್ನು ಉಂಟುಮಾಡುವಲ್ಲಿ ಇವು ನಿಸ್ಸಹಾಯಕವಾಗಿದೆ. ಜಗತ್ತಿನ ಪರಸ್ಪರ ಸಂಬಂಧವಿರುವ ಈ ಗುಣಗಳಿಂದ ಅನುಭಾವಿಯು ಸಾಧಿಸಬೇಕಾದ ಅರಿವಿನ ನೆಲೆಗಳು ಇಲ್ಲಿ ಸಾಧ್ಯವಾಗುವುದಿಲ್ಲ. ಇವೆರಡರ ಸಂಘರ್ಷದಲ್ಲಿ ಅನುಭಾವ ರೂಪುಗೊಳ್ಳದು ಎಂದಿದ್ದಾನೆ. ಅರಿವು, ಜ್ಞಾನಗಳು, ಕೇವಲ ಬೌದ್ಧಿಕ ತರ್ಕಗಳಿಗೆ ಗುರಿಯಾಗುವುದರ ಬಗ್ಗೆ ಅಲ್ಲಮನ ವಿರೋಧವಿದೆ. ಅರಿವನ್ನು

ಕುರಿತ ಅಲ್ಲಮನ ವಚನಗಳಲ್ಲಿ ಮುಖ್ಯವಾಗಿ ಎರಡು ಸ್ತರಗಳಿವೆ. ಒಂದನೆಯ ಸ್ತರದಲ್ಲಿ ಅರಿವು ಕೇವಲ ಲೌಕಿಕದ ಬುದ್ಧಿಗೆ ಸಂವಾದಿಯಾಗಿರುವುದು. ಆದ್ದರಿಂದಲೇ ಅರಿವಿನ ವಿರೋಧಿ ನೆಲೆ-ಮರೆವು ಕೂಡ ಇಲ್ಲಿ ಪ್ರಾಮುಖ್ಯತೆ ಪಡೆಯುತ್ತದೆ. ಲೌಕಿಕದ ನೆಲೆಯಲ್ಲಿ ಬಳಕೆಯಾಗುವ ಅರಿವಿನ ನೆಲೆಯನ್ನು ಅಲ್ಲಮ ತಿರಸ್ಕರಿಸುತ್ತಾನೆ. ಯಾಕೆಂದರೆ ಇಲ್ಲಿ ಅರಿವಿನ ಸ್ವರೂಪ ತಾತ್ಕಾಲಿಕವಾದ ಮರೆವು- ನೆನಪಿನ ಸಂಬಂಧದಲ್ಲಿದೆ. ಅಲ್ಲದೆ ಆಧ್ಯಾತ್ಮದ ಅನುಭಾವದ ಎತ್ತರ, ಆಳವನ್ನು ವ್ಯಾಪಿಸುವಲ್ಲಿ ಈ ಅರಿವು ನಿಷ್ಫಲವಾಗುತ್ತದೆ. ಇದೇ ನಿಲುವನ್ನು ವ್ಯಕ್ತಪಡಿಸುವ ವಚನವನ್ನು ಗಮನಿಸಬಹುದು.

ಮನದ ಮರವೆ ತನುವಿನಲ್ಲಿರಲು ಅದೆಂತೋ ಅರಿವು
ಎರಡು ಬೆಟ್ಟಕ್ಕೆ ಒಂದೆ ತಲೆಯೊಡ್ಡಿ ಧರಿಸಿದ ಬಳಿಕ ತಲೆ ಕಾಲಿಗಿಕ್ಕಿದ
ಬಳ್ಳಿಯೆಂತು ಹರಿವುದೋ ಗುಹೇಶ್ವರ
ನಿಮ್ಮ ಶರಣರು ಬಾರದ ಭವದಲ್ಲಿ ಬಂದ ಕಾರಣ ಸುಖಿಗಳಾದರಯ್ಯ'[34]

ಭವದ ಆಮಿಷದಲ್ಲಿ ಜೀವವನ್ನು ಒಡ್ಡುವಂತೆ ಮಾಡುವ ಮರೆವು, ಭವದಲ್ಲಿ ಸಿಲುಕಿರುವುದನ್ನು ಹೇಳುತ್ತದೆ. ಹಾಗೆಯೇ ಅದನ್ನು ಮೀರಲು ಬೇಕಾದ ಶರಣತ್ವವನ್ನು ಅಲ್ಲಮ ಇಲ್ಲಿ ಬಯಸುತ್ತಿದ್ದಾನೆ. ಲೌಕಿಕದ ಸಂದರ್ಭದಲ್ಲಿ ಅರಿವು ಅಹಂನ ಸಂಕೇತವಾಗಿರುವುದು ತನ್ನನ್ನು ತಾನು ಹಿರಿಯನೆಂದು, ಜ್ಞಾನಿಯೆಂದು ಕರೆಸಿಕೊಳ್ಳುವುದರ ನೆಲೆಯಾಗಿರುವುದನ್ನು ಅಲ್ಲಮ ಈ ರೀತಿ ಹೇಳಿದ್ದಾನೆ:

'ಅರಿಯದಂತಿರಲೊಲ್ಲದೆ ಅರಿದು ಕುರುಹಾದೆಯಲ್ಲಾ!
ಹಿರಿಯರೆಲ್ಲರು ನೆರೆದು
ನಿನ್ನ ಕಟ್ಟಿದರೆ, ಅಯ್ಯ ಉಪಚಾರಕ್ಕೋಸುಗ!
ಸಾವಿಂಗೆ ಸಂಗಡವಾದೆಯಲ್ಲ ಗುಹೇಶ್ವರ!' [35]

'ಅರಿವಿನ ಬಲದಿಂದ
ಕೆಲಬರು ಅರಿಯದವರ ಗೆಲಬೇಕೆಂದು
ಬರುಮಾತಿನ ಉಯ್ಯಲೆಯನೇರಿ
ಒದೆದು, ಒರಲಿ-ಕೆಡೆವ ದರಿದ್ರರು!
ಅರಿವು ತೋರದೆ ಇರಬೇಕು
ಕಾಯ ನಿರ್ಣಯ ನಿಃಪತಿಯೆಂಬಾತನು
ಸೋಂಕಿನ ಸೋಜಿಗವೆಂಬ ಪರಿಣತೆ ಫಲಿಸಬೇಕು.
ಅರಿವು ತೊರೆದು ಎರಡೆಂಬ ಭಿನ್ನವೇಷವ ತೊಟ್ಟು
ಡಂಬಕವ ನುಡಿದವೆಂಬ ಉದ್ದಂಡರ

ಕುರಿತ ಅಲ್ಲಮನ ವಚನಗಳಲ್ಲಿ ಮುಖ್ಯವಾಗಿ ಎರಡು ಸ್ತರಗಳಿವೆ. ಒಂದನೆಯ ಸ್ತರದಲ್ಲಿ ಅರಿವು ಕೇವಲ ಲೌಕಿಕದ ಬುದ್ಧಿಗೆ ಸಂವಾದಿಯಾಗಿರುವುದು. ಆದ್ದರಿಂದಲೇ ಅರಿವಿನ ವಿರೋಧಿ ನೆಲೆ-ಮರೆವು ಕೂಡ ಇಲ್ಲಿ ಪ್ರಾಮುಖ್ಯತೆ ಪಡೆಯುತ್ತದೆ. ಲೌಕಿಕದ ನೆಲೆಯಲ್ಲಿ ಬಳಕೆಯಾಗುವ ಅರಿವಿನ ನೆಲೆಯನ್ನು ಅಲ್ಲಮ ತಿರಸ್ಕರಿಸುತ್ತಾನೆ. ಯಾಕೆಂದರೆ ಇಲ್ಲಿ ಅರಿವಿನ ಸ್ವರೂಪ ತಾತ್ಕಾಲಿಕವಾದ ಮರೆವು- ನೆನಪಿನ ಸಂಬಂಧದಲ್ಲಿದೆ. ಅಲ್ಲದೆ ಆಧ್ಯಾತ್ಮದ ಅನುಭಾವದ ಎತ್ತರ, ಆಳವನ್ನು ವ್ಯಾಪಿಸುವಲ್ಲಿ ಈ ಅರಿವು ನಿಷ್ಫಲವಾಗುತ್ತದೆ. ಇದೇ ನಿಲುವನ್ನು ವ್ಯಕ್ತಪಡಿಸುವ ವಚನವನ್ನು ಗಮನಿಸಬಹುದು.

ಮನದ ಮರವೆ ತನುವಿನಲ್ಲಿರಲು ಅದೆಂತೋ ಅರಿವು
ಎರಡು ಬೆಟ್ಟಕ್ಕೆ ಒಂದೆ ತಲೆಯೊಡ್ಡಿ ಧರಿಸಿದ ಬಳಿಕ ತಲೆ ಕಾಲಿಗಿಕ್ಕಿದ
ಬಳ್ಳಿಯೆಂತು ಹರಿವುದೋ ಗುಹೇಶ್ವರ
ನಿಮ್ಮ ಶರಣರು ಬಾರದ ಭವದಲ್ಲಿ ಬಂದ ಕಾರಣ ಸುಖಿಗಳಾದರಯ್ಯ'[34]

ಭವದ ಆಮಿಷದಲ್ಲಿ ಜೀವವನ್ನು ಒಡ್ಡುವಂತೆ ಮಾಡುವ ಮರೆವು, ಭವದಲ್ಲಿ ಸಿಲುಕಿರುವುದನ್ನು ಹೇಳುತ್ತದೆ. ಹಾಗೆಯೇ ಅದನ್ನು ಮೀರಲು ಬೇಕಾದ ಶರಣತ್ವವನ್ನು ಅಲ್ಲಮ ಇಲ್ಲಿ ಬಯಸುತ್ತಿದ್ದಾನೆ. ಲೌಕಿಕದ ಸಂದರ್ಭದಲ್ಲಿ ಅರಿವು ಅಹಂನ ಸಂಕೇತವಾಗಿರುವುದು ತನ್ನನ್ನು ತಾನು ಹಿರಿಯನೆಂದು, ಜ್ಞಾನಿಯೆಂದು ಕರೆಸಿಕೊಳ್ಳುವುದರ ನೆಲೆಯಾಗಿರುವುದನ್ನು ಅಲ್ಲಮ ಈ ರೀತಿ ಹೇಳಿದ್ದಾನೆ:

'ಅರಿಯದಂತಿರಲೊಲ್ಲದೆ ಅರಿದು ಕುರುಹಾದೆಯಲ್ಲಾ!
ಹಿರಿಯರೆಲ್ಲರು ನೆರೆದು
ನಿನ್ನ ಕಟ್ಟಿದರೆ, ಅಯ್ಯ ಉಪಚಾರಕ್ಕೋಸುಗ!
ಸಾವಿಂಗೆ ಸಂಗಡವಾದೆಯಲ್ಲ ಗುಹೇಶ್ವರ!'[35]

'ಅರಿವಿನ ಬಲದಿಂದ
ಕೆಲಬರು ಅರಿಯದವರ ಗೆಲಬೇಕೆಂದು
ಬರುಮಾತಿನ ಉಯ್ಯಲೆಯನೇರಿ
ಒದೆದು, ಒರಲಿ-ಕೆಡೆವ ದರಿದ್ರರು!
ಅರಿವು ತೋರದೆ ಇರಬೇಕು
ಕಾಯ ನಿರ್ಣಯ ನಿಃಪತಿಯೆಂಬಾತನು
ಸೋಂಕಿನ ಸೋಜಿಗವೆಂಬ ಪರಿಣತೆ ಫಲಿಸಬೇಕು.
ಅರಿವು ತೋರೆದು ಎರಡೆಂಬ ಭಿನ್ನವೇಷವ ತೊಟ್ಟು
ಡಂಬಕವ ನುಡಿದೆವೆಂಬ ಉದ್ದಂಡರ

ಗುಹೇಶ್ವರ ಕಂಡಡೆ ಕನಲುವ'[36]

ಅರಿವನ್ನು ಹೊಂದುವ ಸ್ವರೂಪದ ವಿವೇಚನೆಯನ್ನು ಅಲ್ಲಮನ ಈ ವಚನಗಳಲ್ಲಿ ಕಾಣಬಹುದು. ಗುಹೇಶ್ವರನ ಅರಿವಿನ ಸಾಧ್ಯತೆಯನ್ನು ತೋರದೆ ಬರಿಯ ಕುರುಹಾಗಿ ಉಳಿದುಬಿಟ್ಟಿರುವುದು ಅದರ ನಶ್ವರತೆಗೆ ಕಾರಣವಾಗುತ್ತದೆ. ಹಾಗೆಯೇ ಅರಿವನ್ನು ಭೌತಿಕ ಜಗತ್ತಿನ ಸಾಮಗ್ರಿಯನ್ನಾಗಿ ಮಾಡಿಕೊಳ್ಳುವ ಇನ್ನೊಂದು ಪರಿಯನ್ನು ಇಲ್ಲಿ ಕಾಣಬಹುದು. ಎರಡು ಸನ್ನಿವೇಶದಲ್ಲಿಯೂ ಅರಿವು ಹೊಂದುವ ಲೌಕಿಕ ಆಯಾಮವನ್ನು ವಚನ ವಿವರಿಸುತ್ತದೆ. ಮುಂದಿನ ವಚನವು ಲೌಕಿಕದಲ್ಲಿ ಹೊಂದಿದ್ದೇವೆಂದು ಅರಿಯದವರ ಮೇಲೆ ನಡೆಸುವ ಪ್ರಭುತ್ವದ ನೆಲೆಗಳನ್ನು ವಿಶ್ಲೇಷಿಸುತ್ತದೆ. ಇಲ್ಲಿಯೂ ಅರಿವಿನ ನಾಶವಿದೆ. ಏಕೆಂದರೆ ಅದು ಲೌಕಿಕದ ಅಹಂನಿಂದ ಹೊಂದಿದ ಅರಿವು. ಇದು ಯಾವ ಲಾಭದಾಯಕ ನೆಲೆಗೂ ಏರಲು ಸಾಧ್ಯವಿಲ್ಲ. ಆದ್ದರಿಂದ ಅರಿವಿನ ನೆಲೆ ಯಾವುದೇ ಇರಲಿ ಲೌಕಿಕದ ಗಡಿಗಳನ್ನು ದಾಟಬೇಕು. ತನುವಿನ ವ್ಯಾಮೋಹವನ್ನು ಮೀರಿದ ನೆಲೆಗಳಲ್ಲಿ ಅರಿವು ಸಫಲತೆಯನ್ನು ಸಾಧಿಸುತ್ತದೆ ಎಂಬದು ಅಲ್ಲಮನು ನಂಬಿದ ವಿಚಾರವಾಗಿದೆ. ಹೀಗೆ ಲೌಕಿಕದ ಮಿತಿಗಳನ್ನು ಮೀರಿದ ನೆಲೆಯಲ್ಲಿ ಅರಿವಿನ ಸ್ವರೂಪಗಳನ್ನು ಬೆಳೆಸಿಕೊಳ್ಳುತ್ತ ಹೋಗುವುದು ಅಲ್ಲಮನು ಒಪ್ಪುವ ಅರಿವಿನ ವ್ಯಾಖ್ಯೆಯಾಗಿದೆ. ಈ ಕಾರಣದಿಂದಲೇ ಅಲ್ಲಮನು ಆಚರಣೆಗೆ ಮಾತ್ರ ಒಳಗಾಗಿಬಿಡುವ ಎಲ್ಲಾ ಧಾರ್ಮಿಕ ಕ್ರಿಯೆಗಳನ್ನು ನಿರಾಕರಿಸುತ್ತಾನೆ. ಈ ಹಿನ್ನೆಲೆಯಲ್ಲಿ ಅರಿವು –ಅನುಭಾವದ ಸ್ವರೂಪ ಗಾಢವಾಗಿ ರೂಪುಗೊಳ್ಳಬೇಕಾದ ಇಂಗಿತವನ್ನು ಮುಂದಿಡುತ್ತಾನೆ. ಲೌಕಿಕ ಪ್ರಪಂಚವನ್ನು ಕುರಿತಾಗಿ ಬಂದಿರುವ ಅಲ್ಲಮನ ವಚನಗಳು ಈ ಪ್ರಪಂಚವು ಜ್ಞಾನದ ಬೆಳಕನ್ನು ನಿರಾಕರಿಸುತ್ತದೆ ಎಂಬುದನ್ನು ವಿವರಿಸುತ್ತದೆ. ಲೌಕಿಕದ ಭಾವೋದ್ವೇಗ ಆತಂಕಗಳ ಬದಲಿಗೆ ಅದನ್ನು ಮೀರಿದ ವಲಯದಲ್ಲಿ ಜ್ಞಾನ, ಅರಿವಿನ ಬೆಳವಣಿಗೆಯನ್ನು ಅಲ್ಲಮನು ಬಯಸುವುದು ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಅಲ್ಲಮ ಹೇಳುವಂತೆ 'ಗುಹೇಶ್ವರನ ನಿಲುವು ವಸುಧೆಯಾಕೃತಿ ನುಂಗಿತ್ತು' ಅಂದರೆ ಪ್ರಾಪಂಚಿಕ ನೆಲೆಯ ವಾತಾವರಣದ ಸ್ವರೂಪವು ಜ್ಞಾನದ ಹುಡುಕಾಟದಲ್ಲಿ ತೊಡಗಬೇಕಾದ ಅನಿವಾರ್ಯತೆಯನ್ನು ಮುಂದಿಡುತ್ತದೆ.

ಅಲ್ಲಮಪ್ರಭು ಮುಕ್ತಾಯಕ್ಕಳ ಜತೆ ನಡೆಸುವ ಅರಿವು, ಇರವು, ಮರೆವು ಮತ್ತು ಕುರುಹುಗಳ ಬಗೆಗಿನ ಸಂವಾದದ ಜಿಜ್ಞಾಸೆಯೂ ಅರಿವಿನ ಕುರಿತ ಅಲ್ಲಮನ ವಿಶಿಷ್ಟ ದೃಷ್ಟಿಕೋನವನ್ನು ತೆರೆದಿಡುತ್ತದೆ. ಅರಿವು ಹೊರಗಿಲ್ಲ ಅದು ನಮ್ಮೊಳಗೆ ಇರುವ ಕಂಡುಕೊಳ್ಳುವ ತಿಳಿವಿನ ನೆಲೆ. ಅರಿವಿನ ಸ್ವೀಕರಣ, ಕುರುಹು ಇಲ್ಲವಾಗುವ ಪರಿ. ಅಲ್ಲಮ ಇನ್ನೊಂದೆಡೆಯಲ್ಲಿ ಹೇಳಿದ ಹಾಗೆ 'ಅರಿವೇ ಗುರು' ಎಂಬುದು ಸಾಕ್ಷಾತ್ಕಾರದ ಹಾದಿಯೇ. ಅರಿವನ್ನು ತನ್ನಲ್ಲೇ ಸ್ವಯವಾದ ಮೇಲೆ ಅಲ್ಲಿ ಕುರುಹಿಗೆ ಸ್ಥಾನವಿಲ್ಲ. ಯಾವಾಗ ಅರಿವು ಸ್ವಯವಾಯಿತೋ ಆ ಕ್ಷಣವೇ ದೇಹಭಾವ ಬಿದ್ದುಹೋಗುತ್ತದೆ. ಅದು ಇದೇ ಎಂದುಕೊಂಡರೆ ಕೇವಲ ಭ್ರಾಂತಿಯಾಗುತ್ತದೆ. ಅರಿವು ಸ್ವಯವಾದವನು ಪರಿಪೂರ್ಣ ಸುಜ್ಞಾನಿಯಾಗುತ್ತಾನೆ. ದೇಹ–ಜೀವ

ಭಾವದಲ್ಲೆ ತೊಳಲಾಡುವವರಿಗೆ ಅರಿವು ತಲೆದೋರದು. ಏಕೆಂದರೆ ಅದೊಂದು ಉನ್ನತ ಸ್ಥಿತಿ. ಅರಿವಿನ ವ್ಯಾಪ್ತಿ, ವಿಸ್ತಾರ ಮಾತು ವರ್ಣನೆಗೆ ಮೀರಿದ್ದು. ಕುರುಹು, ಮರೆವು ಒಡಲು ಹಾಗೂ ನುಡಿಯ ಆಚೆಗಿರುವ ನಮ್ಮ 'ಅನುಭವ'ಕ್ಕೆ ಮಾತ್ರ ದಕ್ಕುವಂಥದ್ದು. ಅರಿವು ತಲೆದೋರುವ ಪ್ರಕ್ರಿಯೆಯಲ್ಲಿ, ಅಲ್ಲಮ ಅರಿವಿಗೂ ಅರಿವಿನೊಳಗಿನ ಅರಿವಿಗೂ ಅಂತರವುಂಟೆಂಬ ರಹಸ್ಯವನ್ನು ಮುಂದಿಡುತ್ತಾನೆ. ಈ ಅರಿವು ಅಂತಿಮವಾಗಿ ಪ್ರತಿಯೊಬ್ಬರು ತಮ್ಮೊಳಗನ್ನು ತಾವೇ ತಿಳಿದು ನೋಡುವುದೇ ಆಗಿದೆ. ತನು ಕಾಣದಾಗಿ, ಮನ ಘನತರವಾಗಿ ಪರಿಣಮಿಸಿ, ಅಜ್ಞಾನವು ಜ್ಞಾನದ ಬಲದಲ್ಲಿ ನಾಶವಾಗಿ, ಅಂಗಭಾವಕ್ಕೆ ಪ್ರತಿಯಾಗಿ ಅಲ್ಲಿ ಲಿಂಗಭಾವವು ಬಂದರೆ ಅಲ್ಲಿ 'ಅರಿವು' ತಲೆದೋರುತ್ತದೆ ಎಂದು ಅರಿವು ಹೊಂದುವ ಪೂರ್ವಾವಸ್ಥೆಯನ್ನು ವಚನಗಳ ಮೂಲಕ ಮುಂದಿಡುತ್ತಾನೆ. ಮರೆಹಿನ ಲೋಕದಲ್ಲಿ ಅಡಗಿರುವ ಅರಿವು 'ಅನುಭವಕ್ಕೆ' ಸಿಗಬೇಕಾದರೆ ಮರೆವು ನಷ್ಟವಾಗಿ, ಅರಿವು ತಿಳಿಯಬೇಕು.

ಅರಿಯುವ ಪ್ರಜ್ಞೆ ಇಲ್ಲದಿದ್ದಾಗ ಇರುವ ಸ್ಥಿತಿ ಅಗಮ್ಯ. ನಾನೆಂಬುದು ಪ್ರತ್ಯೇಕ, ವಿಶಿಷ್ಟಜೀವಿ ಎಂಬ ಪ್ರಜ್ಞೆಯಿಂದಲೇ ಅಲ್ಲಮನಲ್ಲಿ ಅರಿವು ಮೂಡುತ್ತದೆ. ಅರಿವಿನ ಬಗ್ಗೆ ಭಾಷೆಯ ಹಂಗಿಲ್ಲದ ಶುದ್ಧಸಂವಾದದ ನೆಲೆಯನ್ನು ಮುಂದಿಡುತ್ತಾನೆ. ನಾನು ನಾನೇ ಎಂಬ ಅರಿವು. ಅರಿವು ಎಂದಿದ್ದರೂ ಅವ್ಯಕ್ತವೇ. ಅದಕ್ಕೆ ಕಾರಣವಾದ ವಿಚಾರ ಮಾತ್ರ ಗೋಚರವಾಗುವಂಥದ್ದು. ಅಲ್ಲಮನ ಶೋಧ ಇರುವುದು ವಿಚಾರದ ಮೂಲವಾದ ಅರಿವಿನ ಕುರಿತು. ಅಲ್ಲಮನ ಪ್ರಕಾರ ಆಚಾರದಲ್ಲಿ ದ್ವಂದ್ವ ಇದ್ದರೂ ಅರಿವಿನಲ್ಲಿ ಅದು ಕಾಣದು. ಅರಿವಿನ ಅನುಭವಕ್ಕೆ ಯಾವ ಪ್ರಮಾಣ ಸಾಕ್ಷಿಗಳು ಇಲ್ಲ. ಅದನ್ನು ಇನ್ನೊಬ್ಬರಿಗೆ ದಾಟಿಸಲೂ ಸಾಧ್ಯವಿಲ್ಲ. ಅದಕ್ಕಾಗಿಯೇ 'ಇದು ಕಾರಣ ಲೋಕಕ್ಕೆ ಅರುಹದೆ ನಾನರಿದೆನು ಗುಹೇಶ್ವರ'. ಅರಿವ ಶರಣಂಗೆ ಆಚಾರವಿಲ್ಲ ಎಂದಿದ್ದಾನೆ. ಹೀಗೆ ಅಲ್ಲಮನ ಅರಿವಿನ ಪರಿ ಅಮೂರ್ತ ನೆಲೆಯದ್ದು. ಅರಿವು ಅಂತರಂಗಕ್ಕೆ ಸಂಬಂಧಿಸಿದ ವಿಚಾರವಾಗಿರುವುದರಿಂದಲೇ ಅಲ್ಲಿ ಅಂತರಂಗ ಬಹಿರಂಗಗಳ ನಡುವಿನ ವ್ಯತ್ಯಾಸ ಕಾಣುವುದಿಲ್ಲ. ಆದ್ದರಿಂದಲೇ ಅಲ್ಲಮ ಅರಿವನ್ನು ಅಭಿವ್ಯಕ್ತಿಸುವಲ್ಲಿ ಭಾಷೆಯ ಸಾಮರ್ಥ್ಯದ ಅಪನಂಬಿಕೆಯನ್ನು ವ್ಯಕ್ತಪಡಿಸುತ್ತಾನೆ. 'ಅರಿವಿನ ಕುರುಹು ಮುಂದಿಲ್ಲ' 'ಅರಿವು ನೆಲೆಗೊಂಡಲ್ಲಿ ಕುರುಹಿಂಗೆ ಹೊರಗೆ' ಮೊದಲಾದ ಮಾತುಗಳಲ್ಲಿ ಸಂಕೇತಗಳನ್ನು ಒಡೆದರೆ ಮಾತ್ರ ಅರಿವು ಸಾಧಿತವಾಗುತ್ತದೆ ಎನ್ನಲಾಗಿದೆ.

ಅರಿವು ಸದಾ ಕಾಲದಲ್ಲಿ ಇರುವ ಇರುವಿಕೆ. ಅದು ಕೇವಲ ತಿಳುವಳಿಕೆಯಲ್ಲ, ಬುದ್ಧಿಯಲ್ಲಿ ನೆಲೆಗೊಳ್ಳವಂಥದ್ದು. ತಿಳುವಳಿಕೆಯಲ್ಲಿ ತಿಳಿಯಲಾಗಿದ್ದರ ಕೊರತೆ ಇದ್ದರೆ ಅರಿವು ಅದನ್ನು ಮೀರಿ ಪರಿಪೂರ್ಣವಾದ ನೆಲ. ಅಂತರಂಗ –ಬಹಿರಂಗದ ವ್ಯತ್ಯಾಸವನ್ನು ಕಳೆದುಕೊಂಡ ಅದು ಕೇವಲ ಮಾಹಿತಿ ತಿಳುವಳಿಕೆಯ ಮಟ್ಟಕ್ಕೆ ಸೀಮಿತವಾಗದ ಅತೀತ ಜ್ಞಾನ. ಒಂದರ್ಥದಲ್ಲಿ ಜ್ಞಾನ ಎಂಬುದನ್ನು ಅಲ್ಲಮ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಜ್ಞಾನ ಅಹಂಗೆ ಕಾರಣವಾಗುತ್ತದೆ. ಆದ್ದರಿಂದ ಒಂದು ಬಗೆಯ

ಎಚ್ಚರವೂ ಸದಾಕಾಲ ಜತೆಗಿರುತ್ತದೆ. ಅರಿವಿಗೆ ಕುರುಹಿನ ಯಾವ ಸಂಬಂಧವೂ ಇಲ್ಲ. ಹಾಗೆಯೇ ಅರಿಯಬೇಕಾಗಿರುವ ಸಂಗತಿ ಜೀವಿಯ ಆತ್ಮಕ್ಕಿಂತ ಬೇರೆಡೆಯಲ್ಲಿ ಇಲ್ಲ. ಆ ಮೂಲಕವೇ ಅದು ವಿಶಿಷ್ಟವಾದದ್ದು. ಲೋಕ ವಿಪರೀತವಾಗಿರುವುದು ಅರಿವಿನಲ್ಲಿ ಎನ್ನುವುದಕ್ಕೆ ಸಂಶಯವಿಲ್ಲ, ಅದೊಂದು ಕ್ರಿಯೆಯಲ್ಲಿ ನೆನಪು–ಮರೆವುಗಳಲ್ಲ. ಈ ಎಲ್ಲ ಅಪೇಕ್ಷೆಗಳು ದೂರವಾದಾಗ ಸೃಷ್ಟಿಯೊಳಗೆ ಸೇರಿರುವ ಅರಿವನ್ನು ನಮ್ಮೊಳಗೆ ಕಂಡುಕೊಳ್ಳಬಹುದು. ಅರಿವು ಆದ ಮೇಲೆ ಬದಲಾವಣೆ ಕಾಣಿಸಿದರೆ ಅದು ವ್ಯಕ್ತದೊಳಗೆ ಮಾತ್ರ, ಪ್ರಾಪಂಚಿಕದಲ್ಲಿ ಅದು ಇಲ್ಲ. ದ್ವಂದ್ವಗಳನ್ನು ಮೀರಿ ತಾನು ತಾನೇ ಆಗುವುದೇ ಅಲ್ಲಮನ ಅರಿವಿನ ವ್ಯಾಖ್ಯೆಯಾಗಿದೆ.

ಹೀಗೆ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಭಕ್ತಿ ಪಂಥದ ಅಂಗವಾಗಿ ಅರಿವಿನ ಮಾರ್ಗಗಳನ್ನು ಶೋಧಿಸಿ ಅದರ ವಿಸ್ತಾರವನ್ನು ಜಗತ್ತಿಗೆ ತೋರಿಸಿಕೊಟ್ಟವನೇ ಆದಿಮ ಜಂಗಮಸ್ವರೂಪಿ ಅಲ್ಲಮಪ್ರಭು. 'ಅರಿವೇ ಗುರು' ಎಂಬ ನಿಲುವಿನಿಂದ ಹೊರಟ ಇವನು 'ಅರಿವಿ'ನ ಇರುವಿಕೆಯನ್ನು ಗ್ರಾಹ್ಯಗೊಳಿಸಿದನು.

೫.೨ ಅಲ್ಲಮನ 'ಜ್ಞಾನ' ಸಂಬಂಧಿ ವಿವೇಚನೆ ಮತ್ತು 'ಅರಿವು'

ವೀರಶೈವ ಪರಂಪರೆಯಲ್ಲಿ ತನ್ನದೇ ಆದ ಅರಿವಿನ ಹಾದಿಯಲ್ಲಿ ನಡೆದು ಬಂದ ಅಲ್ಲಮನಿಗೆ ಅರಿವು, ಜ್ಞಾನಗಳು ಕೇವಲ ಬೌದ್ಧಿಕ ತರ್ಕಗಳಿಗೆ ಗುರಿಯಾಗುವ ವಿಚಾರಗಳಲ್ಲ. ಈತನಿಗೆ ಯಾವ ಸ್ಥಿತಿಯೂ ಶಾಶ್ವತವಲ್ಲ. ಒಂದರೊಳಗೊಂದು ಬೆರೆತು ಬದಲಾಗುತ್ತಲೇ ಇರುವುದೇ ಸಹಜತೆ. ಅಲ್ಲಮನ ವಚನಗಳ ಏಕೈಕ ಉದ್ದೇಶವೇ ಗುಹೇಶ್ವರನನ್ನು ಅರಿಯುವುದು. ಅನುಭಾವೀ ಸಾಹಿತ್ಯ ಪರಂಪರೆಯ ಪ್ರತಿನಿಧಿಯಾಗಿ ಕಾಣಿಸುವ ಅಲ್ಲಮನ ಚಿಂತನೆಗಳೆಲ್ಲವೂ ತನ್ನ ಸಮಕಾಲೀನ ಚಿಂತಕರಿಂದ ಭಿನ್ನವಾಗಿ ಅನುಭವಕ್ಕೆ ಬರುತ್ತದೆ. ಅಲ್ಲಮನ ಜ್ಞಾನ ಸಂಬಂಧಿ ವಿವೇಚನೆ ಮತ್ತು ಅರಿವಿನ ಚಿಂತನೆಯನ್ನು ಆತನ ವಚನಗಳ ಮೂಲಕವೇ ಪರಿಭಾವಿಸಿಕೊಳ್ಳಬಹುದು. ಜ್ಞಾನವಿರುವಲ್ಲಿ ಮರವಿಲ್ಲ. ಮರೆವಿರುವಲ್ಲಿ ಜ್ಞಾನವಿಲ್ಲ. ಜ್ಞಾನರೂಪಿ ಗುಹೇಶ್ವರನನ್ನು ಅರಿಯುವುದೇ ಅಲ್ಲಮನ ಚಿಂತನೆಗಳ ಹಿಂದಣ ತುಡಿತವಾಗಿದೆ.

ಪ್ರಪಂಚದ ಅಪೂರ್ಣಜ್ಞಾನದಲ್ಲಿ ತೊಳಲಾಡುವವನಿಗೆ ವಿವೇಕದ ಜ್ಞಾನದೃಷ್ಟಿಯಿಂದ ಶಿವನೇ ನೀನೆಂಬ ಆತ್ಮಜ್ಞಾನ ಉದಯಿಸಿದಾಗ ಪೂರ್ಣಜ್ಞಾನೋದಯವಾಗುವುದು. ಆ ಮೂಲಕ ಜ್ಞಾನವನ್ನು ಮರೆಮಾಚಿದ ಅಜ್ಞಾನವು ಗುಹೇಶ್ವರನಲ್ಲಿ ಲಯವಾಗುತ್ತದೆ. ಶರಣನಲ್ಲಿ ಜ್ಞಾನದೃಷ್ಟಿ ಉದಯಿಸಲು ಬ್ರಹ್ಮಸೃಷ್ಟಿಯ ಪಸರವೆಲ್ಲ ಮಿಥ್ಯಾ ಜ್ಞಾನವಾಯಿತು. ವಿವೇಕವೆಂಬ ವೃಕ್ಷವು ಬೆಳೆದು ಪರಿಪೂರ್ಣ ಜ್ಞಾನದಲ್ಲಿ ಲೀನವಾಯಿತು.

'ಅಜ್ಞಾನಿಯಾದವಂಗೆ ಅರಿವು ತಾನೆಲ್ಲಿಯದೋ?
ಸುಜ್ಞಾನಿಯಾದವಂಗೆ ಮರಹು ತಾನೆಲ್ಲಿಯದೋ?

ನಾನರಿದೆನೆಂಬಾತ ಇದಿರ ಕೇಳಲುಂಟೇ?

ಭ್ರಾಂತಿನ ಭ್ರಮೆಯೊಳಗೆ ಬಳಲುತ್ತಿರಲು

ಮಾತಿನ ಮಾತಿನೊಳಗೆ ಅರಿವೆಂಬುದುಂಟೆ?

....' [37]

ಇಲ್ಲಿ ಜ್ಞಾನರೂಪಿಯಾದ ಗುಹೇಶ್ವರನ ಸ್ವರೂಪವನ್ನು ವಿವರಿಸಲಾಗಿದೆ. ಅಜ್ಞಾನಿಯಾದವನಿಗೆ ಅರಿವು ಇರುವುದಿಲ್ಲ. ಜ್ಞಾನಿಯಾದವನಿಗೆ ಮರಹು ಇರುವುದಿಲ್ಲ. ನಾನು ಅರಿತಿದ್ದೇನೆ ಎಂಬುವವನನ್ನು ಏನೂ ಕೇಳಲಾಗದು. ಭ್ರಾಂತಿಯ ಭ್ರಮೆಯಲ್ಲಿ ಬಳಲುವ ಮಾತಿಗೆ ಸಿಗಲಾರ. ಲಿಂಗದ ಬೆಳಕಿನಲ್ಲಿ ಜನಿಸಿದ ಶರಣರು ಜ್ಞಾನರೂಪಿಗಳೇ ಆಗಿದ್ದಾರೆ ಎಂದಿದ್ದಾನೆ. ಪರಮಶಾಂತದ ಚಿತ್ತದಲ್ಲಿ ಶಿವತತ್ತ್ವವೆಂಬ ಅರಿವಿನ ಕುರುಹು ಲಕ್ಷ್ಯಕ್ಕೆ ಬರಲು ಅಜ್ಞಾನವು ದೂರವಾಗಿ ಜ್ಞಾನವು ನೆಲೆಗೊಳ್ಳುವುದು. ಭವಸಾಗರದಲ್ಲಿ ಕರಣೇಂದ್ರಿಯಗಳ ವಶಕ್ಕೆ ಸಿಕ್ಕು, ಬರಿಯ ಅರಿವಿನ ಜ್ಞಾನಿಗಳು, ನಿಜದ ನೆಲೆಯನ್ನರಿಯದೆ ವೃಥಾ ಅಹಂಕಾರದಿಂದ ಮರೆತು ಹೊಲಬುಗೆಟ್ಟು ನಡೆಯುತ್ತಿರುವುದುನ್ನು ವಿಡಂಬಿಸಿದ್ದಾನೆ. ಕಾಯವನ್ನು ಹೊಂದಿದ ಜೀವವು, ಅಹಂಕಾರ ಮಮಕಾರಗಳಿಗೆ ಸಿಲುಕಿ ವ್ಯರ್ಥ ಬದುಕನ್ನು ನಡೆಸುತ್ತಿರುವುದನ್ನು ಹೇಳುತ್ತಾನೆ. ಆ ಜೀವನಿಗೆ ಜ್ಞಾತೃ, ಜ್ಞಾನ, ಜ್ಞೇಯಗಳ ಸೋಪಾನ ಮುಟ್ಟಲು ಕಾಯದ ಮೋಹ ಮಮಕಾರಗಳು ನಾಶವಾದವು. ಹೀಗೆ ಅಲ್ಲಮ ಜ್ಞಾನದ ಬಲದಿಂದ ಅಜ್ಞಾನದ ಕೇಡನ್ನು ಪ್ರತಿಪಾದಿಸುತ್ತಾನೆ. ಜ್ಞಾನಮಾರ್ಗವೇ ಸಾಂಸಾರಿಕ ಭವ ಬಂಧನದಿಂದ ಜೀವಿಯನ್ನು ಮುಕ್ತನನ್ನಾಗಿಸುತ್ತದೆ ಎಂದಿದ್ದಾನೆ.

'ನಿಮ್ಮಲ್ಲಿ ನೀವು ತಿಳಿದು ನೋಡಿದರೆ

ಅನ್ಯವಿಲ್ಲ ಕಾಣಿರಣ್ಣ

ಅರಿವು ನಿಮ್ಮಲ್ಲಿಯೇ ತದ್ಗತವಾಗಿದೆ

ಅನ್ಯಭಾವವ ನೆನೆಯದೆ

ತನ್ನೊಳಗೆ ತಾನೆಚ್ಚರಬಲ್ಲಡೆ

ತನ್ನಲ್ಲಿಯೇ ತನ್ಮಯವು ಗುಹೇಶ್ವರ ಲಿಂಗವು' [38]

ಪ್ರತಿಯೊಂದು ಜೀವಿಯೊಳಗೂ ಆತ್ಮರೂಪಿಯಾದ ಲಿಂಗವಿದೆ. ಜೀವನು ಅದರ ಇರವನ್ನು ತಿಳಿದರೆ ಜಾಗೃತ ಸ್ಥಿತಿ ಏರ್ಪಡುತ್ತದೆ. ಅರಿವೆಂಬುದು, ಜ್ಞಾನವೆಂಬುದು ನಮ್ಮೊಳಗಳನ್ನು ನಾವು ಅರಿಯುವ ಪರಿಯೊಳಗೆ ಅಡಗಿದೆ. ಅದರ ಹೊರತಾಗಿ ಅನ್ಯ ಜ್ಞಾನವಿಲ್ಲ. ಅದೇ ಗುಹೇಶ್ವರನಲ್ಲಿ ತನ್ಮಯನಾಗುವ ಪರಿಪೂರ್ಣತೆಯ ಅರಿವು ಎನ್ನುತ್ತಾನೆ. ಅಂತರಂಗದಲ್ಲಿ ಜ್ಞಾನವೆಂಬ ಬೆಳಗು ಪ್ರಸರಿಸಲು ಅಜ್ಞಾನದ ಕತ್ತಲು ಹರಿದು ಜೀವನು ಅರಿವಿನ ದೃಢಭಾವವನ್ನು ಹೊಂದುವನು. ಆ ಮೂಲಕ ಜೀವನು

ಕೃತಾರ್ಥನಾಗುವನು. ಜ್ಞಾನರತ್ನವನ್ನು ತನ್ನದಾಗಿಸಿಕೊಂಡಾಗ ತನ್ನೊಳಗಿನ ಪಶುತ್ವ ನಾಶವಾಗಿ ಜ್ಞಾನವೊಂದೇ ಅಂತಿಮ ಸ್ಥಾಯಿಯಾಗಿ ಉಳಿಯಿತು. ಆಗ ಮಾತ್ರ ಲಿಂಗವು ಕರಸ್ಥಲವ ಸೇರಿ ಆತ್ಮಜ್ಞಾನ ನೆಲೆಗೊಂಡಿತು ಎನ್ನುತ್ತಾನೆ. ಅಲ್ಲಮ ನಿಜವಾದ ಮುಕ್ತಿ ಮತ್ತು ಜ್ಞಾನಗಳನ್ನು ಗಳಿಸುವ ರೀತಿಯನ್ನು ಕುರಿತು ಹೇಳುತ್ತಾ ತಮ್ಮನ್ನು ತಾವರಿಯದೇ ಸತ್ತು ಹೋದವರು ಹೇಳಿದ ಮಾರ್ಗದಲ್ಲಿ ನಡೆದರೆ ಮುಕ್ತಿ ಎಂತು ಸಾಧ್ಯ? ಮುಕ್ತಿ ಮತ್ತು ಜ್ಞಾನದ ಮಾರ್ಗವೆಂದರೆ ಅಂತರಾತ್ಮವನ್ನು ಅರಿಯುವುದು. ಅಜ್ಞಾನದ ಮುಖದಲ್ಲಿ ನವಲಿಂಗ ಪ್ರಯುಕ್ತವಾದ ಜ್ಞಾನರತ್ನ ಅಡಗಿತ್ತು. ಅರಿವಿನ ಮುಖದಲ್ಲಿ ವಿವೇಕದ ವೃಕ್ಷನೆಲೆಸಿ ಆ ಲಿಂಗಜ್ಞಾನರತ್ನವನ್ನು ಅರಿಯುವ ಮೂಲಕ ಆತ್ಮಜ್ಞಾನ ಹೊಂದಿ ಲಿಂಗ ಅನುಪಮ ಸುಖಿಯಾಯಿತು ಎನ್ನುತ್ತಾನೆ.

'ಹೋಹ ಬಟ್ಟೆಯಲೊಂದು ಮಾಯೆಯಿದ್ದುದ ಕಂಡೆ, ಠಾಣಾಂತರ ಹೇಳಿತ್ತು, ಠಾಣಾಂತರ ಹೇಳಿತ್ತು, ಅಲ್ಲಲ್ಲಿಗೆ ಅಲ್ಲಲ್ಲಿಗೆ, ಗುಹೇಶ್ವರನ ಕರಣಂಗಗಳು ಕುತಾಪಿಗಳು' [39]

ಜೀವನನ್ನು ಮೋಕ್ಷಮಾರ್ಗದಲ್ಲಿ ಮಿಥ್ಯಾಜ್ಞಾನವು ಮಾಯಾಸ್ವರೂಪಿಯಾಗಿ ಕಾಡುತ್ತದೆ. ಆ ಮಾಯೆಯ್ನು ಮುಂದುಗೊಂಡಿರುವ ಕಾರಣ ಸ್ಥೂಲ-ಸೂಕ್ಷ್ಮ ಕಾರಣವೆಂಬ ತನುತ್ರಯಗಳಲ್ಲಿ ಜ್ಞಾತೃ-ಜ್ಞಾನ ಜ್ಞೇಯವೆಂಬ ಮೂರು ಕರಣಂಗಳಾದವು. ಇಂತಹ ಲಿಂಗತ್ರಯಗಳಿಗೆ ಲಿಂಗತ್ರಯವನ್ನು ಸಂಬಂಧಿಸಲು ಸವಾಂಗವೂ ಲಿಂಗವಾಗಿ ಸಕಲ ಕರಣಗಳೂ ಲಿಂಗಕರಣಗಳಾದವು. ತನುವಿನ ಮೇಲೆ ಲಿಂಗ ನೆಲೆಗೊಂಡು ಸರ್ವಾಂಗದಲ್ಲಿ ಲಿಂಗವು ತುಂಬಲು ಜ್ಞಾನವಿಕಾಸವಾಗಿ ಆ ಪರಿಪೂರ್ಣ ಜ್ಞಾನವು ಆತ್ಮ ಪರಮಾತ್ಮಗಳೊಳಗು ಅಖಂಡ ಪರಿಪೂರ್ಣವಾಯಿತ್ತು. ಆ ಪರಿಪೂರ್ಣ ಜ್ಞಾನವು ಮಹಾಲಿಂಗವನ್ನು ಅವಗ್ರಹಿಸಿ ಅರಿವಿನಲ್ಲಿ ನೆಲೆಯಾಯಿತು.

ಕಾಯದ ಮೇಲೆ ಮುಸುಕಿರುವ ಅಜ್ಞಾನ ಕಾಳಿಕೆಯು ಸನ್ನಿವೇಶ, ಸುಜ್ಞಾನ ಬೋಧೆಯ ಮೂಲಕ ಕರಗಿಸಿ ನಿರ್ಮಲವಾಯಿತು. ಅಲ್ಲಿ ಜ್ಞಾನರತ್ನ ಉದಯಿಸಿ, ಜ್ಞಾನರತ್ನವನ್ನು ಅರಿದೆವೆಂಬರನ್ನು ತಲೆಕೆಳಗು ಮಾಡಿಸಿತು. ಬಾಹ್ಯದ ಕುರುಹ ಮರೆದಾತಂಗಲ್ಲದೆ ನಿಜತತ್ತ್ವ ಇತರರಿಗೆ ಕಾಣಲಾರದು. ಅಜ್ಞಾನವೆಂಬ ಮಂಜು ಕವಿದಿರಲು ಅಲ್ಲಿ ಶಿವಪಥದ ಅರಿವು ಮೂಡಲು ಸಾಧ್ಯವಿಲ್ಲ. ಮನೋವಿಕಾರ ಅಳಿದಾಗ ಮಾತ್ರ ನಿರ್ವಿಕಾರ ಜ್ಞಾನ ಅಳವಡಲು ಸಾಧ್ಯ.

"ತಲೆಯಿಲ್ಲದಟ್ಟೆ ಜಗವ ನುಂಗಿತ್ತು ಅಟ್ಟೆಯಿಲ್ಲದೆ ತಲೆ ಆಕಾಶವ ನುಂಗಿತ್ತು. ಅಟ್ಟೆ ಬೇರೆ ತಲೆ ಬೇರಾದಡೆ ಮನಸಂಚಲಿಸುತ್ತಿದ್ದಿತು. ಅಟ್ಟೆಯನೂ ತಲೆಯನೂ ಬಯಲು ನುಂಗಿದರೆ ಆನು ನುಂಗಿದೆನು ಗುಹೇಶ್ವರನಿಲ್ಲದಂತೆ" [40]

ಶಿವಜ್ಞಾನವಿಲ್ಲದ ಅಜ್ಞಾನವು ಲೋಕವನ್ನೆಲ್ಲ ನುಂಗಿತು. ಅಜ್ಞಾನವಳಿದು ಶಿವಜ್ಞಾನವು ಆತ್ಮನನ್ನು ಅವಗ್ರಹಿಸಲು ಅಲ್ಲಿ ಮನಸ್ಸು ನಿಶ್ಚಲವಾಯಿತು. ಶಿವತತ್ತ್ವದ ಸ್ವರೂಪವನ್ನು ಅರಿಯಲು ಅಜ್ಞಾನ, ಸುಜ್ಞಾನಗಳೆರಡು ಅರಿವಿನೊಳಗೆ ಲೀನವಾಯಿತು.

'ಅರಿಯಬಲ್ಲವರಿಲ್ಲ
ಪಾತಾಳದಿಂದತ್ತತ್ತ ಮಾತ ಬಲ್ಲವರಿಲ್ಲ
ಗಗನದಿಂದ ಮೇಲೆ ಅನುಭಾವ ತಾನಿಲ್ಲ
ಒಳಗಣ ಜ್ಯೋತಿಯ ಬೆಳಗ ಬಲ್ಲವರಿಲ್ಲ
ಹೊರಗಣ ಹೊರಗನು ಅರಿಯಬಲ್ಲವರಿಲ್ಲ
ಹಿಂದಣ ಹಿಂದನು ಮುಂದಣ ಮುಂದನು
ತಂದೆ ತೋರಿದನು ನಮ್ಮ ಗುಹೇಶ್ವರನು.' [41]

ಇಲ್ಲಿ ಗುರು ಗುಹೇಶ್ವರನು ಎಲ್ಲ ರೀತಿಯ ಜ್ಞಾನವನ್ನು ಕರುಣಿಸಿದನೆಂದು ಅಲ್ಲಮ ಹೇಳಿದ್ದಾನೆ. ಹೊರಜಗತ್ತನ್ನು ಅದರ ವ್ಯಾಪ್ತಿ, ವಿಸ್ತಾರದಿಂದ ತಿಳಿಯಪಡಿಸಿದನು. 'ಅಜ್ಞಾನ ವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ......"[42] ಅಜ್ಞಾನದ ತೊಟ್ಟಿಲನ್ನು ಮುರಿಯದ ಹೊರತು ಶಿಶುವಿನ ಜ್ಞಾನ ಅರಿವಿನ ಪಥದಲ್ಲಿ ಸಾಗಲು ಸಾಧ್ಯವಿಲ್ಲ ಎನ್ನುತ್ತಾನೆ.

ಹೀಗೆ ಅಲ್ಲಮನ ವಚನಗಳಲ್ಲಿ ಜ್ಞಾನ ಮತ್ತು ಅರಿವಿನ ನೆಲೆಗಳು ಪರಸ್ಪರ ಸಂವಾದಿಯಾಗಿ ಕಾಣಿಸಿಕೊಳ್ಳುತ್ತವೆ. ಅಲ್ಲಿ ಜ್ಞಾನ ಮತ್ತು ಅರಿವು ಭಿನ್ನ ಅರ್ಥದ ನೆಲೆಗಳಾಗಿ ಅಲ್ಲಮನಲ್ಲಿ ಕಾಣಿಸಿಕೊಂಡರೂ ಅಂತಿಮವಾಗಿ ಅವು ಪರಸ್ಪರ ಪೂರಕವೆನಿಸುತ್ತವೆ. ಜ್ಞಾನವು ಭೌತಿಕ ಪ್ರಪಂಚದ ಎಲ್ಲ ಇರವುಗಳ ಅಸ್ತಿತ್ವವನ್ನು ಧನಾತ್ಮಕ ಹಾಗೆಯೇ ಋಣಾತ್ಮಕ ನೆಲೆಯಲ್ಲಿ ಮಂಡಿಸಬಹುದು. ಆದರೆ ಆತ್ಮಜ್ಞಾನದ ಮೂಲಕ ಹೊಂದುವ ಅರಿವಿನಲ್ಲಿ ಭೌತಿಕದ ಎಲ್ಲ ಜ್ಞಾನ ಸ್ವರೂಪಗಳು ಅಳಿದು ಲಿಂಗದಲ್ಲಿ ಲೀನವಾಗುತ್ತವೆ. ಆದರೆ ಅರಿವಿನ ಮಾರ್ಗದಲ್ಲಿ ಜ್ಞಾನ ಅನಿವಾರ್ಯವಾಗುತ್ತದೆ. ಅದುವೇ ಅರಿವಿನ ಪಥದಲ್ಲಿ ಜೀವಿಯನ್ನು ಮುನ್ನಡೆಸುವ ಬಗೆಯಾಗಿದೆ. ಅಲ್ಲಮನ ಸಂದರ್ಭದಲ್ಲಿ ಜ್ಞಾನವೇ ಅರಿವಲ್ಲ. ಏಕೆಂದರೆ ಜ್ಞಾನದಲ್ಲಿ ಅಹಂಭಾವದ ಲೌಕಿಕದ ಮೋಹ ಇರುತ್ತದೆ. ಕುರುಹಿನ ಹಂಗು ಇರುತ್ತದೆ. ಆದರೆ ಅರಿವು ಇದೆಲ್ಲವನ್ನು ಮೀರಿ ನಿಂತ ನೆಲೆ. ಆದ್ದರಿಂದಲೇ ಅಲ್ಲಮನಿಗೆ ಜ್ಞಾನದ ನೆಲೆಗಿಂತ ಅರಿವಿನ ನೆಲೆಯೇ ಮುಖ್ಯವಾಗುತ್ತದೆ. ವಚನಗಳ ವಿಶ್ಲೇಷಣೆಯ ನೆಲೆಯಲ್ಲಿ ಹೇಳುವುದಾದರೆ ಭಕ್ತನದು ಶರಣನ ಭಕ್ತಿಪಥದಲ್ಲಿ ಜ್ಞಾನ ಸಾಧನ ಸಾಮಗ್ರಿಯಾದರೆ ಅರಿವು ಕಾರಣ ಸಾಮಗ್ರಿಯಾಗುತ್ತದೆ. ಈ ಬಗೆಯಲ್ಲಿ ಅಲ್ಲಮನ ವಚನಗಳ ಜ್ಞಾನಸಂಬಂಧಿ ವಿಚಾರ ಮತ್ತು ಅರಿವಿನ ನೆಲೆಗಳನ್ನೂ ವಿವರಿಸಿಕೊಳ್ಳಬಹುದು.

೫.೩ ಅಲ್ಲಮನಲ್ಲಿ 'ಅರಿವು': ಅನುಭಾವದ ನೆಲೆಗಳು

'ಅನುಭಾವ' ಎಂಬುದು ಇಂಗ್ಲಿಷಿನ ಮಿಸ್ಟಿಸಿಸಮ್ (Mysticism) ಎನ್ನುವುದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತದೆ. ಈ ತಾತ್ವಿಕ ಪರಿಕಲ್ಪನೆಯನ್ನು ತತ್ತ್ವಶಾಸ್ತ್ರದ ಹಿನ್ನೆಲೆ ಮತ್ತು ಪ್ರಾಯೋಗಿಕ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಲು ಸಾಧ್ಯವಿದೆ. ಸೈದ್ಧಾಂತಿಕ ನೆಲೆಯಲ್ಲಿ ಇತರ ಜ್ಞಾನ ಶಿಸ್ತುಗಳ ನೆರವಿನಿಂದ ವಿವೇಚಿಸುವುದು ತತ್ತ್ವಶಾಸ್ತ್ರದ ನೆಲೆಯಾದರೆ, ಎರಡನೆಯದು ಬದುಕನ್ನೇ ಪ್ರಯೋಗಕ್ಕೆ ಒಡ್ಡುತ್ತಾ ಜ್ಞಾನ, ಅನುಭವಗಳ ಮೂಲಕ ಶೋಧನೆಯ ಪಥದಲ್ಲಿ ಸಾಗುವ ಪ್ರಾಯೋಗಿಕ ಮಾರ್ಗ. ತತ್ತ್ವಶಾಸ್ತ್ರದಲ್ಲಿ ಜ್ಞಾನ ಮತ್ತು ಆತ್ಮಾರ್ಪಣ ಭಾವದಿಂದ ಪರಮಾತ್ಮನಲ್ಲಿ ಸಾಯುಜ್ಯ ಪಡೆಯುವಂತಹ ಮುಮುಕ್ಷುವನ್ನು ಮಿಸ್ಟಿಕ್ (Mystic) ಅಥವಾ 'ಅನುಭಾವಿ' ಎಂದು ಗುರುತಿಸಲಾಗುತ್ತದೆ. ಬುದ್ಧಿಗೆ ಮೀರಿದಂತಹ ತತ್ವಗಳನ್ನು ಆಧ್ಯಾತ್ಮಿಕವಾಗಿ ಗ್ರಹಿಸಲು ಸಾಧ್ಯವಾಗುವುದೇ ಅನುಭಾವಿಯ ಲಕ್ಷಣವಾಗಿದೆ. ಆದ್ದರಿಂದ ಅನುಭಾವ, ಅನುಭಾವಿ ಪದಗಳು ವಾಸ್ತವದ ಅನುಭವಗಳ ಹಿನ್ನೆಲೆಯಲ್ಲಿ ರೂಪುಗೊಳ್ಳುತ್ತದೆ. ಆಧ್ಯಾತ್ಮಿಕತೆಯ ನೆಲೆಗಟ್ಟಿನಲ್ಲಿ ಅಸ್ತಿತ್ವ ಪಡೆಯುತ್ತದೆ. ಮನುಷ್ಯನ ಸಾಧಾರಣ ಅನುಭವಗಳಿಗೂ ಮೀರಿದ ಅಸಾಧಾರಣ ಅನುಭವದಿಂದ ತನಗಿಂತಲೂ ಹಿರಿದಾದ ಪರಾತ್ಪರ ವಸ್ತುವಿನಲ್ಲಿ ತನ್ಮಯತೆಯನ್ನು ಬಯಸುತ್ತಾನೆ. ಅದು ಅತೀಂದ್ರಿಯವಾದುದು. ಡೀನ್ ಇಂಜ್ ಎಂಬ ಅನುಭಾವವಾದಿಯ ಪ್ರಕಾರ "Mysticism has its root as the dim consciousness of the beyond which is the raw material of all religious".[43]

'ಅನುಭಾವ' ವೇ ವಚನ ಸಾಹಿತ್ಯದ ಪ್ರಧಾನ ವಿಚಾರಧಾರೆ. ಆ ಮಾರ್ಗದಲ್ಲಿ ಸಾಗುವುದೆಂದರೆ ವಿರಕ್ತಿ ಭಾವದ ಮೂಲಕ 'ಅಹಂ'ನ ನಿರಸಗೊಳಿಸುವುದು. ಧ್ಯಾನ ತಪಸ್ಸುಗಳ ಮೂಲಕ ಇಂದ್ರಿಯ ನಿಗ್ರಹ ಮಾಡಿಕೊಂಡು ನಾನು, ನನ್ನದು ಎಂಬುದನ್ನೆಲ್ಲ ವರ್ಜಿಸಿ ಎಲ್ಲದರಿಂದ ಮುಕ್ತನಾಗುವುದು ಈ ರೀತಿಯ ಸರ್ವಸಮರ್ಪಣಾಭಾವದಿಂದ ಮೂಡುವುದೇ ಅರಿವು. ಅದಕ್ಕೆ ಭಗವಂತನ ಅನುಗ್ರಹವು ಬೇಕು. ಕಾಯಕ ವ್ಯಾಮೋಹ ಅಳಿದು ತನು-ಮನ ಶುದ್ಧಿಯಿಂದ, ಯೋಗಸಾಧನೆಯ ಮೂಲಕ ಸಿದ್ಧಿಸುವ ಅಭೂತಪೂರ್ವ ಸತ್ಯವೇ ಅನುಭಾವ. ಹೀಗೆ ತತ್ತ್ವಶಾಸ್ತ್ರದಲ್ಲಿ ಶೋಧನೆಗೆ ವ್ಯಾಖ್ಯಾನಕ್ಕೆ ಒಳಗಾಗಿರುವ ಸೈದ್ಧಾಂತಿಕ ನೆಲೆಯೇ ಅನುಭಾವದ ಪರಿಕಲ್ಪನೆ. ವಚನಕಾರರಲ್ಲಿ ಈ ಚಿಂತನೆಯು ಜಿಜ್ಞಾಸೆಗೆ ಒಳಗಾಗಿರುವುದು ಕಂಡುಬರುತ್ತದೆ. ಬಹಿರಂಗ ಸಾಧನೆ ಮತ್ತು ಅಂತರಂಗ ಸಾಧನೆಗಳು ಅನುಭಾವ ಮಾರ್ಗದಲ್ಲಿ ಮುಖ್ಯವಾಗುತ್ತವೆ. ಬಹಿರಂಗ ಸಾಧನೆಯಲ್ಲಿ ಉಪವಾಸ ಮೌನ ಮತ್ತು ಏಕಾಂತಗಳು ಪ್ರಧಾನ ಅಂಶವಾದರೆ, ಅಂತರಂಗ ಸಾಧನೆಯಲ್ಲಿ ಅಹಂಭಾವದ ಪೂರ್ಣಪರಿತ್ಯಾಗವಿದೆ. ಈ ಸ್ಥಿತಿಯಲ್ಲಿ ತನ್ನತನವೆಂಬ ವ್ಯಕ್ತಿತ್ವ ಭಾವವು ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗುತ್ತದೆ. ವಚನಕಾರರು ಈ 'ಅನುಭಾವ' ದ ನೆಲೆಯನ್ನು ವ್ಯಾಖ್ಯಾನಿಸಿಕೊಂಡ ಬಗೆಯನ್ನು ಅವರ ವಚನಗಳ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳಬಹುದು. ಮೊದಲ ವಚನಕಾರ ದಾಸಿಮಯ್ಯ-

ಅನುಭಾವವಿಲ್ಲದೆ ಈ ತನು ಎಳತಟವಾದುದಯ್ಯ
ಅನುಭಾವವೇ ತನುವಿಂಗೆ ಆಧಾರ
ಅನುಭಾವಿಗಳ ಅನುಭಾವ ಮನವಾರೆ ವೇದಿಸಿದವರಿಗೆ
ಆನನವಿಲ್ಲ ಕಾಣ ರಾಮನಾಥ

ಎಂದು ಹೇಳುತ್ತಾನೆ. ಇಲ್ಲಿ ಅನುಭಾವವೆಂಬುದೆ ತನು-ಮನಗಳಿಗೆ ಆಧಾರಪ್ರಾಯವಾದುದು. ಅನುಭಾವಿಯಾದವನಿಗೆ ಮಾತ್ರ ಅನುಭಾವದ ತಿಳಿವು ಮೂಡಲು ಸಾಧ್ಯ. ಅನುಭಾವವನ್ನು ಹೊಂದಿದವನಲ್ಲಿ ಮತ್ತೆ ಯಾವ ಶಂಕೆ, ಸಂಶಯಗಳು ಮೂಡುವುದಿಲ್ಲ. ಅರಿವಿನ ಮಾರ್ಗದಲ್ಲಿ ನಡೆದಂತೆ ಅನುಭಾವವನ್ನು ಹೊಂದಿದವನು ಹುಟ್ಟು ಸಾವುಗಳ ಬಂಧನದಿಂದ ಮುಕ್ತನಾಗುತ್ತಾನೆ. ಇಲ್ಲಿ ಅನುಭಾವವೇ ತನುವಿಂಗೆ ಆಧಾರ ಎಂದರೆ ಮತ್ತೊಂದೆಡೆ ಅನುಭಾವ ಭಕ್ತಿಗಾಧಾರ ಎಂದರೆ ಅನುಭಾವ ತನು ಮತ್ತು ಭಕ್ತಿ ಇವೆರಡನ್ನು ಪರಿಪೂರ್ಣಗೊಳಿಸಲು ಅನಿವಾರ್ಯವಾಗಿದೆ. ಹೀಗೆ ತಾತ್ತ್ವಿಕವಾದ ಅನುಭಾವಿಕ ಮಾರ್ಗವನ್ನು ದಾಸಿಮಯ್ಯ ಪ್ರತಿವಾದಿಸುತ್ತಾರೆ.

'ಅನುಭಾವ' ವೆನ್ನುವುದು ಒಂದು ಸಿದ್ಧಿ ಸಾಧನೆ. ಅದಕ್ಕೆ ಸತತ ಪರಿಶ್ರಮ, ಏಕಾಗ್ರತೆ ಬೇಕು. ತಪಸ್ಸಿನಂತೆ ಅದು ಒಂದು ಸಾಧನೆ. ಅದನ್ನು ಹೊಂದುವುದು ಅಷ್ಟು ಸುಲಭ ಸಾಧ್ಯದ ಮಾತಲ್ಲ. ಅದಕ್ಕೆ ನಿಷ್ಠೆ, ಏಕಾಗ್ರತೆ, ದೃಢಮನಸ್ಸು ಬೇಕು. ಅದನ್ನು ಸಾಧಿಸುವುದೆಂದರೆ ನಮ್ಮನ್ನು ನಾವು ಪರೀಕ್ಷೆಗೆ ಒಡ್ಡಿಕೊಂಡಂತೆ ಎಂದು ಅನುಭಾವದ ಕುರಿತ ವ್ಯಾಖ್ಯಾನಗಳನ್ನು ಉಪಮೆಗಳ ಮೂಲಕ ತಮ್ಮ ವಚನಗಳಲ್ಲಿ ವಚನಕಾರರು ಪ್ರಸ್ತಾಪಿಸಿದ್ದಾರೆ. ಚೆನ್ನ ಬಸವಣ್ಣನ ಪ್ರಕಾರ-

ಅನುಭಾವವೆಂಬುದೆನು ರಚ್ಚೆಯ ಮಾತೇ?
ಅನುಭಾವವೆಂಬುದೇನು ಸಂತೆಯ ಸುದ್ದಿಯೇ?
ಅನುಭಾವವೆಂಬುದೇನು ಬೀದಿಯ ಪ್ರಸಾರವೆ?
ಏನು ಹೇಳುವೆನಯ್ಯಾ ಅನುಭಾವದ ಘನವನು?
ಆನೆಯ ಮಾನದೊಳಗಿಕ್ಕದೊಡೆ ಅಡಗುವುದೆ ದರ್ಪಣದೊಳಗಲ್ಲದೆ ?
ಆ ಹಾಗೆ ಕಂಡಕಂಡಲ್ಲಿ ಗೋಷ್ಠಿ ಗೋಷ್ಠಿ
ನಿಂದನಿಂದಲ್ಲಿ, ಬಂದ ಬಂದಲ್ಲಿ ಅನುಭಾವವ ಮಾಡುವ
ಪಾತಕರನೆನಗೊಮ್ಮೆ ತೋರದಿರಯ್ಯ ಕೂಡಲ ಚೆನ್ನ ಸಂಗಮದೇವಾ.

'ಅನುಭಾವ' ಎನ್ನುವ ಮಾತನ್ನು ಆಡುವುದು ಸುಲಭ. ಆದರೆ ಅನುಭಾವಿಯೊಬ್ಬನ ನೆಲೆಯನ್ನು ಅರಿತುಕೊಳ್ಳುವುದು ಅದರ ನಿಷ್ಠೆಯನ್ನು, ಸಾಧನೆಯನ್ನು ಮಾಡುವುದು ಸುಲಭದ ಮಾತಲ್ಲ. ಅದು ಬೀದಿ ಸಂತೆಯಲ್ಲಿ ದೊರೆಯುವ ವಸ್ತುವಲ್ಲ. 'ಅನುಭಾವದ ಘನ' ಇಂತಹ ಮಹತ್ವವನ್ನು ಕಂಡಲ್ಲಿ ನಿಂತಲ್ಲಿ

ಮಾತನಾಡುವ ವಿಚಾರವಲ್ಲ ಎಂದು ಅನುಭಾವಿಗಳೆಂದು ಮೆರೆಯುವ, ಅನುಭಾವ ಗೋಷ್ಠಿಗಳೆಂದು ಬೀಗುವವರ ಕುರಿತ ಅಸಹನೆಯೊಂದಿಗೆ ಅದನ್ನು ವಿಶಿಷ್ಟವಾಗಿ ವ್ಯಾಖ್ಯಾನಿಸಿಕೊಳ್ಳಬಹುದು.

ಅನುಭಾವದ ವಿವಿಧ ನೆಲೆಗಳನ್ನು ಅದನ್ನು ಹೊಂದುವ ಮಾರ್ಗವನ್ನು ಕುರಿತು ವಚನಕಾರರು ಭಿನ್ನ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅನುಭಾವವೆಂಬ ಸಂಪತ್ತನ್ನು ಹಿಡಿದು ಅಲೆದಾಡುವವರಿಗೆ ಕಂಡದ್ದೆಲ್ಲ ಅನುಭಾವವಾದರೆ ಅರಿವಿನಲ್ಲಿ ಒಂದಾದ ಅವರ ಮನಸ್ಸು ಅರಿವಿನೊಳಗಿನ ಅರಿವನ್ನು ತೆರೆದು ತೋರಬಲ್ಲದು. ಹೀಗೆ ಬಾಳಿನಲ್ಲಿ ಅವಿನಾಭಾವವಾಗಿ ಒಳಗೊಂಡ ಅನುಭಾವ ಅನುಭಾವಿಗಳನ್ನು ಬಿಟ್ಟು ಹೋಗದು. ಅನುಭಾವದ ನೆಲೆಯಷ್ಟು ದರ್ಶನ, ಶೋಧನ ಮತ್ತು ಸಂಗಮದ ಮೂಲಕ ಅರಿತುಕೊಂಡು ವಿರಕ್ತಿಯೆಡೆಗೆ ನಡೆಯುವುದು ಅನುಭಾವಿಗಳ ಸಾಮಾನ್ಯ ನೆಲೆಯಾದರೆ, ವಚನಕಾರರ ಬಾಳಿನಲ್ಲಿ ಬೆರೆತು ಅರಿತು ಅದರಿಂದ ಮುಕ್ತವಾಗುವ ಪ್ರಕ್ರಿಯೆಯಾಗಿದೆ. ಅನುಭಾವವೆಂದರೆ ಕೇವಲ ಮಾತಿನ ವೈಚಿತ್ರ್ಯವಲ್ಲ, ಭಾಷೆಯ ಅನನ್ಯತೆಯಲ್ಲ, ಅರಿವಿನೊಳಗಿನಿಂದ ಬರುವ ವಿಶಿಷ್ಟ ಅನುಭೂತಿ. ಅದು ಕಾಲ, ದೇಶ, ಸೀಮೆಯ ಸಂಬಂಧಗಳಿಂದೆಲ್ಲ ಮುಕ್ತವಾಗಿ ವಿಶ್ವವನ್ನೆಲ್ಲ ವ್ಯಾಪಿಸುವ ಮಟ್ಟಕ್ಕೆ ಏರುವ ಅರಿವಿನ ನೆಲೆ. ಈ ಅರ್ಥದಲ್ಲೇ ಬಸವಣ್ಣನ "---------ಶರಣರ ಅನುಭಾವದಿಂದ ಎನ್ನ ಮನದ ಕೇಡ ನೋಡಯ್ಯ", ಅಕ್ಕಮಹಾದೇವಿಯ "--------ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ ತನು ಗುಣಾದಿಗಳ ಸುಡಲಾಯಿತ್ತು. ಇದು ಕಾರಣ ನಿಮ್ಮ ಮಹಾನುಭಾವಿಗಳ ಅನುಭಾವವ ತೋರಿ ಎನ್ನೊಡಲ ನುಳುಹಿಕೊಳ್ಳು ಚೆನ್ನಮಲ್ಲಿಕಾರ್ಜುನಾ" ಎಂಬ ವಚನಗಳು ಅನನ್ಯವಾಗುತ್ತವೆ. ಮನಸ್ಸಿಗೆ ಕೇಡು ಆಗದಂತೆ ತಡೆಯಲು ಅನುಭಾವದ ನೆಲೆಗೆ ಏರಬೇಕು ಎಂದು ಅತ್ಮನಿರೀಕ್ಷೆಯ ಜತೆಗೆ ಅನುಭಾವವದ ಪರಿಕಲ್ಪನೆಯ ವಿಶಿಷ್ಟ ನೆಲೆಯನ್ನು ಮುಂದಿಡುತ್ತದೆ. ಅಕ್ಕನ ಮಾತಿನಂತೆ ಈ ದೇಹಭಾವವು ಸಕಲ ಗುಣಾದಿಗಳ ಬೀಡು. ಇದಕ್ಕೆ ಅನುಭಾವದ ಕಿಚ್ಚು ತಾಕಿದಾಗ ಮಾತ್ರ ತನು ಕರ್ಮಗಳೆಲ್ಲ ಸುಟ್ಟು ಅನುಭಾವ ನೆಲೆಗೊಳ್ಳುತ್ತದೆ.

ಅರಿವು, ಅನುಭಾವಗಳ ಅನಭಿಷಿಕ್ತ ದೊರೆ ಅಲ್ಲಮನಲ್ಲಿ ಅನುಭಾವದ ನೆಲೆಗಳೇನು? ವ್ಯಾಖ್ಯಾನಗಳೇನು? ಎಂಬುದು ಇಲ್ಲಿನ ಅಧ್ಯಯನದ ಮುಖ್ಯ ಉದ್ದೇಶ. ಸಮಕಾಲೀನ ವಚನಕಾರರಲ್ಲಿ ಒಂದು ಅನನ್ಯತೆಯನ್ನು ಉಳಿಸಿಕೊಂಡೆ ತನ್ನ ಚಿಂತನೆಗಳನ್ನು, ನಿಗೂಢವಾಗಿ, ಅಗೋಚರವಾಗಿ ಹಿಡಿದಿಟ್ಟಾತನ ಅನುಭಾವದ ಅನುಭವಗಳೇನು? ಎಂಬ ಹುಡುಕಾಟದಲ್ಲಿ ತೊಡಗಿದಾಗ ಸಿಗುವ ಉತ್ತರ 'ನಿಶ್ಯಬ್ದವೇ ಅನುಭಾವ'. ಈ ನೆಲೆಯಲ್ಲಿಯೇ ಅಲ್ಲಮನ ವಚನ–

ನಿರಾಳವೆಂಬೊ ಕೂಸಿಂಗೆ ಬೆಣ್ಣೆಯನಿಕ್ಕಿ ಹೆಸರಿಟ್ಟು ಕರೆದವರಾರೋ?
ಅಕಟಾಕಟಾ ಶಬ್ದದ ಲಜ್ಜೆಯ ನೋಡಾ!
ಗುಹೇಶ್ವರನನರಿಯದ ಅನುಭಾವಿಗಳೆಲ್ಲರ ತರಕಟಗಾಡಿತ್ತು.

ಅನುಭಾವಿಗಳೆಂದು ಹೆಮ್ಮೆಯಿಂದ ಬೀಗುವವರಿಗೆ ಈ ವಚನದಲ್ಲಿ ಅಲ್ಲಮನು ವಿಡಂಬನಾತ್ಮಕವಾಗಿ ಪ್ರತಿಕ್ರಿಯಿಸುತ್ತಾ ಅನುಭಾವದ ಕುರಿತು ತನ್ನದೇ ಆದ ವ್ಯಾಖ್ಯಾನ ನೀಡುತ್ತಾನೆ. ಆಕಾರವಿಲ್ಲದ ಕೂಸಿಗೆ ಬೆಣ್ಣೆಯನ್ನಿಟ್ಟು ಹೆಸರು ಸೂಚಿಸಿ ಕರೆಯಲು ಸಾಧ್ಯವಿಲ್ಲ. ಸಾಧ್ಯವಾದರೆ ಅದು ಶಬ್ದದ ಲಜ್ಜೆಯೇ ಹೊರತು ಬೇರೆ ಸಾಧ್ಯತೆಯಿಲ್ಲ. ಆದ್ದರಿಂದ ಅನುಭಾವವೆಂದರೆ ಸುತ್ತಮುತ್ತಲನ್ನು ಅಂದರೆ ವಿಶ್ವದ ತಮಂಧವನ್ನು ಅರಿಯುವ ನೆಲೆ. ತನ್ನನ್ನು ತಾನು ಅರಿಯುವುದು ಕೂಡ ಅನುಭವದ ಮಾರ್ಗದಲ್ಲಿ ನಡೆಯುವ ಶೋಧವೆ ಆಗಿದೆ. ಒಟ್ಟಿನಲ್ಲಿ ಅನುಭವ ನೆಲೆಗೊಳ್ಳದ ಒಂದು ಸ್ಥಿತಿ ಉಸಿರು ಆಡಲು ಸಾಧ್ಯವಾಗದಂಥ ಸ್ಥಿತಿಯಾಗಿದೆ.

ಕಳಶವುಳ್ಳ ಶಿವಾಲಯಕ್ಕೆ ಚೌಕದವೆರಡು ಕಂಭಭೂಮಿ

ಭಾವಪೂಜಕರಾರೋ; ಅನುಭಾವಿಗಳಿನ್ನಾರೋ? ಪೂಜಿಸುವವರಿನ್ನಾರೋ?

ಇದರ ಸ್ಥಾನದ ನೆಲೆಗತಿಯನಾರು ಬಲ್ಲರು, ಗುಹೇಶ್ವರ?

(ಜ್ಞಾನವುಳ್ಳ ಪಿಂಡವೆಂಬ ಶಿವಾಲಯಕ್ಕೆ ಶಿವ-ಶಕ್ತಿಗಳೆಂದೆರಡು ಕಂಬ. ತ್ರಿತತ್ತ್ವಭಾವವೆಂಬ ಪೂಜೆ. ಈ ಪ್ರಾಣಲಿಂಗಪೂಜೆ ಯಾರಿಗೂ ಅಳವಡದು) ಶಿವಾಲಯಕ್ಕೆ ಶಿವ ಶಕ್ತಿ, ಪೂಜೆ ಎಲ್ಲವೂ ಇದ್ದರೂ ಪ್ರಾಣಲಿಂಗ, ಆತ್ಮಲಿಂಗದ ಪೂಜೆಗೆ ಅಳವಟ್ಟವರಾರಿಲ್ಲ. ಇಲ್ಲಿ ಅನುಭಾವಿಗಳಾರೋ? ಎಂಬ ಪ್ರಶ್ನೆ ಇದೆ. ಶಿವಾಲಯದ ಪೂಜೆ ಸಂದ ಅನುಭಾವಿಗಳು ಯಾರು ಎನ್ನುವುದು ವಾಚ್ಯದ ನೆಲೆಯಾದರೆ ಅನುಭಾವಿ ಎಂದರೆ ಯಾರು? ಆತನ ನಿಲುವೇನು? ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಆ ಮೂಲಕ ಅನುಭಾವಿಯೆಂದರೆ ಈ ಭೌತಿಕ ವಸ್ತು ಸಂಗತಿಗಳಂತೆ ದೃಷ್ಟಿಗೆ, ವ್ಯಾಖ್ಯಾನಕ್ಕೆ ಗೋಚರವಾಗಿ ಇರುವುದಲ್ಲ. ದರ್ಶನದ ಜ್ಞಾನದ, ವಿಶ್ವದ ಅರಿವಿನ ಮೂಲಕ ಹೊಂದುವ ವಿಶಿಷ್ಟ ಅನುಭೂತಿ ಎಂದು ಪ್ರತಿಪಾದಿತವಾಗಿದೆ.

'ಬರಿಯ ನಚ್ಚು ಮಚ್ಚಿನ ಭಕ್ತಿಯ ಭಕ್ತರು ಲಿಂಗವ ಮುಟ್ಟಿಯೂ ಮುಟ್ಟದ ಒಳಲೊಟ್ಟೆಗಳು ನೆರೆದು ಗಳಹುತಿಪ್ಪರು. ತಮ ತಮಗೆ ಅನುಭಾವವ ನುಡಿವರು. ಅನುಭಾವದ ಆಯತನರಿಯದಿದ್ದರೆ ಹಿಂದಣ ಅನುಭಾವಿಗಳು? ಗುಹೇಶ್ವರಲಿಂಗದ ಸುಖವ ಮುಟ್ಟಿದರೆ ಮರಳಿ ಭವಕಲ್ಪಿತವೆಲ್ಲಿಯದೋ?'

ಮೇಲ್ನೋಟದ ನಟನೆಯ ಭಕ್ತಿಯನ್ನು ವಿಡಂಬಿಸುತ್ತಾ ಅನುಭಾವದ ನೆಲೆಯನ್ನು ಅರಿಯಿರಿ ಎಂದಿದ್ದಾರೆ. ನಚ್ಚು ಮೆಚ್ಚಿಕೆಗಳಿಂದ ಮಾಡುವ ಭಕ್ತಿಯಿಂದ ಭಕ್ತರು ಡಾಂಭಿಕರೆನಿಸುತ್ತಾರೆ. ಅದು ಶಿವಲಿಂಗವನ್ನು ಮುಟ್ಟಲಾರದು. ತಾವೇ ಅನುಭಾವಿಗಳೆಂದು ಹೆಮ್ಮೆಯಿಂದ ಬೀಗುವ ಈ ಭಕ್ತರು ಅನುಭಾವವೇನೆಂಬುದನ್ನು ಅರಿತಿಲ್ಲ. ಹಿಂದಿನ ಅನುಭಾವಿಗಳು ಅನುಭಾವವನ್ನು ಅರಿಯದೆ ಇದ್ದರೆ? ಅವರ ಅರಿವು ಈ ಡಾಂಭಿಕರಿಗೆ ಇರಲು ಸಾಧ್ಯವೇ? ಅನುಭಾವದ ನೆಲೆಯನ್ನು ಅರಿತವರು, ಗುಹೇಶ್ವರಲಿಂಗವನ್ನು ಮನಮುಟ್ಟಿ ಮೂರ್ತಗೊಳಿಸಿಕೊಂಡವರು ಮರಳಿ ಭವ ಬಂಧನಕ್ಕೆ ಸಿಲುಕಲಾರರು.

ಅವರು ಅನುಭಾವ ಪಥದಲ್ಲಿ ಮುಂದಕ್ಕೆ ಸಾಗಿದ್ದಾರೆ. "ಅನುಭವಿಗಳನುಭವಿಗಳೆಂಬಣ್ಣಗಳು ನೀವು ಕೇಳಿರೇ. ಅನುಭವವೆಂಬುದೊಂದಿತ್ತು ಕೆಟ್ಟಿತ್ತು ...." [3], "............ಅಕಟಕಟಾ ಅನುಭಾವ ಹೊಲಬುಗೆಟ್ಟು ಹೋಯಿತ್ತಲ......................"[4] ಎಂದು ಅನುಭಾವಿಗಳಿಗೆ ಅನುಭಾವನ್ನು ಹೊಂದುವಂತೆ ಮಾಡಿದ ಹಿರಿಯ ಅನುಭಾವಿಗಳ ವ್ಯಕ್ತಿತ್ವವನ್ನು ಪ್ರಸ್ತಾಪಿಸಿದ್ದಾರೆ. ಹಾಗೆಯೇ ಅನುಭಾವವೆಂಬುದು ಕುರುಡನೊಬ್ಬ ತೋರಿದ ಹಾದಿಯಲ್ಲಿ ಸಾಗಿಸಿದಂತೆ ಹೊಲಬುಗೆಟ್ಟು ಹೋಯಿತಲ್ಲ ಎಂಬ ವಿಷಾದಭಾವ ವ್ಯಕ್ತವಾಗಿದೆ.

'ಅನುಭಾವದಿಂದ ಹುಟ್ಟಿತ್ತು ಲಿಂಗ, ಅನುಭಾವದಿಂದ ಹುಟ್ಟಿತ್ತು ಜಂಗಮ, ಅನುಭಾವದಿಂದ ಹುಟ್ಟಿತ್ತು ಪ್ರಸಾದ, ಅನುಭಾವದನುವಿನಲ್ಲಿ ಗುಹೇಶ್ವರ ಲಿಂಗವನುಪಮ ಸುಖಿ' [5]

ಆಧ್ಯಾತ್ಮದ ಅನುಭವದಿಂದ ಅನುಭಾವ ಸಾಧ್ಯ. ಅದಕ್ಕೆ ವಿಶ್ವದ ಚರಾಚರ ವಸ್ತುಸಂಗತಿಗಳ ಅರಿವು ಸಾಧ್ಯವಾಗಬೇಕು. ಆಗ ಮಾತ್ರ ಲಿಂಗ, ಜಂಗಮ. ಪ್ರಸಾದ – ಇವು ಅನುಭಾವಿಯಲ್ಲಿ ನೆಲೆಗೊಳ್ಳುತ್ತದೆ. ಈ ತ್ರಿವಿಧವೆ ಅನುಭಾವದ ಮೂಲ ಸೆಲೆ. ಇದನ್ನು ಅರಿತವನೇ ಅನುಭಾವಿ. ಅನುಭಾವ ಎನ್ನುವುದು ತನ್ನೊಳಗಿನ ಮನದ ನೆಲೆಯನ್ನು ತೆರೆದು ನೋಡಿಕೊಳ್ಳುವ ಸಾಧನ ಮತ್ತು ಸಾಧ್ಯತೆ. 'ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು?............', 'ತಮ್ಮ ತಮ್ಮ ಭಾವಕ್ಕೆ ಉಡಿಯಲ್ಲಿ ಕಟ್ಟಿಕೊಂಡರು ....' ಅಂಗದ ಮೇಲೆ ಲಿಂಗದ ಸಾಂಕೇತಿಕತೆಯ ವಿಡಂಬನೆಯಿದೆ. ಅನುಭಾವಿಗಳೆಲ್ಲರೂ ಈ ಭೌತಿಕ ನೆಲೆಯನ್ನು ದಾಟಿ, ಬಹಿರಂಗದ ಹಂಗು ತೊರೆದು ಸಾಧನೆಯ ಸಿದ್ಧಿಯ ಹಂತಕ್ಕೆ ಏರಿರುತ್ತಾರೆ. ಅಂತರಂಗದಲ್ಲಿ ಲಿಂಗ ಐಕ್ಯಗೊಂಡಾಗ ಅನುಭಾವದ ನೆಲೆ ಸಿದ್ಧಿಸುತ್ತದೆ.

ಅನುಭಾವದ ನೆಲೆಗಳನ್ನು ಕೇವಲ ಭೌತಿಕ ಅಭಿವ್ಯಕ್ತಿಯಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಮೂರ್ತ ಸಂಗತಿಗಳು ಅಮೂರ್ತದೆಡೆಗೆ ಸಾಗುವ ಈ ಮಾರ್ಗದಲ್ಲಿ ಪ್ರತಿಮೆ ಪ್ರತೀಕಗಳು ಅನಿವಾರ್ಯ. ಅನುಭಾವ ನೆಲೆಗೊಳ್ಳದ ಹೊರತು ಅರಿವು ಮೂಡಲು ಸಾಧ್ಯವಿಲ್ಲ. ಅರಿವಿನ, ಜ್ಞಾನದ ಪಥದಲ್ಲಿ ಮೂರ್ತ ಸಂಗತಿಗಳನ್ನು ಅರಿಯುತ್ತ ಅಮೂರ್ತದೆಡೆಗೆ ಸಾಗುವ, ಆ ಮೂಲಕ ಲಿಂಗದಲ್ಲಿ ಐಕ್ಯವಾಗುವ ವಿಶಿಷ್ಟ ಅನುಭೂತಿ, ಪ್ರಕ್ರಿಯೆಯೇ ಅನುಭಾವ. ಅನುಭಾವದ ಅರಿವಿನ ಮೂಲಕ ಅಂತರಂಗದಲ್ಲಿ ಧ್ಯಾನಸ್ಥ ಸ್ಥಿತಿಯನ್ನು ತಳೆಯಲು ಸಾಧ್ಯ. ಹೀಗೆ ಅನುಭಾವವನ್ನು ಮಿಸ್ಟಿಸಿಸಂ ಎನ್ನುವ ಮಾನಗಳಿಗೆ ಸಂವಾದಿಯಾಗಿ ಬಳಸಿದಂತೆ ಸಂಭಾಷಣೆ ಎಂದು ಕ್ರಿಯೆ ಎಂದು ವಚನಗಳಲ್ಲಿ ವ್ಯಕ್ತವಾಗಿರುವುದು ಕಂಡುಬರುತ್ತದೆ. ಅನುಭಾವವೆಂಬುದು ತೋರಿಕೆಯ ಅಸ್ಥಿರ ವಸ್ತು ಸತ್ಯದಿಂದ ಬಿಡಿಸಿಕೊಂಡು ಶಾಶ್ವತ ಸತ್ಯವನ್ನು ಹೊಂದುವ ಬಗೆಯೂ ಹೌದು. ಅದು ಕೇವಲ ಅರಿವಲ್ಲ; ಏಕೆಂದರೆ 'ಗಗನದಿಂದ ಮೇಲೆ ಅನುಭಾವ ತಾನಿಲ್ಲ' ಎಂದಾಗ ಅದು ಲೋಕೋತ್ತರವಲ್ಲವೆಂಬುದು ಸ್ಪಷ್ಟವಾಗುತ್ತದೆ. 'ಅನುಭಾವ' ವೆಂಬುದು ಒಂದು ಬಗೆಯ ಸಂಬಂಧ. ಅದು ಧಾರ್ಮಿಕ ವ್ಯವಸ್ಥೆ, ಲೋಕದೃಷ್ಟಿಯ ಹಿನ್ನೆಲೆಯಲ್ಲಿ

ರೂಪುಗೊಳ್ಳುತ್ತದೆ ಆದ್ದರಿಂದಲೇ ಅಲ್ಲಮನ ಪ್ರಕಾರ 'ನಿಶ್ಯಬ್ದವೇ ಅನುಭಾವ' ಎಂಬ ಮಾತು ಅದರ ಗಾಂಭೀರ್ಯವನ್ನು, ವಿಶಾಲತೆಯನ್ನು ಮುಂದಿಡುತ್ತದೆ.

ಅನುಭಾವದ ಮುಖ್ಯ ಪ್ರಕ್ರಿಯೆ ಈ ಕ್ಷಣಿಕ ಜಗತ್ತಿನಿಂದ ದೂರವಾಗಿ ಅನಂತತೆಯೊಂದಿಗೆ ಬೆರೆಯುವುದು. ಈ ನಿರಾಕರಣೆಯೇ ಅನುಭಾವಿಗಳ ಅನುಭಾವದ ಹಾದಿಯಲ್ಲಿ ಮೊದಲ ಹೆಜ್ಜೆ. ಅನುಭಾವದ ನೆಲೆಯಲ್ಲಿ ದೇವರು ಮತ್ತು ಭಕ್ತನ ನಡುವೆ ದ್ವೈತ ಭಾವ ಕಾಣಿಸಿಕೊಳ್ಳುತ್ತದೆ. ವಚನಕಾರರ ಸಂದರ್ಭದಲ್ಲಿ ಗಮನಿಸಿದಾಗ, ದ್ವೈತ ಲಕ್ಷಣಗಳನ್ನು ಒಪ್ಪಿಕೊಳ್ಳುವ ಹಾಗೆಯೇ ನಿರಾಕಾರ ಸ್ವರೂಪವನ್ನು ಒಪ್ಪಿಕೊಳ್ಳುವ ಎರಡು ರೀತಿಯ ಅನುಭಾವ ಸ್ವರೂಪಗಳಿಗೆ ಒತ್ತುಕೊಟ್ಟಿರುವುದು ಕಂಡುಬರುತ್ತದೆ.

ಅಲ್ಲಮನಲ್ಲಿ ಕಾಣಿಸುವ ಅನುಭಾವದ ನೆಲೆಯಲ್ಲಿ ಭಕ್ತಿಪರಂಪರೆಯ ಭಾವನಾವೇಶದ, ಆತಂಕಭರಿತ ಉದ್ವೇಗ ಮನಸ್ಸುಗಳ ಚಿತ್ರಣವಿಲ್ಲ. ಅದಕ್ಕೆ ಪ್ರತಿಯಾಗಿ ವ್ಯಕ್ತಿಯಲ್ಲೇ ರೂಪುಗೊಳ್ಳಬೇಕಾದ ಆಧ್ಯಾತ್ಮಿಕ ಎತ್ತರದ ಸ್ವರೂಪವನ್ನು ಕುರಿತು ವ್ಯಾಖ್ಯಾನಿಸುತ್ತದೆ. ಅಲ್ಲಮನ ವಚನಗಳು ಮನುಷ್ಯನು ತನ್ನಲ್ಲೆ ತಾನು ದೈವತ್ವವನ್ನು ಕಾಣಬೇಕೆನ್ನುವ ನಿಷ್ಠುರ ವಿಚಾರವನ್ನು ಪ್ರತಿಪಾದಿಸುತ್ತವೆ. 'ಅನುಭಾವ' ದ ನೆಲೆಗೆ ಸಂಬಂಧಿಸಿ ಅಲ್ಲಮ ಭಕ್ತಿಪಂಥದ ದ್ವೈತಭಾವ ಹಾಗೂ ಸಾಕಾರ ಸ್ವರೂಪಗಳನ್ನು ನಿರಾಕರಿಸುತ್ತವೆ. ಆತನ ಪ್ರಕಾರ 'ಅನುಭಾವ' ವೆಂಬುದು ವ್ಯಕ್ತಿತ್ವದಲ್ಲೇ ರೂಪುಗೊಳ್ಳಬೇಕಾದ ಆಧ್ಯಾತ್ಮಿಕ ನೆಲೆಯ ಸ್ವರೂಪ.

ಅಂಗವಿಲ್ಲಾಗಿ ಅನ್ಯಸಂಗವಿಲ್ಲಯ್ಯ ।
ಅನ್ಯ ಸಂಗವಿಲ್ಲಾಗಿ ಮತ್ತೊಂದು ವಿವರಿಸಲಿಲ್ಲವಯ್ಯ ।
ಮತ್ತೊಂದು ವಿವರಿಸಲಿಲ್ಲಾಗಿ ನಿಸ್ಸಂಗವಾಯಿತಯ್ಯ ।
ಗುಹೇಶ್ವರ ನಿಮ್ಮ ನಾಮವಯ್ಯ ।

ಇಲ್ಲಿ ಅಲ್ಲಮ ಸಂಬಂಧದ ಸ್ವರೂಪವನ್ನು ನಿರಾಕರಿಸುತ್ತಾ, ಆ ಮೂಲಕ ದ್ವೈತ ಸ್ವರೂಪಿ ಅನುಭಾವದ ನಿರಾಕರಣೆಯನ್ನು ಮಾಡುತ್ತಾನೆ. ಎಲ್ಲರಿಗೂ ಸಾಧ್ಯವಾಗಬೇಕೆನ್ನುವ ಧಾರ್ಮಿಕ ಅನುಭಾವದ ಆಶಯಗಳು ಅತ್ಯಂತ ಆಳದಲ್ಲಿ ಕಿಂಚಿತ್ತೂ ಜ್ಞಾನದ ಸೆಲೆಗಳನ್ನು ತನ್ನನ್ನು ಕುರಿತಾದ ತನ್ನೊಳಗೆ ಇರುವ ಸಾಧ್ಯತೆಯ ನೆಲೆಗಳನ್ನೂ ತೋರಿಸಿಕೊಡಲಾಗದ ದ್ವೈತ ಸ್ವರೂಪದ ಇತಿಮಿತಿಗಳ ಬಗ್ಗೆ ಅಲ್ಲಮನ ವ್ಯಥೆ ಆತನ ಇನ್ನೊಂದು ವಚನದಲ್ಲಿ ವ್ಯಕ್ತವಾಗಿದೆ.

ವೀರಶೈವದ ಷಟ್ಸ್ಥಲದ ನೆಲೆಗಳು ಅನುಭಾವಿಯ ಸಾಧನೆಯ ತೀವ್ರತಮ ನೆಲೆಗಳಾಗುವುದರ ಬದಲು, ಕೇವಲ ಆಚಾರವಿಧಿಗೆ ಇಳಿಯುವ ಬಗೆಯನ್ನು ಅಲ್ಲಮನು ವಿರೋಧಿಸುತ್ತಾನೆ. ಪ್ರಾಣಲಿಂಗಿಸ್ಥಲ ಹಾಗೂ ಶರಣಸ್ಥಲದ ಪ್ರಾತಿನಿಧಿಕ ವಚನಗಳ ಹಿನ್ನೆಲೆಯಲ್ಲಿ ವಿಚಾರದ ಧಾಟಿ ಸ್ಪಷ್ಟವಾಗುತ್ತದೆ. ಲಿಂಗ ಹಾಗೂ ಅನುಭಾವಿಯ ಸಂಬಂಧವು ಕೇವಲ ಬಾಹ್ಯ ಆಚರಣೆಗೆ ಮಾತ್ರ ಸೀಮಿತವಾಗಿರುವುದನ್ನು ಕತ್ತಲೆಯ ಪ್ರತಿಮಾ ವಿಧಾನದ ವಚನದಲ್ಲಿ ಅಲ್ಲಮ ಈ ರೀತಿ ಹೇಳಿದ್ದಾನೆ;

'ಹಿಡಿದ ಕೈಯ ಮೇಲೆ ಕತ್ತಲೆಯಯ್ಯ
ನೋಡುವ ಕಂಗಳಮೇಲೆ ಕತ್ತಲೆಯಯ್ಯ
ನೆನೆವ ಮನದ ಮೇಲೆ ಕತ್ತಲೆಯಯ್ಯ
ಕತ್ತಲೆಯೆಂಬುದು ಇತ್ತಲೆಯಯ್ಯ
ಗುಹೇಶ್ವರನೆಂಬುದು ಅತ್ತಲೆಯಯ್ಯ

ಇಲ್ಲಿ ಇಂದ್ರಿಯಗಳು ಬಾಹ್ಯ ಆಚರಣೆಯ ಮೂಲಕ ಅನುಭಾವದ ಬೆಳವಣಿಗೆಗೆ ವ್ಯತಿರಿಕ್ತವಾಗಿರುವುದು ಕಂಡುಬರುತ್ತದೆ. ಕತ್ತಲೆ ಅಜ್ಞಾನದ ಗಾಢತೆಯ ಸಂಕೇತವಾಗಿ ಬಂದಿದೆ. ಆಚರಣೆಯನ್ನು ಮೀರಿದ ಅನುಭಾವದ ನೆಲೆಯನ್ನು ಸಾಧಿಸುವ ಬಗೆ ಹೇಗೆ? ಹೊರಗಿನ ಕುರುಹುಗಳು ಕೇವಲ ಬಾಹ್ಯ ಆಚರಣೆಗೆ ಸೀಮಿತವಾಗಿದೆ. ಆಹಾರವು ರಕ್ತಗತವಾಗುವಂತೆ ಲಿಂಗ –ದೈವ ಅನುಭವ– ಮನೋಗತ ಅನುಭಾವವಾಗಬೇಕೆಂಬ ಚಿಂತನೆ ಕಂಡುಬರುತ್ತದೆ. ಅಲ್ಲಮನಿಗೆ ಜಗತ್ತಿನ ಸಕಲ ಮಿತಿಯನ್ನು ಮೀರಿದ ಅರ್ಥಪೂರ್ಣ ನೆಲೆಯನ್ನು ಸಾಧಿಸುವ ಅನುಭಾವಿಯೇ ಮುಖ್ಯನಾಗುತ್ತಾನೆ. ಲೌಕಿಕ ಪ್ರಪಂಚದ ಎಲ್ಲ ಸಂಗತಿಗಳು ದೂರವಾಗಬೇಕೆನ್ನುವುದು ಅಲ್ಲಮನ ಪ್ರಜ್ಞಾಪೂರ್ವಕ ಚಿಂತನೆಯಾಗಿದೆ.

ಜ್ಞಾನ ಅರಿವುಗಳ ಸಾಧನೆಯನ್ನು ತನ್ನ ಅನುಭಾವದ ಹಂತದಲ್ಲಿ ತೀವ್ರವಾಗಿ ಪಡೆಯಬೇಕೆನ್ನುವುದೇ ಅಲ್ಲಮನ ಆಶಯ. ವಿವರಣೆಗೆ ದೊರೆಯದ ಅನುಭಾವ ಸ್ವರೂಪವನ್ನು ಅಲ್ಲಮನ ಮಾತುಗಳಲ್ಲೇ ಕೇಳುವುದಾದರೆ–

ಕಾಯವಿಡಿದು ಲಿಂಗವಿದೆ, ಲಿಂಗವಿಡಿದು ಕಾಯವಿದೆ
ಅರಿವುವಿಡಿದು ವಚನವಿದೆ, ವಚನವಿಡಿದು ತೋರುವ ಅರಿವಿದೆ
ಲಿಂಗಾಂಗವೆರಡೂ ನಿಮ್ಮಲ್ಲಿ ಐಕ್ಯವಾದ ಪರಿಯೆಂತು ಹೇಳಾ
ಸ್ವರವಿಡಿದು ಶಬುದ ಸಮರಸವಾದ ಪರಿ ಎಂತು ಹೇಳಾ
ದೇವ ಭಕ್ತನೆಂಬ ನಾಮಸೀಮೆಯಡಗಿ ಗೋಹೇಶ್ವರ ಲಿಂಗದಲ್ಲಿ
ತದುಗತವಾಗಿದ್ದ ಪರಿಯೆಂತು ಹೇಳಾ ಸಂಗನ ಬಸವಣ್ಣ

ಕಾಯ–ಲಿಂಗ, ಅರಿವು–ವಚನ ಸಮರಸವಾಗುವ ನೆಲೆಯೇ ಇಲ್ಲಿನ ಮುಖ್ಯ ಆಶಯವಾಗಿದೆ. ಬುದ್ಧಿಗೆ, ತರ್ಕಕ್ಕೆ ವಿವರಣೆಗೆ ಒಳಗಾಗದೆ ಅದು ಅನುಭಾವಿಯ ಒಟ್ಟು ವ್ಯಕ್ತಿತ್ವದಲ್ಲೇ ಸಾಧಿಸುವ ಬಗೆಯಾಗಿದೆ.

ಅಲ್ಲಮನ ಪ್ರಕಾರ ಭೌತ ಪ್ರಪಂಚವು ಸಂಪೂರ್ಣವಾಗಿ ನಿರಾಕರಿಸಲ್ಪಟ್ಟು ಆಧ್ಯಾತ್ಮಿಕ ಒಂಟಿತನ ಹಾಗೂ ಆ ವಾತಾವರಣದಲ್ಲಿ ಸಾಧಿತವಾಗುವ ಅನುಭಾವದ ನೆಲೆಯೇ ಅಥೆಂಟಿಕ್ ಆಗಿದೆ. ಈತನ

ಪ್ರಕಾರ ಗುರು ಮತ್ತು ಶಿಷ್ಯ ಸಂಬಂಧವು ಅನುಭಾವಿಯ ಭಿನ್ನ ಅವಸ್ಥೆಗಳು. ಶಿಷ್ಯ ತನ್ನ ಅರಿವಿನ ಪರಿಧಿಯನ್ನು ವಿಸ್ತರಿಸುತ್ತಾ ತಾನೇ ಗುರುವಾಗುತ್ತಾನೆ. ಲೌಕಿಕದ ಮಿತಿಯ ಸಂಬಂಧವನ್ನು ಮೀರುತ್ತಾನೆ. ಆದ್ದರಿಂದ ತನ್ನೊಳಗಿನ ಅರಿವಿನ ಗುರುವನ್ನು ತಾನೇ ಅರಿಯುವುದೇ ಅನುಭಾವ. ಅದನ್ನು ಅರಿತವನೇ ಅನುಭಾವಿ. ಪ್ರಾಪಂಚಿಕ ವಿಚಾರಗಳು ಜೀವಿಗಳನ್ನು ಭವಸಾಗರದಲ್ಲಿ ತೊಳಲಾಡುವಂತೆ ಮಾಡುತ್ತದೆ. ಆದ್ದರಿಂದಲೇ ವ್ಯಕ್ತಿ ಅನುಭಾವ ಸಾಧನೆಯ ಎಲ್ಲ ಹಂತಗಳಲ್ಲಿಯೂ ಲೌಕಿಕದ ಸೂಕ್ಷ್ಮಗಳಿಂದ ದೂರವಿರಬೇಕು. ದ್ವಂದ್ವವನ್ನು ಮೀರುವ ಈ ಹುಡುಕಾಟ ವ್ಯಕ್ತಿತ್ವದಲ್ಲಿ ಹೊಸ ಸತ್ಯವನ್ನು ಪಡೆಯುವುದೇ ಆಗಿದೆ.

ಅಲ್ಲಮನು ಆಚರಣೆಗೆ ಒಳಗಾದ ಎಲ್ಲ ಧಾರ್ಮಿಕ ಕ್ರಿಯೆಗಳನ್ನು ವಿಮರ್ಶಿಸುತ್ತಾನೆ. ಸಾಮಾಜಿಕ ಭದ್ರತೆಯ ನೆಲೆಯಿಂದ ಇವು ಮುಖ್ಯವಾದೂ ವ್ಯಕ್ತಿಗತ ಬೆಳವಣಿಗೆಯ ದೃಷ್ಟಿಯಿಂದ ನಿರಾಕರಿಸಲ್ಪಟ್ಟಿವೆ. ಆ ಕಾರಣದಿಂದಲೇ ಅಲ್ಲಮ ಏಕಕಾಲದಲ್ಲಿ ವೈದಿಕ, ಜೈನ ಹಾಗೂ ವೀರಶೈವದ ಆಚರಣೆಗಳ ವಿರೋಧವನ್ನು ವ್ಯಕ್ತಪಡಿಸುತ್ತಾನೆ. ಲಿಂಗವು ಕೇವಲ ಕುರುಹಾಗಿರುವುದನ್ನು ಷಟ್ಸ್ಥಲದ ಅನುಭಾವದ ನೆಲೆಗಳು ಕೇವಲ ಆಚರಣೆಗೆ ಸೀಮಿತವಾಗಿರುವುದು. ಜಂಗಮ, ಭಕ್ತಿ ತೋರಿಕೆಯ ನೆಲೆಯಾಗಿರುವುದು, ಭವಿ-ಭಕ್ತ ವರ್ಗೀಕರಣ-ಇತ್ಯಾದಿ ಶುಷ್ಕ ಆಚರಣೆಗಳನ್ನು ವಿರೋಧಿಸುತ್ತಾನೆ. ಈ ಎಲ್ಲವೂ ಅನುಭಾವಿಯ ಅರಿವಿನ ಹಾಗೂ ಆಧ್ಯಾತ್ಮದ ಬೆಳವಣಿಗೆಗೆ ಅಡ್ಡಿಯಾಗುತ್ತದೆಂಬುದೇ ವಿರೋಧಕ್ಕೆ ಕಾರಣವಾಗಿದೆ. ವೇದ, ಶಾಸ್ತ್ರ, ಪುರಾಣಗಳನ್ನು ವಿಮರ್ಶಿಸುತ್ತಾ ಅವು ಮನುಷ್ಯನ ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯ ಮಾಡಲಿಲ್ಲವೆನ್ನುತ್ತಾರೆ. 'ಸಾಯದ ಮುನ್ನ ಸ್ವಯವರಿದಡೆ' ಎನ್ನುವ ಮಾತು ಅಲ್ಲಮನು ಅನುಭಾವಿಯ ವೈಯಕ್ತಿಕ ಸಾಧನೆಗೆ ಕೊಡುವ ಮಹತ್ವವನ್ನೇ ವಿವರಿಸುತ್ತದೆ. ವೀರಶೈವದ ಅನುಭಾವಿ ಆಶಯಗಳೇ ಕೇವಲ ಆಚರಣೆಗಳಾಗಿ ಬಿಡುವ ಅಪಾಯನ್ನು ತನ್ನ ವಚನಗಳಲ್ಲಿ ವಿವರಿಸುತ್ತಾನೆ.

ಒಳಗ ತೊಳೆಯಲರಿಯದೆ
ಹೊರಗ ತೊಳೆದು ಕುಡಿಯುತ್ತಿದ್ದರಯ್ಯ
ಪಾದೋದಕ ಪ್ರಸಾದವನರಿಯದೆ
ಬಂದ ಬಟ್ಟೆಯಲ್ಲಿ ಮುಳುಗುತ್ತೈದಾರೆ ಗುಹೇಶ್ವರ

'ಪ್ರಸಾದಿ ಸ್ಥಲ' ಈ ವಚನವು ಪ್ರಸಾದ, ಪಾದೋದಕ ಕ್ರಿಯೆಗಳು ಕೇವಲ ಆಚರಣೆ ಕ್ರಿಯೆಗಳಾಗಿ ಮಾರ್ಪಟ್ಟಿರುವ ನೆಲೆಯನ್ನು ಸೂಚಿಸುತ್ತದೆ. ಯಾವುದು ಅನುಭಾವಿಯ ವ್ಯಕ್ತಿತ್ವವನ್ನು ರೂಪಿಸುವ ಕ್ರಿಯಾತ್ಮಕ ನೆಲೆಯಾಗಿ ರೂಪುಗೊಳ್ಳಬೇಕಿತ್ತೊ ಅದು ಕೇವಲ ಬಾಹ್ಯಚರಣೆಗೆ ಮಾತ್ರ ಕಾರಣವಾಗಿರುವುದನ್ನು ವಚನಗಳು ತಿಳಿಸುತ್ತವೆ. ಲಿಂಗವು ಬರಿಯ ಕುರುಹಾಗಿ ಬಿಟ್ಟಿರುವುದನ್ನು ಹೇಳುವ ಅನೇಕ ವಚನಗಳು ಅಲ್ಲಮನಲ್ಲಿ ದೊರೆಯುತ್ತವೆ. ಹಾಗೆಯೇ ಭವಿ-ಭಕ್ತನನ್ನು ಅನುಭಾವದ ತೀವ್ರ

ಒಳಗಾಗುವಿಕೆಯ ಸ್ವರೂಪದಿಂದ ಗುರುತಿಸಬೇಕೆ ವಿನಾ ಬಾಹ್ಯ ತೋರಿಕೆಯ ಲಿಂಗದ ವಸ್ತುವನ್ನು ಧರಿಸಿಕೊಂಡಿರುವ ನೆಲೆಯಲ್ಲಿ ಅಲ್ಲ. ಆದ್ದರಿಂದಲೇ ಅಲ್ಲಮ ಸಮೂಹವನ್ನು ಪ್ರತಿನಿಧಿಸುವ ಅಂಶಗಳನ್ನು ತಿರಸ್ಕರಿಸುತ್ತಾ, ಪರ್ಯಾಯವಾಗಿ ತನ್ನೊಳಗಿನ ಅರಿವಿನ ಬೆಳಕನ್ನು ಅರಿತವನೇ ಅನುಭಾವಿ ಎಂದಿದ್ದಾನೆ. ಹೀಗೆ ಅನುಭಾವದ ಕುರಿತು ಅಲ್ಲಮ ಹೊಸ ಅರಿವಿನ ಸಾಧನೆಯ ಕ್ರಿಯೆಗೆ ಪ್ರಾಮುಖ್ಯತೆ ನೀಡಿದ್ದಾನೆ.

ಕೊನೆ ಟಿಪ್ಪಣಿ

1. ಡಾ .ಎಸ್. ಬಸವರಾಜು	:	ಅಲ್ಲಮನ ವಚನ ಚಂದ್ರಿಕೆ ನಳನೀಶಂಕರ ಪ್ರಕಾಶನ ಮೈಸೂರು 1990. ಪುಟ ಸಂಖ್ಯೆ 3
2. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 15
3. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 17
4. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 22
5. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 31
6. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 32
7. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 37
8. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 43
9. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 50
10. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 51
11. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 52
12. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 56
13. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 60
14. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 67
15. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 68
16. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 68
17. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 77
18. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 80
19. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 80
20. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 81
21. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 83
22. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 86
23. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 91
24. ಅಲ್ಲಮನ ವಚನ ಚಂದ್ರಿಕೆ	:	ಪುಟ ಸಂಖ್ಯೆ 97

25. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 98

26. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 105

27. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 114

28. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 115

29. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 128

30. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 131

31. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 175

32. ಎಲ್ ಬಸವರಾಜು (ಸಂ) : 'ಅಲ್ಲಮನ ವಚನಗಳು' ಗೀತಾಬುಕ್ ಹೌಸ್ ಮೈಸೂರು 1969 ಪು. ಸಂ. 107

33. ಅಲ್ಲಮನ ವಚನಗಳು : ಪುಟ ಸಂಖ್ಯೆ 107

34. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 114

35. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 114

36. ಅಲ್ಲಮನ ವಚನಗಳು : ಪುಟ ಸಂಖ್ಯೆ 132

37. ಶ್ರೀ. ಈ. ಫ಼ಿ. ಶಾಸ್ತ್ರಿ : ಅಲ್ಲಮ ಪ್ರಭು ಪಾರು ಪ್ರಕಾಶನ ಗದಗ 2009 ಪು.ಸಂ. 73

38. ಅಲ್ಲಮ ಪ್ರಭು : ಪುಟ ಸಂಖ್ಯೆ 78

39. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 56

40. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 90

41. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 81

42. ಅಲ್ಲಮನ ವಚನ ಚಂದ್ರಿಕೆ : ಪುಟ ಸಂಖ್ಯೆ 103

43. ಮಲ್ಲೇಪುರಂ ಜಿ. ವೆಂಕಟೇಶ್ : ತಿಳಿವ ತೇಜದ ಮುಂದೆ, ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ –೧೯೯೬ ಪು. ಸಂ. ೭೯

ಅಧ್ಯಾಯ : ೬

'ಅರಿವಿ'ನ ಚಿಂತನೆ: ಆಧುನಿಕ ನೆಲೆಗಳು

೬.೧ ಆಧುನಿಕ ಚಿಂತನೆ ಮತ್ತು ಅಲ್ಲಮ

೬.೨ 'ಅರಿವು'- 'ಇರವು' ತಾತ್ತ್ವಿಕ ವಿಶ್ಲೇಷಣೆ

ಅಧ್ಯಾಯ : ೬

'ಅರಿವಿ'ನ ಚಿಂತನೆ: ಆಧುನಿಕ ನೆಲೆಗಳು

೬.೧ ಆಧುನಿಕ ಚಿಂತನೆ ಮತ್ತು ಅಲ್ಲಮ

೬.೨ 'ಅರಿವು'– 'ಇರವು' ತಾತ್ತ್ವಿಕ ವಿಶ್ಲೇಷಣೆ

೬.೧ ಆಧುನಿಕ ಚಿಂತನೆ ಮತ್ತು ಅಲ್ಲಮ

ಮಧ್ಯಕಾಲೀನ ಕಾಲಘಟ್ಟದಲ್ಲಿ ಬೆಳೆದು ಬಂದ ಭಕ್ತಿಪಂಥದ ಹಿನ್ನೆಲೆಯಲ್ಲಿ ಒಂದು ಕ್ರಾಂತಿಕಾರಕ ಚಳುವಳಿಯ ಸ್ವರೂಪ ಕಾಣಿಸಿಕೊಳ್ಳುತ್ತದೆ. ಸಮಾಜ, ಧರ್ಮ, ಅಭಿವ್ಯಕ್ತಿ, ಹೀಗೆ ಬದುಕಿನ ಎಲ್ಲಾ ಆಯಾಮಗಳಲ್ಲಿ ಒಂದು ಸ್ವಂತಿಕೆಯ ನಿಲುವನ್ನು ಪ್ರತಿಪಾದಿಸಿರುವುದು ಕಂಡುಬರುತ್ತದೆ. ಸಾಂಸ್ಥಿಕವಾದ ಎಲ್ಲ ಚೌಕಟ್ಟುಗಳನ್ನು ಮುರಿದು ಅನ್ವೇಷಣಾತ್ಮಕ ನೆಲೆಯಲ್ಲಿ ಬದುಕನ್ನು ಚಿಂತನೆಗಳನ್ನು ಆ ಮೂಲಕ ಸಮಾಜವನ್ನು ಗ್ರಹಿಸಿಕೊಂಡ ನೆಲೆ ಮುಖ್ಯವಾಗುತ್ತದೆ. ಭಕ್ತಿಪಂಥದ ನೆಲೆಗಳನ್ನು ಅರ್ಥಪೂರ್ಣವಾಗಿ ಸಮಾಜದಲ್ಲಿ, ಅಭಿವ್ಯಕ್ತಿ, ಮಾಧ್ಯಮಗಳಲ್ಲಿ ನೆಲೆಗೊಳಿಸಿದ ವಚನಕಾರರ ಚಿಂತನಾಕ್ರಮಗಳು ನಮಗೆ ಮುಖ್ಯವಾಗುತ್ತವೆ. 'ಭಕ್ತಿ' ಎಂಬ ಕೇಂದ್ರ ಸ್ಥಾಯಿಯಲ್ಲಿ ಜ್ಞಾನ-ಅರಿವು, ಅಂಗ-ಲಿಂಗ, ಕಾಯಕ-ಭಕ್ತಿ ಮಾರ್ಗಗಳ ವಿವೇಚನೆ ನಡೆಸಿದ ವಚನಕಾರರು ತಮ್ಮೆಲ್ಲಾ ಆಲೋಚನಾ ಕ್ರಮಗಳಲ್ಲಿ ವಿಶಿಷ್ಟತೆಯನ್ನು ತೆರೆದಿದ್ದಾರೆ. ಜ್ಞಾನ, ಅರಿವು ಅನುಭಾವದ ನೆಲೆಗೆ ಸಂಬಂಧಿಸಿ ಬೇರೆ ಬೇರೆ ವಚನಕಾರರು ತಮ್ಮದೇ ಆದ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಈ ಚಿಂತನೆಗಳಲ್ಲಿ 'ಅಲ್ಲಮ' ನಲ್ಲಿ ಕಾಣಿಸಿಕೊಳ್ಳುವ ಜ್ಞಾನ-ಅರಿವು ಅನುಭಾವದ ನೆಲೆಗಳ ಕುರಿತ ವಿಶ್ಲೇಷಣೆ ಈ ಹಿಂದಿನ ಅಧ್ಯಾಯಗಳಲ್ಲಿ ಮಾಡಲಾಗಿದೆ. ಪ್ರಸ್ತುತ ಆಧುನಿಕ ಸಂದರ್ಭದಲ್ಲಿ ಗತದ ಚರಿತ್ರೆಯನ್ನು, ಅಭಿವ್ಯಕ್ತಿಯ ನೆಲೆಗಳನ್ನು ಅಂದಿನ ಸಾಂಸ್ಕೃತಿಕ ಬದುಕನ್ನು ಅಧ್ಯಯನ ಮಾಡುವಾಗ ಮೂಡುವ ಚಿಂತನೆಗಳೇನು? ಎಂಬುದು ಈ ಅಧ್ಯಾಯದಲ್ಲಿ ವಿಶ್ಲೇಷಿಸುವ ಮುಖ್ಯ ವಿಚಾರ.

ಆಧುನಿಕ ತತ್ತ್ವಜ್ಞಾನಿಗಳು, ಸಂಸ್ಕೃತಿ ಚಿಂತಕರು ವಚನಗಳನ್ನು ಓದಿಕೊಳ್ಳುವ, ವಚನಕಾರರ ವ್ಯಕ್ತಿತ್ವವನ್ನು ಗ್ರಹಿಸಿಕೊಳ್ಳುವ ಸಂದರ್ಭದಲ್ಲಿ ತಮ್ಮದೇ ಆದ ಕೆಲವು ಚಿಂತನೆಗಳನ್ನು ಪ್ರತಿಪಾದಿಸಿದ್ದಾರೆ. ಇದು ಒಬ್ಬ ಸಂಸ್ಕೃತಿ ಚಿಂತಕನಿಂದ ಇನ್ನೊಬ್ಬರಲ್ಲಿ ಭಿನ್ನವಾಗಿರುವುದು ಕಂಡುಬರುತ್ತದೆ. ಇಂತಹ ಕೆಲವು ಆಧುನಿಕ ಅರಿವಿನ ಚಿಂತಕರ ವಿಚಾರಧಾರೆಗಳನ್ನು ಇಲ್ಲಿ ಸಾಂದರ್ಭಿಕವಾಗಿ ವಿಶ್ಲೇಷಿಸಲಾಗುವುದು.

ಕನ್ನಡದ ಗಾರುಡಿಗ, ಮಾಂತ್ರಿಕ ಕವಿ ದ.ರಾ.ಬೇಂದ್ರೆಯವರು ಒಂದೆಡೆ-

'ಅರಿವೆಂಬ ರವಿಯು ಮೂಡಲು!
ಗುರುವೆಂಬಾತ್ಮಾರವಿಂದವರಳಿತು ನನ್ನೊಳ್॥
ಕರ ಮುಗಿದು ಶಿರವ ಬಾಗಿಸಿ
ಮೊರೆಹೋಗುವೆನು ಗುರುವಿಗರಿಗಿಂದೂ ಮುಂದೂ'॥[1]

ಇಲ್ಲಿ ಅಲ್ಲಮನ ವಿಚಾರಧಾರೆಯ ಪ್ರತಿಫಲನವನ್ನು ಕಾಣಬಹುದು. 'ಅರಿವೆ'ಂಬ ರವಿಯ ಬೆಳಕು ಮೂಡಲು ಗುರುವಿನ ಆತ್ಮಜ್ಞಾನವು ಎನ್ನೊಳು ಉದಯಿಸಿತು. ಎಂಬ ಕವಿವಾಣಿಯಲ್ಲಿ ಅರಿವಿನ ಮಹತ್ತು

ವ್ಯಕ್ತವಾಗಿದೆ. ಹಾಗೆಯೇ ಮುಂದುವರಿದು 'ಗುರುವಿಗರಿವಿಗಿಂದೂ' ಎಂಬ ಮಾತನ್ನು ಗಮನಿಸಿದರೆ ಜ್ಞಾನ ಪಥವನ್ನು ತೋರಿದ ಗುರುವಿಗೆ ಆತ್ಮಜ್ಞಾನ ಉದಯಿಸಲು ಕಾರಣವಾದ 'ಅರಿವಿಗೆ' ಸದಾ ಶರಣಾಗುವ ಸಮರ್ಪಣಾ ಭಾವವಿದೆ. ಇದೇ ಭಾವ ವಚನಕಾರರಲ್ಲೂ ಕಾಣಸಿದೆ. ತಮ್ಮ ಆರಾಧ್ಯದೈವದ ಮುಂದೆ ಎಲ್ಲ ಹಂಗು ತೊರೆದು ಶರಣಾಗುವ ಸಮರ್ಪಣಾ ಭಾವ ಅಲ್ಲಿದ್ದರೆ ಇಲ್ಲಿ, ಅರಿವಿಗೆ, ತಿಳಿವಿಗೆ ಕಾರಣವಾದ ಪ್ರಕೃತಿಗೆ ಸದಾ ಋಣಿಯಾಗುವ ಕೃತಜ್ಞತಾ ಭಾವ ವ್ಯಕ್ತವಾಗಿದೆ. ಅಲ್ಲಮನ 'ಅರಿವು' 'ಇರವು' 'ಮರಹು' ಪರಿಭಾಷೆಗಳಿಗೆ ಪೂರಕವಾಗಿ ಬೇಂದ್ರೆಯವರ ಈ ಕವಿತೆಯನ್ನು ವಿವರಿಸಿಕೊಳ್ಳಬಹುದು:

'ಇರವಿಗೂ ಅರಿದೇನು? ಇರವೆ ಅರಿದರಿದು; ಮೇ
ಣಿದುವೆ ಅದ್ಭುತ ರಮ್ಯ ಶ್ರೀ ವಿಭೂತಿ
ಕಂಡುದನೆ ಕೊನೆಯೆಂದು ಕಣ್ಣು ಬಣ್ಣಿಸುತ್ತಿತ್ತು
ಅರಿವು ಒಡನುಡಿಯಿತ್ತು, ನೇತಿ ನೇತಿ'[2]

ಇಲ್ಲಿ ಪ್ರಕೃತಿಯ ಅದ್ಭುತವನ್ನು ಮುಂದಿಡುತ್ತಾ 'ಇರವು-ಅರಿವು' ಪರಿಭಾಷೆಗಳನ್ನು ವಿಶ್ಲೇಷಿಸುತ್ತಾರೆ. ಪ್ರಕೃತಿಯ ಇರುವಿನಲ್ಲಿ ಒಂದು ಕಿರಿದಾದ ಬೀಜ ದೊಡ್ಡ ಆಲದ ಮರದ ಇರುವಿಕೆಗೆ ಕಾರಣವಾಗಬಹುದು. ಒಂದು ಕಿಡಿ, ಕಣಗಳಲ್ಲೂ ಇನ್ನೊಂದು ಅದ್ಭುತ ಸೃಷ್ಟಿಯ ಸೆಲೆಯಿದೆ. ಆದ್ದರಿಂದ ಇರವಿನ ಅಂದರೆ ದೃಷ್ಟಿಗೆ ಗೋಚರವಾದ ಹಾಗೆಯೇ ಅಗೋಚರವಾದುದರಲ್ಲಿಯೂ ಅಡಗಿರುವ ಅದ್ಭುತವನ್ನು 'ಅರಿವಿ'ಗೆ ತಂದುಕೊಳ್ಳಬೇಕಾದ ನೆಲೆಯನ್ನೂ ಈ ಕವಿತೆ ಮುಂದಿಡುತ್ತದೆ. ಕಣ್ಣಿಗೆ ಗೋಚರವಾದದ್ದು ಮಾತ್ರ ಅದ್ಭುತ ಸತ್ಯವಲ್ಲ. ಜ್ಞಾನದ ಮೂಲಕ ಹೊಂದುವ ಅರಿವಿನ ಪಥದಲ್ಲಿ ನಮ್ಮದಾಗಿಸಿಕೊಳ್ಳುವ ಸೃಷ್ಟಿಯ ರಹಸ್ಯ, ಆತ್ಮಜ್ಞಾನದ ನೆಲೆ ಬೆರಗು ಹುಟ್ಟಿಸುವಂಥದ್ದು.

ಆಧುನಿಕ ಸಂಸ್ಕೃತಿ ಚಿಂತಕರಾದ ಓ.ಎಲ್.ನಾಗಭೂಷಣ ಸ್ವಾಮಿಯವರು ಅಲ್ಲಮನ ವಿಚಾರಗಳ ಹಿನ್ನೆಲೆಯಲ್ಲಿಯೇ ಆಧುನಿಕ ಸನ್ನಿವೇಶದಲ್ಲಿ 'ಅರಿವಿ'ನ ಸಂಕಥನವನ್ನು ನಡೆಸುತ್ತಾರೆ. ವಚನಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅಲ್ಲಿ ಬರುವ ಸರ್ವನಾಮಗಳನ್ನೂ ತಾನೇ ಎಂದು ಪರಿಭಾವಿಸುತ್ತಾ ಹೊಸ ಓದಿನ ಕ್ರಮಕ್ಕೆ ತೆರೆದುಕೊಳ್ಳುತ್ತಾರೆ. [3] ಅವರ ಪ್ರಕಾರ ಈ ಬಗೆಯ ಓದಿನ ಕ್ರಮದಿಂದ ಒದಗುವ ಜ್ಞಾನವೇ ವಿಭಿನ್ನವಾದದ್ದು. ಆಗ ಶರಣನ 'ಅರಿವು' ನಮ್ಮದೇ 'ಅರಿವು' ಆಗಿಬಿಡುತ್ತದೆ ಮತ್ತು ಆ ದಿಸೆಯಲ್ಲಿ ನಮ್ಮನ್ನು ನಡೆಯುವಂತೆ ಪ್ರೇರೆಪಿಸುತ್ತದೆ. ಆದ್ದರಿಂದ ಅಲ್ಲಮನ ಅರಿವಿನ ವಿಚಾರಗಳನ್ನು ಓದುತ್ತಾ, ಗುಹೇಶ್ವರಲಿಂಗದೊಡನೆ ನಡೆಸುವ ಸಂವಾದವೇ ಆಗಿ ಬಿಡುತ್ತದೆ. ಆ ಮೂಲಕ ಅರಿವಿನ ಕುರಿತು ಹೊಸ ವ್ಯಾಖ್ಯಾನವನ್ನು ಕಂಡುಕೊಳ್ಳಲು ಸಾಧ್ಯವಾಗಬಹುದು. ತತ್ತ್ವಶಾಸ್ತ್ರ ಜ್ಞಾನಶಾಸ್ತ್ರಗಳ ಹಿನ್ನೆಲೆಯಲ್ಲಿ ದೇಸಿಯತೆಯ ನೆಲೆಗಳನ್ನು ಗ್ರಹಿಸಲು ಸಾಧ್ಯವಿದೆ. ಸಾಮಾಜಿಕ, ಸಾಂಸ್ಕೃತಿಕ , ಧಾರ್ಮಿಕ ಹೀಗೆ ಬದುಕಿನ ಎಲ್ಲ ವಲಯಗಳಲ್ಲಿಯೂ ನಡುವಿರುವ ಭೇದಗಳು ಮರೆಯಾಗುವ ಚಿಂತನೆಯನ್ನು

ಮುಂದಿಡುತ್ತಾರೆ. ಅನುಭಾವ ಅರಿವಿಗಿಂತ ಐಡಿಯಾಲಜಿಯೇ ಮುಖ್ಯವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಧರ್ಮದ ಬೇರುಗಳು ಅಲುಗದೆ ಉಳಿದಿದ್ದರೂ ಸಮಾಜದಲ್ಲಿ ಅಸಹನೀಯವಾದ ಬಿರುಕುಗಳನ್ನು ಮೂಡಿಸುತ್ತಿವೆ. ವ್ಯಕ್ತಿಗಳಾಗಿ ನಮ್ಮ ನಮ್ಮ ನೆಲೆಗಳನ್ನು ಅರಿಯಬೇಕಾದ ಜವಾಬ್ದಾರಿ ಇಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿದೆ. ಆದ್ದರಿಂದಲೇ ಅಲ್ಲಮ ಹೇಳುವ ಆತ್ಮಜ್ಞಾನದ ಅರಿವು ಇಂದಿಗೂ ಪ್ರಸ್ತುತವಾಗುತ್ತದೆ.

ಶೈವಧರ್ಮಗಳನ್ನು ಅವುಗಳ ಚಾರಿತ್ರಿಕ ದೃಷ್ಟಿಯಲ್ಲಿ ಸಮೀಕ್ಷಿಸುವ ಡಿ.ಆರ್. ನಾಗರಾಜ್ ಅವರಿಗೆ ಶೈವ ಸಾಹಿತ್ಯ ಮೀಮಾಂಸೆಯ ನೆಲೆಗಳು ಮುಖ್ಯವಾಗುತ್ತವೆ. ಅನುಭಾವಜಗತ್ತಿನ ಮೇರುಮೂರ್ತಿ ಅಲ್ಲಮನ ಕಾಯಸಿದ್ಧಾಂತ, ಜೀವನದ ಕಥಾನಕಗಳ ಹಿನ್ನೆಲೆಯಲ್ಲಿ ಚರಿತ್ರೆಯ, ಆಧುನಿಕ ಪೂರ್ವ ಸಾಹಿತ್ಯದಲ್ಲಿನ ಅರಿವು ವಿಶ್ಲೇಷಣೆಗೆ ಒಳಗಾಗುತ್ತದೆ.

ಬದುಕಿನ ಎಲ್ಲ ಹೊಸತನಗಳಿಗೆ, ಆಧುನಿಕತೆಗೆ ತೆರೆದುಕೊಳ್ಳುತ್ತಿರುವ ನಾವು ನಮ್ಮನ್ನು ನಾವೇ ಮರೆಯುವಂತೆ ಮಾಡುತ್ತಿದೆ. ಚರಿತ್ರೆಯ, ಸಂಸ್ಕೃತಿಯ ಗತಿಶೀಲತೆಯ ಅಧ್ಯಯನ ಮಾಡುತ್ತಾ, ವರ್ತಮಾನದ ಸಂವರ್ಧನೆಗಾಗಿ ಪ್ರಯತ್ನಿಸುವ ನೆಲೆ ಬಸವರಾಜ ಕಲ್ಗುಡಿಯವರ 'ಅರಿವಿ'ನ ಚಿಂತನೆಯ ಭಾಗವಾಗಿದೆ ಮಧ್ಯಕಾಲೀನ ಸಮಾಜದ ಅನುಭಾವ ಮತ್ತು ಸಾಂಸ್ಕೃತಿಕ ಸಮಸ್ಯೆಯ ಹುಡುಕಾಟದ ಮೂಲಕ ವರ್ತಮಾನದ ಹುಡುಕಾಟವು ಇರುವುದು ಕಂಡುಬರುತ್ತದೆ. ಅಲ್ಲಮನ ಅಥವಾ ಇತರ ವಚನಕಾರರ ಜ್ಞಾನ–ಅರಿವಿನ ನೆಲೆಗಳನ್ನು ಹುಡುಕಾಟ ನಡೆಸುತ್ತಾ ಪ್ರಸ್ತುತದಲ್ಲಿ ನಮ್ಮ ಕುರಿತು ನಾವೇ ಮಾಡಬೇಕಾದ ಶೋಧದ ನೆಲೆಯನ್ನು ಮುಂದಿಡುತ್ತಾರೆ.

ಸಮಕಾಲೀನ ಸಂದರ್ಭದ ಸಂಸ್ಕೃತಿ ಚಿಂತಕ ಮಲ್ಲೇಪುರಂ ಜಿ. ವೆಂಕಟೇಶ್ ಅವರು ವಸಾಹತೋತ್ತರ ಸಮಾಜದಲ್ಲಿ 'ಅರಿವು' 'ಇರವು' 'ಮರೆವು' ಗಳ ಸಾಂಸ್ಕೃತಿಕ ಮುಖಾಮುಖಿಯನ್ನು ಮುಂದಿಡುತ್ತಾರೆ. ಇಂದಿನ ಅನೇಕ ತವಕ, ತಲ್ಲಣಗಳನ್ನು ಜಗತ್ತಿನಾದ್ಯಂತ ಕಾಡುವ ಸಂಗತಿಗಳನ್ನು ನಿರ್ವಚಿಸುತ್ತಾರೆ. ನವಾಧುನಿಕತೆಯಲ್ಲಿ ನಾವು ಮೈಗೂಡಿಸಿಕೊಳ್ಳುತ್ತಿರುವ ಅಮಾನವೀಯ ಗುಣಗಳನ್ನೊಮ್ಮೆ 'ಅರಿವಿ'ನ ನೆಲೆಯಲ್ಲಿ ಇಟ್ಟು ವಿಶ್ಲೇಷಿಸಬೇಕಾದ ಅನಿವಾರ್ಯತೆಯನ್ನು ಗ್ರಹಿಸುತ್ತಾರೆ. ಬಹುಮುಖಿ ಸಂಸ್ಕೃತಿಯನ್ನು ನಾಶಮಾಡಿ ಏಕಮುಖಿ ನೆಲೆಯನ್ನು ಸೃಷ್ಟಿಸುವ ಒಳಗಿನ ಶಕ್ತಿಗಳನ್ನು ತಿರಸ್ಕರಿಸುವುದು. ಆಧುನಿಕ ಪ್ರಜ್ಞೆಯ ಪ್ರವಾಹಕ್ಕೆ ವಿರುದ್ಧವಾಗಿ ಸಾಗುವ, ಆ ಮೂಲಕ ಭೂತದ ಜ್ಞಾನಭಿತ್ತಿಯನ್ನು ತೆರೆದು ತೋರುತ್ತ ವರ್ತಮಾನದಲ್ಲಿ ಅದಕ್ಕೆ ಸ್ಪಂದಿಸುವ ಪ್ರಕ್ರಿಯೆ ಮಲ್ಲೇಪುರಂ ಅವರ ಚಿಂತನೆಯಲ್ಲಿ ಮುಖ್ಯವಾಗುತ್ತದೆ. ಹಾಗೆ ಯಜಮಾನ ಸಂಸ್ಕೃತಿಯ ಎದುರಿಗೆ ದೇಸಿ ಚಿಂತನಾಕ್ರಮಗಳನ್ನು ಒಡ್ಡುವ ಮೂಲಕ ಪ್ರಸ್ತುತದಲ್ಲಿ ಪರಂಪರೆಯ ಚಿಂತನೆಗಳ ಮಹತ್ವವನ್ನು ಎತ್ತಿಹಿಡಿಯುವ ಪ್ರಯತ್ನವಿದೆ.

ಹೀಗೆ ಆಧುನಿಕ ಸಂದರ್ಭದಲ್ಲಿ ಅಲ್ಲಮನ ಅರಿವಿನ ಚಿಂತನೆ, ಮರುವ್ಯಾಖ್ಯಾನಗಳು ಅದರ ಪ್ರಸ್ತುತತೆಯ ಬಗೆಗೆ ಚಿಂತನೆ ನಡೆಯುತ್ತಿದೆ. ಆಧುನಿಕತೆ ಬೆಳೆದಂತೆ ಹೊಸ ರೀತಿಯ ಜೀವನಶೈಲಿ, ಸಂಸ್ಕೃತಿ, ಸಂಸ್ಕಾರಗಳು ಬೆಳೆಯುತ್ತಿವೆ. ಬೌದ್ಧಿಕವಲಯದಲ್ಲೂ ಹೊಸ ಪರಿಭಾಷೆ, ಪರಿಕಲ್ಪನೆಗಳೆಡೆಯಲ್ಲಿ ನಮ್ಮ ಸ್ಥಳೀಯ ಪಾರಂಪರಿಕ, ದೇಸಿ ವಿಚಾರಧಾರೆಗಳು ನಲುಗಿ ಹೋಗುತ್ತಿವೆ. ಪರಿಣಾಮವಾಗಿ ಸಂಕುಚಿತ ದೃಷಿಕೋನ, ಸಂಕುಚಿತ ಮನಸ್ಸುಗಳು, ವಿಷ, ಅಮೃತ, ಜತೆಗೆ ಹುಟ್ಟಿಬರುವಂತೆ ಕಾಣಿಸಿಕೊಳ್ಳುತ್ತದೆ. ಸಂಸ್ಕೃತಿಯ ಪ್ರಧಾನ ಧಾರೆಯನ್ನು ಬೆಳೆಸಿದ ಅನುಭಾವಿಗಳು ಇಂದು ಅಧೀನ ಸಂಸ್ಕೃತಿಯಲ್ಲಿ ತಿರಸ್ಕೃತವಾಗುತ್ತಿದ್ದಾರೆ. ಆಕ್ರಮಣಶೀಲ ಬದುಕಿನ ಹಿಂದಿನ ಮನಸ್ಸುಗಳ ಸಂಕುಚಿತತೆ ಬದುಕನ್ನು ಅಸಹನೀಯಗೊಳಿಸುತ್ತಿದೆ. ಬುದ್ಧಿ, ಜ್ಞಾನ, ವಿವೇಕ, ತಿಳಿವು-ಮೊದಲಾದ ಅರಿವಿನ ಸಹಸಂಬಂಧಿ ನೆಲೆಗಳು ಅವುಗಳ ಮೂಲ ಸ್ವಭಾವದಿಂದ ದೂರಸರಿದು ವಿಕೃತ ನೆಲೆಗೆ ತೆರೆದುಕೊಳ್ಳುತ್ತಿವೆ.

೬.೨ 'ಅರಿವು'- 'ಇರವು' ತಾತ್ತ್ವಿಕ ವಿಶ್ಲೇಷಣೆ

"ಅರಿಯಲಾಗದುದನ್ನು ಅರಿಯಲು ಸಾಧ್ಯವಿದೆಯೆಂದು ಮನುಷ್ಯ ನಂಬಬೇಕು. ಅಲ್ಲವಾದರೆ ಅವನು ಅದನ್ನು ಕುರಿತು ಯೋಚನೆಯನ್ನೇ ಮಾಡಲಾರ" ಎಂಬ ಜೊಹಾನ್ ಮೊಲ್ಫ್‌ಗಾಂಗ್ ಫಾನ್ ಗಯಥೆ ಯ ವ್ಯಾಖ್ಯಾನವನ್ನು[4] ಇಟ್ಟುಕೊಂಡು 'ಅರಿವು' -'ಇರವು' ಇವುಗಳ ತಾತ್ತ್ವಿಕ ವಿಶ್ಲೇಷಣೆಗೆ ತೊಡಗಬಹುದು. ಅಸ್ತಿತ್ವದಲ್ಲಿರುವ ಯಾವುದೇ ಸಂಗತಿಯನ್ನು ಅರಿಯಲು ಸಾಧ್ಯವಿದೆ ಎಂಬ ಧನಾತ್ಮಕ ಚಿಂತನವೇ ಆ ದಿಸೆಯಲ್ಲಿ ಚಿಂತನೆ ನಡೆಸುವಂತೆ ಮೂಡುತ್ತದೆ. ಅರಿಯಲಾಗದ್ದು ಇದೆ ಎಂಬುದೇ ನಮ್ಮನ್ನು ಆ ದಿಸೆಯಲ್ಲಿ ಯೋಚಿಸುವಂತೆ ಪ್ರೇರೇಪಿಸುತ್ತದೆ. ಇರುವಿಕೆ ಎಂದರೆ ಅಸ್ತಿತ್ವದಲ್ಲಿರುವ ಮನುಷ್ಯ ಪ್ರಜ್ಞೆಯಿಂದ ಸ್ವತಂತ್ರವಾಗಿರುವ ಸಂಗತಿಗಳು 'ಇರುವಿಕೆ' ಯ ನೈಸರ್ಗಿಕ ರೂಪಗಳು ಪ್ರಕೃತಿ ವಿಜ್ಞಾನದಲ್ಲಿ ಕಾಣಿಸಿಕೊಂಡರೆ ಸಾಮಾಜಿಕ ಅಸ್ತಿತ್ವವು ಸಮಾಜಶಾಸ್ತ್ರ ಮೊದಲಾದವುಗಳಲ್ಲಿ ಇರುತ್ತದೆ. ಇರುವಿಕೆಯು ವಸ್ತುಜನ್ಯವಾಗಿರುವುದು. ಇದು ಭೌತಿಕವಾದದ ಸ್ವರೂಪ. 'ಇರುವಿಕೆಯು ಅರಿವನ್ನು ಹುಟ್ಟಿಸುತ್ತದೆ' ಎನ್ನುವುದು ಮಾರ್ಕ್ಸ್‌ವಾದಿ ಚಿಂತನೆಯ ಮುಖ್ಯ ಪ್ರಸ್ತಾಪ. ಅರಿವು ಅನುಭವಕ್ಕೆ ಬರುವುದೇ ವಸ್ತುಸಂಗತಿಗಳ ಇರುವಿಕೆಯಿಂದ. ಆದ್ದರಿಂದ 'ಅರಿವು' ಹುಟ್ಟಿ ಬೆಳೆಯುವುದೇ ಭೌತಿಕ ಪ್ರಪಂಚದ ಸಹಚರ್ಯದಿಂದ.

ಪ್ರಪಂಚದ ಅದ್ಭುತ ಸೃಷ್ಟಿಯಲ್ಲಿ ಯಾವುದೂ ಸ್ವತಂತ್ರವಲ್ಲ. ಒಂದು ಇನ್ನೊಂದು ಅವಲಂಭಿಸಿಯೇ ಅಸ್ತಿತ್ವ ಪಡೆದುಕೊಳ್ಳುವುದು. ಬೆಳಕಿನ ಅರಿವು ನಮಗೆ ಉಂಟಾಗಬೇಕಾದರೆ ಅಲ್ಲಿ ಕತ್ತಲಿನ ಇರವು ಅಗತ್ಯ. ಬರೀ ಬೆಳಕು ಮಾತ್ರ ಕತ್ತಲೆಯೆಂಬುದೇ ಇಲ್ಲವಾದರೆ ಬೆಳಕನ್ನು ಅರಿಯಲು ಸಾಧ್ಯವಿಲ್ಲ. ಆದ್ದರಿಂದ ವಾಸ್ತವಿಕತೆಯೆನ್ನುವುದು ಪರಸ್ಪರ ಸಂಬಂಧ ಹೊಂದಿರುತ್ತದೆ. ಅದು ಪ್ರಕೃತಿಯ

ಸ್ಥಿತಿ. ವಿಶ್ವದಲ್ಲಿ ಸಾರ್ವತ್ರಿಕವಾಗಿ ನಡೆಯುವ ಎಲ್ಲ ಕ್ರಿಯೆಗಳಿಗೂ ಪ್ರತಿಕ್ರಿಯೆ ಇರುತ್ತದೆ. ಪ್ರತಿಕ್ರಿಯೆ ಸಾಧ್ಯವಾಗುವುದೆ ಸಂಬಂಧವಿದ್ದಾಗ. ಒಂದು ವ್ಯವಸ್ಥೆಯಲ್ಲಿ ಒಂದು ಸಣ್ಣ ಪಲ್ಲಟ ನಡೆದರೂ ಇಡೀ ವ್ಯವಸ್ಥೆಯ ರಚನೆಯಲ್ಲಿ ಮೂಲಭೂತ ಬದಲಾವಣೆ ಕಾಣಿಸುತ್ತದೆ. ಉದಾ: ಯುರೋಪಿನ ರಾಷ್ಟ್ರಗಳನ್ನು ಬಹುವಾಗಿ ಕಾಡಿದ ಆರ್ಥಿಕ ಬಿಕ್ಕಟ್ಟು ಭಾರತದಂಥ ದೇಶದ ಒಬ್ಬ ಸಾಮಾನ್ಯ ವ್ಯಕ್ತಿಯ ಜೀವನ ಮಟ್ಟದಲ್ಲೂ ಸಣ್ಣ ಸ್ಥಿತ್ಯಂತರವನ್ನು ಉಂಟು ಮಾಡಿದೆ. ಮನುಷ್ಯ ಜೀವಿ ಪರಿಸ್ಥಿತಿಯ ಬದಲಾವಣೆಯೊಂದಿಗೆ ಗುಣಾತ್ಮಕವಾಗಿ ತನ್ನ ಅವಶ್ಯಕತೆಗಳನ್ನು ತೃಪ್ತಿಪಡಿಸಿಕೊಳ್ಳುತ್ತಾ ಸಂದರ್ಭಕ್ಕೆ ಹೊಂದಿಕೊಳ್ಳುತ್ತಾನೆ.

ಇರುವಿಕೆಯ ಅರಿವೇ ಪ್ರಜ್ಞೆ, ಎಂದರೆ ವಸ್ತುವೊಂದನ್ನು ಅದರ ಸೂಕ್ಷ್ಮವಾದ, ವಿಸ್ತಾರವಾದ ಸಂಬಂಧಗಳ ಹಾಗೂ ಕ್ರಮಬದ್ಧತೆಗಳ ಆಧಾರದಲ್ಲಿ ಪ್ರತಿಫಲನ ಮಾಡುವುದೇ ಅರಿವು ಅಥವಾ ಪ್ರಜ್ಞೆ ಎನಿಸಿಕೊಳ್ಳುತ್ತದೆ. ಮನುಷ್ಯನ ಪ್ರಜ್ಞೆಯ ಹೊರಗಡೆ ಸ್ವತಂತ್ರವಾಗಿ ಇರುವ ವಾಸ್ತವಿಕತೆಯೇ 'ಇರುವಿಕೆ' ಅಥವಾ 'ಅಸ್ತಿತ್ವ' ಎನಿಸಿಕೊಳ್ಳುತ್ತದೆ. ಅರಿವು ಎಂಬುದು ಒಂದು ಹೊಸ ಮಾನಸಿಕ ಪ್ರತಿಫಲನದ ಗುಣವಾಗಿದೆ. ಇದು ನಾವು ಮಾಡುವ ಕಾರ್ಯದಿಂದ ಹುಟ್ಟಿಕೊಂಡದ್ದು. ಪ್ರಾಚೀನ ಕಾಲದಿಂದ ಇಂದಿನವರೆಗೂ ಮನುಷ್ಯನ ಪ್ರಜ್ಞೆ ಅವನ ಸಂಸ್ಕೃತಿ, ಚಿಂತನೆ, ಬದುಕಿನ ಶೈಲಿ ಇವೆಲ್ಲದರ ಹಿಂದೆ ನಿಕಟ ಬಾಂಧವ್ಯವನ್ನು ಹೊಂದಿದೆ. ಆದ್ದರಿಂದಲೇ ನಾವು ಮಾಡುವ ಕಾರ್ಯ ಭೌತಿಕವಾಗಿ ವಸ್ತುನಿಷ್ಠ ನೆಲೆಯದ್ದು.

'ಇರುವಿಕೆಯ ಪ್ರಕೃತಿಯೊಳಗಿನ ಒಂದು ಯಥಾರ್ಥವಾಗಿ ಬೆಳವಣಿಗೆ ಹೊಂದಿತು. ಆ ಪ್ರಕ್ರಿಯೆಯಲ್ಲಿ ಅರಿವು ರೂಪ ತಳೆಯಿತು.' [5]. ಸಾಮಾಜಿಕ ಇರುವಿಕೆಯ ಮೂಲಕ ರೂಪುಗೊಂಡು ಬೆಳವಣಿಗೆ ಹೊಂದಿದ ಪ್ರಕ್ರಿಯೆಯಲ್ಲಿ ಅರಿವು ಪ್ರಧಾನ ಪಾತ್ರ ವಹಿಸಿತು. ಪ್ರಜ್ಞೆಯು ಪ್ರಕೃತಿಯ ಅಸ್ತಿತ್ವದಿಂದ ಉದ್ಭವಿಸುವುದಿಲ್ಲ. ಅದು ಸಾಮಾಜಿಕ ಅಸ್ತಿತ್ವದ ಪ್ರಕ್ರಿಯೆಯಲ್ಲಿ ಉಗಮವಾಗುತ್ತದೆ. ಹೀಗೆ ಮನುಷ್ಯನಲ್ಲಿ ಅಂತರ್ಗತವಾಗಿ ಪ್ರತಿಫಲನವಾಗುವ ರೂಪವೇ ಪ್ರಜ್ಞೆ, ಇದುವೇ ಸಮಾಜದಲ್ಲಿ ಮನುಷ್ಯನ ಅಸ್ತಿತ್ವಕ್ಕೆ ಕಾರಣವಾಗುತ್ತದೆ.

ತತ್ತ್ವಜ್ಞಾನದಲ್ಲಿ ಅಸ್ತಿತ್ವದೊಂದಿಗೆ ಪ್ರಜ್ಞೆಗಿರುವ ಸಂಬಂಧವೇ ಮುಖ್ಯ ಪ್ರಶ್ನೆಯಾಗಿದೆ. ಹಾಗೆಯೇ ವಿಶ್ವವನ್ನು ಅರಿಯಲು ಸಾಧ್ಯವೇ ಎನ್ನುವುದು ಕೂಡ ಪ್ರಧಾನವಾಗಿದೆ. ಪ್ರಜ್ಞೆಯ ಅಂತರ್ಗತ ವಿಚಾರ ಯಾವುದು? ಅದು ಅರಿವಿಗೆ ಗ್ರಾಹ್ಯವಾಗುವುದೇ ಎಂಬುದು ತತ್ವಜ್ಞಾನದ ಮೂಲಭೂತ ಚರ್ಚೆಯ ವಿಚಾರಗಳಾಗಿವೆ. ವಿಶ್ವವು ನಮ್ಮ ಅರಿವಿಗೆ ನಿಲುಕುವಂತಹುದು. ಆದ್ದರಿಂದ ಅರಿವು ಎನ್ನುವುದು ವಸ್ತುವಿನ ಪ್ರತಿಫಲನ. ಅರಿವಿನ ಕುರಿತ ಪ್ಲೇಟೋನ ವಿಚಾರಗಳನ್ನು ಈ ರೀತಿ ವಿವರಿಸಿಕೊಳ್ಳಬಹುದು. ವಿಶ್ವದ ನೈಜ ಸತ್ವವು ಭಾವನೆಗಳಲ್ಲಿ ಅಡಗಿರುತ್ತದೆ. ಭಾವನೆಗಳು ವಸ್ತುಗಳಲ್ಲಿ ನೆಲೆಸಿರುವುದಿಲ್ಲ. ಭಾವನೆಗಳನ್ನು ಅರಿಯುವ ಶಕ್ತಿಯು ಆತ್ಮಕ್ಕೆ ಮಾತ್ರ ಇದೆ. ಆತ್ಮವು ಭಾವನೆಗಳ ಲೋಕದಲ್ಲಿ ಇದ್ದುಕೊಂಡು ಆ ಲೋಕದ

ಜ್ಞಾನವನ್ನು ಹೀರಿ ಜೀವಿಯ ಶರೀರದಲ್ಲಿ ನೆಲೆಯಾಗುತ್ತದೆ. ಆದ್ದರಿಂದ ಆತ್ಮದ ಪ್ರಾಥಮಿಕ ಅಂಶ ಜ್ಞಾನ. ಹೀಗೆ ಪ್ಲೇಟೋನ ಪ್ರಕಾರ ಜ್ಞಾಪಿಸಿಕೊಳ್ಳುವ ಶಕ್ತಿಯೇ ಅರಿವು. ಅರಿವೆಂದರೆ ಜ್ಞಾಪಿಸಿಕೊಳ್ಳುವುದು, ನೆನಪಿಸಿಕೊಳ್ಳುವುದು.

ವಾಸ್ತವಿಕ ಜಗತ್ತಿನ ಅಸ್ತಿತ್ವವನ್ನು ಒಪ್ಪಿಕೊಳ್ಳುವುದರೊಂದಿಗೆ ಗ್ರಹಿಕೆ ಅಥವಾ ಅರಿಯುವಿಕೆ ಎಂದರೆ ವಾಸ್ತವಿಕ ಜಗತ್ತಿನ ಪ್ರತಿಫಲನ. ಅರಿವಿಕೆಯೆಂಬುದು ಪ್ರತಿಫಲನವನ್ನು ಒಪ್ಪಿಕೊಳ್ಳುವು ಅಥವಾ ನಿರಾಕರಿಸುವ ನೆಲೆಯೇ ಭೌತಿಕವಾದ ಮತ್ತು ಭಾವನಾವಾದದ ನಡುವಿನ ವೈರುಧ್ಯದ ಮೂಲ, ಎಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ಹೇಳುತ್ತಾರೆ. ಕ್ರಿಯೆಯೇ ಅರಿಯುವಿಕೆಯ ಗುರಿ. ಸಂಚಲನ ಶಕ್ತಿಯೂ ಕೂಡಾ ಆಗಿದೆ. ಈಗಾಗಲೇ ಹೊಂದಿರುವ ಅರಿವು ಸಾಮಾಜಿಕ ನಿರ್ವಹಣೆಯ ಹೊಸ ಅಗತ್ಯತೆಗೆ ನಡುವಿನ ವೈರುಧ್ಯವನ್ನು ಇಲ್ಲವಾಗಿಸುವ ಸಂದರ್ಭದಲ್ಲಿ ಅರಿವು ಬೆಳವಣಿಗೆ ಹೊಂದುತ್ತದೆ. ಹೊಸ ಕ್ರಿಯೆ, ಪ್ರಯೋಗ, ವೀಕ್ಷಣೆಗಳ ಮೂಲಕ ಮಾನವ ಪ್ರಜ್ಞೆಯ ದಿಗಂತವನ್ನು ವಿಸ್ತರಿಸಲು ಬಯಸುತ್ತದೆ.

ಕ್ರಿಯೆಯೇ ಅರಿವಿನ ಮೂಲ. ಅದೇ ಅರಿವಿನ ಸತ್ಯತೆಗೆ ಸಾಕ್ಷಿಯಾಗುತ್ತದೆ. ಕ್ರಿಯೆಯ ಸಫಲತೆಯೇ ಪ್ರಪಂಚದ ಆಗು ಹೋಗುಗಳಿಗೆ ಸಂಬಂಧಿಸಿರುತ್ತದೆ. ಆದ್ದರಿಂದ ಕಾರ್ಯದಲ್ಲಿ ನಿರೀಕ್ಷಿತ ಫಲವನ್ನು ಕೊಡುವುದೇ ಅರಿವೆಂದೆನಿಸುತ್ತದೆ. ಅಂದರೆ ಪರಿಪೂರ್ಣವಾಗಿಯೂ, ಅಪೂರ್ಣವಾಗಿಯೇ, ಭಾಗಶಃವಾಗಿಯೇ ಅರಿವು ಯಾವಾಗಲೂ ಇರುವಿಕೆಯನ್ನು ಪ್ರತಿನಿಧಿಸುತ್ತದೆ. ನಮ್ಮ ಚಿಂತನೆ ವಿಚಾರಗಳೆಲ್ಲವೂ ವಸ್ತುವಿನ ಜತೆಗೆ ಸಂಬಂಧ ಹೊಂದಿರುತ್ತದೆ. ಆದರೆ ಅದು ಪರಿಪೂರ್ಣ ಅರಿವನ್ನು ಹೊಂದಿರುವುದಿಲ್ಲ. ಏಕೆಂದರೆ ವಸ್ತುವೊಂದರ ಜೊತೆಗೆ ಅಲ್ಲಿ ಪ್ರಜ್ಞೆ ಮತ್ತು ಅರಿವು ವರ್ತಿಸುತ್ತಿರುತ್ತದೆ. ಅವೆರಡೂ ಕಾಣುವ ಸಂಗತಿಗಳಲ್ಲ. ಭಾವನಾತ್ಮಕ ವಿಚಾರಗಳು. ಇದು ವಸ್ತು ಸಂಗತಿಯೊಂದರ ಕುರಿತು ಮನಸ್ಸಿನಲ್ಲಿ ಮೂಡುವ ಪ್ರತಿರೂಪ.

ಅರಿವಿನ ಒಳಹೂರಣವು ಸತ್ಯತೆಗೆ ಸರಿಹೊಂದಿದರೆ ಅದು ವಾಸ್ತವ ಸತ್ಯವಾಗುತ್ತದೆ. ಅಲ್ಲಿ ನಮ್ಮ ಅರಿವಿನ ಜ್ಞಾನ ಪರಿಪೂರ್ಣತೆಯನ್ನು ಹೊಂದಿರುವುದಿಲ್ಲ. ಏಕೆಂದರೆ ಅದು ಕ್ರಿಯೆಯ ನೆಲೆಯಲ್ಲಿ ರೂಪಿತವಾದ ಸಾಪೇಕ್ಷ ಸತ್ಯವಾಗಿರುತ್ತದೆ. ಅದು ವಸ್ತುನಿಷ್ಠವಾಗಿದ್ದಷ್ಟು ಸತ್ಯದ ಪರಿಪೂರ್ಣತೆಗೆ ಸಮೀಪವಾಗಿರುತ್ತದೆ. ಅರಿವಿನ ಅನಂತರದ ಹಂತದಲ್ಲಿ ಒಂದು ಪರಿಪೂರ್ಣದ ಒಂದು ಅಂಶವಾದರೂ ಅದರಲ್ಲಿ ಸೇರಿರುತ್ತದೆ. ಹೀಗೆ 'ಅರಿವಿ'ನ ಪ್ರಕ್ರಿಯೆಯಲ್ಲಿ ಸಾಪೇಕ್ಷ ಸತ್ಯತೆಗಳು ಪರಿಪೂರ್ಣ ಸತ್ಯತೆಯತ್ತ ಸಾಗುತ್ತಿರುತ್ತದೆ. ಅರಿವೇ ಭೌತಿಕ ವಸ್ತುವಾಗಿದ್ದರೆ ಅದು ತನ್ನಿಂದ ತಾನಾಗಿಯೇ ಜಗತ್ತನ್ನು, ವಸ್ತುಸ್ಥಿತಿಯನ್ನು ಬದಲಾಯಿಸಬಹುದಿತ್ತು. ಆದರೆ ವಾಸ್ತವ ಸ್ಥಿತಿ ಅದಲ್ಲ. ಇರುವಿಕೆಯ ಸತ್ಯದ ಆಧಾರದ ಮೇಲೆ ಅರಿವಿನ ಪ್ರಜ್ಞೆಯ ನೆಲೆ ರೂಪುಗೊಳ್ಳುವುದು. ಆದ್ದರಿಂದ ಅರಿಯುವಿಕೆ ಜಗತ್ತಿನ ಇರುವಿಕೆಯನ್ನು

ಗುರುತಿಸುವಷ್ಟಕ್ಕೆ ನಿಂತುಬಿಡುವುದಿಲ್ಲ. ಅರಿಯುವಿಕೆಯ ಮಾರ್ಗದಲ್ಲಿ ಪ್ರತಿಹಂತದಲ್ಲೂ ಕ್ರಿಯೆಯನ್ನು ಒಳಗೊಳ್ಳುತ್ತದೆ. ವಸ್ತುನಿಷ್ಠೆಯನ್ನು ಮನನ ಮಾಡುವ ಮೂಲಕ ಅಮೂರ್ತದೆಡೆಗೆ ಸಾಗುತ್ತದೆ.

'ಅರಿವು-ಇರವಿ'ನ ತಾತ್ವಿಕತೆಯಲ್ಲಿ ಸಾಮಾಜಿಕತೆಯ ಆಯಾಮ ಸೇರಿಕೊಂಡಿರುತ್ತದೆ. ಪ್ರಜ್ಞೆಯೊಂದು ಉಗಮಗೊಂಡು ಅರಿವಿನತ್ತ ನಡೆವಾಗ ಅದರ ಪ್ರವರ್ತನೆ ಸಾಮಾಜಿಕ ಸ್ವರೂಪದ್ದೇ ಆಗಿರುತ್ತದೆ. ಒಬ್ಬ ವ್ಯಕ್ತಿಯ ಅರಿವು ಅಥವಾ ಪ್ರಜ್ಞೆ ಇನ್ನೊಬ್ಬನಿಗಿಂತ ಭಿನ್ನವಾಗಿರುತ್ತದೆ. ಸ್ವಂತದ ವಿಚಾರ, ತಿಳುವಳಿಕೆ, ಬುದ್ಧಿಮತ್ತೆಯ ಹಿನ್ನೆಲೆಯಲ್ಲಿ, ವಿಭಿನ್ನ ದೃಷ್ಟಿಕೋನಗಳಲ್ಲಿ ಅಡಗಿರುತ್ತದೆ. ಆದ್ದರಿಂದಲೇ ವರ್ಗ, ಸಮಾಜ, ರಾಷ್ಟ್ರದ ಪರಿಕಲ್ಪನೆಗಳಲ್ಲಿ ಪ್ರಜ್ಞೆಯೊಂದು ರೂಪುಗೊಂಡ ಹಿನ್ನೆಲೆಯಲ್ಲಿಯೇ ಭಿನ್ನ ಅರಿವಿನ ನೆಲೆಗಳು ಕಂಡುಬರುತ್ತವೆ. ಜನರ ಪ್ರಜ್ಞೆಯು ಸಾಮಾಜಿಕ ಅಸ್ತಿತ್ವವನ್ನು ಪ್ರತಿಬಿಂಬಿಸುವುದರ ಜತೆಗೆ ಪ್ರಕೃತಿಯನ್ನು ಒಳಗೊಂಡಂತೆ ತನ್ನನ್ನು ತಾನು ತೆರೆದುಕೊಳ್ಳುತ್ತದೆ. ಆದ್ದರಿಂದಲೇ ಇರವು-ಅರಿವಿನ ವಿಶ್ಲೇಷಣೆಯ ಸಂದರ್ಭದಲ್ಲಿ ಪ್ರಜ್ಞೆ ಪ್ರಧಾನವಾಗುತ್ತದೆ. ವ್ಯಕ್ತಿಯೊಬ್ಬ ಎಲ್ಲಿ ಇದ್ದಾನೆ, ಹೇಗೆ ಇದ್ದಾನೆ ಅನ್ನುವುದರ ಹಿನ್ನೆಲೆಯಲ್ಲಿ ಆತನ ಅರಿವಿನ ಪ್ರಜ್ಞೆ ರೂಪುಗೊಳ್ಳುತ್ತದೆ. ಆದ್ದರಿಂದ ಅರಿವು –ಇರವು ಎಂಬ ತಾತ್ವಿಕ ವಿಚಾರಗಳು ಒಂದರೊಳಗೊಂದು ಅವಿನಾಭಾವ ಸಂಬಂಧದ ಹಿನ್ನೆಲೆಯಲ್ಲಿ ಅಸ್ತಿತ್ವ ಪಡೆದುಕೊಳ್ಳುತ್ತದೆ.

ಕೊನೆ ಟಿಪ್ಪಣಿ

1. ಉದ್ಧೃತ : ಡಾ। ರುಕ್ಮಿಣಿ ಪರ್ವತಿ – ಅಂಬಿಕಾತನಯದತ್ತರ ಭಾವಗೀತೆಗಳು, ಉಷಾ ಸಾಹಿತ್ಯ ಮಾಲೆ ಮೈಸೂರು. ೧೯೮೨
2. ದ.ರಾ. ಬೇಂದ್ರೆ – ಉಯ್ಯಾಲೆ (ಸಂ) ಇರವು –ಅರಿವು. ಪು. ಸಂ. ೫೨
3. ಓ. ಎಲ್. ನಾಗಭೂಷಣ ಸ್ವಾಮಿ : ಇಂದಿನ ಹೆಜ್ಜೆ, ಅಕ್ಷರ ಪ್ರಕಾಶನ ಹೆಗ್ಗೋಡು ೧೯೯೭ ಪು. ಸಂ. ೪೮
4. ಬಿ. ವಿ. ಕಕ್ಕಿಲ್ಲಾಯ (ಅನು) ಇರವು ಮತ್ತು ಅರಿವು – ನವಕರ್ನಾಟಕ ಪ್ರಕಾಶನ ೧೯೪೮ ಪು. ಸಂ. ೧೦
5. ಬಿ. ವಿ. ಕಕ್ಕಿಲ್ಲಾಯ (ಅನು) ಇರವು ಮತ್ತು ಅರಿವು – ನವಕರ್ನಾಟಕ ಪ್ರಕಾಶನ ೧೯೪೮ ಪು. ಸಂ. ೨೬

ಅಧ್ಯಾಯ : ೭

ಅಧ್ಯಯನದ ಫಲಿತಗಳು

೭. ಅಧ್ಯಯನದ ಫಲಿತಗಳು

ಮಧ್ಯಕಾಲೀನ ಸಾಮಾಜಿಕ, ಸಾಂಸ್ಕೃತಿಕ ಆಗುಹೋಗುಗಳ, ಯುಗ ಪ್ರವರ್ತನೆಯ ಸಂದರ್ಭದಲ್ಲಿ ರೂಪುಗೊಂಡ ವಿಶಿಷ್ಟ ಅಭಿವ್ಯಕ್ತಿಯೇ ವಚನ ಸಾಹಿತ್ಯ. ಪರಂಪರೆಯ ಎಲ್ಲ ಧೋರಣೆಗಳನ್ನು ಅವುಗಳ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ಬದಲಾಯಿಸುತ್ತಾ ಹೊಸ ಕ್ರಾಂತಿಕಾರಕ ಮನೋಧರ್ಮವನ್ನು ಹುಟ್ಟುಹಾಕಿದ ವಚನಸಾಹಿತ್ಯ ತನ್ನ ಅಭಿವ್ಯಕ್ತಿ ಕ್ರಮದಲ್ಲೂ ದೇಸಿ ಚಿಂತನಧಾರೆಗಳನ್ನು ಹರಿಯಿಸಿ ಬದುಕಿನ ಎಲ್ಲಾ ವಲಯಗಳಲ್ಲೂ ಭಿನ್ನ ಚಿಂತನೆ, ದರ್ಶನಗಳನ್ನು ಮೂಡಿಸಿದ್ದಾರೆ. ಇದರಲ್ಲಿ ವಚನ ಸಾಹಿತ್ಯ- ವಚನಕಾರರ ಪಾತ್ರ ಮುಖ್ಯವಾದುದು. ತನ್ನ ವಿಚಾರ, ದರ್ಶನಗಳಿಗೆ ಪೂರಕವಾಗಿ ಭಾವ-ಭಾಷೆ, ಅರ್ಥವಂತಿಕೆಯ ಅನನ್ಯತೆಯ ನೆಲೆಗಳನ್ನು ವಿಶಿಷ್ಟ ಪರಿಭಾಷೆಗಳಾಗಿ ರೂಪಿಸಿದ್ದಾರೆ. ವೀರಶೈವ ಧರ್ಮದ ಪಾರಿಭಾಷಿಕ ಪದಗಳು ಹಾಗೆಯೇ ಈಗಾಗಲೇ ಬಳಕೆಯಾದ ಭಿನ್ನ ಪರಿಭಾಷೆಗಳನ್ನು ಮುರಿದು ಕಟ್ಟುವ ಕಾರ್ಯವನ್ನು ಮಾಡಿದ್ದಾರೆ. ಈ ವಿಶಿಷ್ಟ ಸನ್ನಿವೇಶದಲ್ಲಿ ಕಾಣಿಸಿಕೊಳ್ಳುವ 'ಅರಿವಿ'ನ ಕುರಿತ ಜಿಜ್ಞಾಸೆ ಮುಖ್ಯವಾಗಿದ್ದು, ಅಲ್ಲಮನ ವಚನಗಳಲ್ಲಿ ಅದು ಮೇಲಿಂದ ಮೇಲೆ ಪುನರಾವರ್ತನೆಯಾಗುತ್ತದೆ. ಆತ ಅದನ್ನು ಸಾಮಾನ್ಯರ್ಥದಲ್ಲಿ ಹಾಗೆಯೇ ಬೆಡಗಿನ ವಚನಗಳಿಗೆ, ಅನುಭಾವ-ಅರಿವಿನ ನೆಲೆಗಳು ಬಂದಾಗ ವಿಶಿಷ್ಟಾರ್ಥದಲ್ಲಿ ಬಳಸಿರುವುದು ಕಂಡುಬರುತ್ತದೆ. ಇಂತಹ 'ಅರಿವಿ'ನ ಪರಿಕಲ್ಪನೆಯನ್ನು ಅಧ್ಯಯನದಲ್ಲಿ ಉದ್ದೇಶವಾಗಿಟ್ಟುಕೊಂಡು, ಅರಿವಿನ ಕುರಿತಾದ ಅಲ್ಲಮನ ಚಿಂತನೆಗಳನ್ನು ಕೇಂದ್ರವಾಗಿಟ್ಟು ಅಧ್ಯಯನ ನಡೆಸಲಾಗಿದೆ. ಪೂರಕರವಾಗಿ 'ಅರಿವಿ'ನ ಕುರಿತ ಪರಂಪರೆಯ ಚಿಂತನೆಗಳನ್ನು ಸಮಕಾಲೀನ ವಚನಕಾರರ ದೃಷ್ಟಿಕೋನಗಳನ್ನು ವಿಶ್ಲೇಷಿಸಲಾಗಿದೆ. ಆ ಮೂಲಕ 'ಅರಿವಿ'ನ ಪರಿಕಲ್ಪನೆಯನ್ನು ಅದರ ಹಲವು ಆಯಾಮಗಳೊಂದಿಗೆ ಅಧ್ಯಯನ ಮಾಡಲಾಗಿದೆ.

ಸುಮಾರು 7 ಅಧ್ಯಾಯಗಳಲ್ಲಿ ನಡೆಸಲಾಗಿರುವ ಅಧ್ಯಯನ ಮತ್ತು ಅಲ್ಲಿ ಕಂಡುಕೊಂಡ ಫಲಿತಗಳನ್ನು ಸಂಗ್ರಹರೂಪವಾಗಿ ಇಲ್ಲಿ ನೀಡಲಾಗುತ್ತಿದೆ. ಮೊದಲ ಅಧ್ಯಯದಲ್ಲಿ ಪ್ರಸ್ತಾವನೆಯೊಂದಿಗೆ ಅಧ್ಯಯನದ ವಿಷಯ, ಅಧ್ಯಯನ ನಡೆಸುವ ಉದ್ದೇಶ ಮತ್ತು ಸ್ವರೂಪ, ಅಧ್ಯಯನದ ಕ್ಷೇತ್ರದ ವ್ಯಾಪ್ತಿ-ವಿಸ್ತಾರ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ನಂತರ ಅಲ್ಲಮನ ವಚನಗಳು ಕುರಿತು, ಆತ ಬಳಸುವ ಪರಿಭಾಷೆಗಳ ಕುರಿತು ಬಂದಿರುವ ಇದುವರೆಗೆ ನಡೆದಿರುವ ಅಧ್ಯಯನಗಳು, ಅವುಗಳ ಸ್ವರೂಪವನ್ನು ಸ್ಥೂಲವಾಗಿ ಚರ್ಚಿಸಲಾಗಿದೆ. ಮುಖ್ಯ ಅಧ್ಯಯನಕಾರರನ್ನು ಅವರ ಅಧ್ಯಯನ ವಿಷಯ ವ್ಯಾಪ್ತಿ ಹಾಗೂ ಕಂಡುಕೊಂಡ ವಿವರಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ. ಅರಿವು ಪರಿಕಲ್ಪನೆಯ ಭಿನ್ನ ಅರ್ಥದ ನೆಲೆಗಳನ್ನು ಶೋಧಿಸಿ ಅವುಗಳ ಕುರಿತು ಬಂದಿರುವ ಭಿನ್ನ ವ್ಯಾಖ್ಯಾನಗಳನ್ನು ವಿಶ್ಲೇಷಿಸಲಾಗಿದೆ. ಅರಿವು

ಎಂಬ ಪದ ನಿಘಂಟುಕೋಶಗಳಲ್ಲಿ ತತ್ತ್ವಶಾಸ್ತ್ರದ ನೆಲೆಯಲ್ಲಿ ವ್ಯಾಖ್ಯಾನಗೊಂಡ ಅರ್ಥದ ಭಿನ್ನ ಸಾಧ್ಯತೆಗಳನ್ನು ವಿವರಿಸಿಕೊಳ್ಳಲಾಗಿದೆ. ನಂತರ ನಿಘಂಟುವಿನಲ್ಲಿ ಮಾತ್ರವಲ್ಲದೆ ಇತರ ಬರಹಗಳಲ್ಲಿ ಕಾಣಿಸಿಕೊಂಡ ಅರಿವು ಯಾವ ಬಗೆಯದ್ದು ಎಂಬುದನ್ನು ಗಮನಿಸಲಾಗಿದೆ. ಅಲ್ಲಿ ಕಂಡುಕೊಂಡ ವಿಚಾರಗಳೆಂದರೆ ಅರಿವು ಜ್ಞಾನ, ತಿಳುವಳಿಕೆ, ಅನುಭವ, ಇತ್ಯಾದಿ ಸಾರೂಪ್ಯ ಮಾದರಿಯ ಅರ್ಥಗಳನ್ನು ಹೊಂದಿದ್ದರೂ ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ಅರ್ಥ ಪರಂಪರೆಯನ್ನು ವಿಸ್ತರಿಸಿರಿರುವುದನ್ನು ಕಂಡುಕೊಳ್ಳಲಾಗಿದೆ.

ಅರಿವು–ಜ್ಞಾನ ಚಿಂತನೆಯ ನೆಲೆಯನ್ನು ವಿಶ್ಲೇಷಿಸುತ್ತಾ ಅವುಗಳ ಸಾದೃಶ್ಯ–ವೈದೃಶ್ಯದ ನೆಲೆಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ. ಪ್ರಾಚೀನ ಜ್ಞಾನ ಪರಂಪರೆಯಲ್ಲಿ ಜ್ಞಾನದ ನೆಲೆಗಳನ್ನು ಕಂಡುಕೊಂಡ ಬಗೆ ಜ್ಞಾನ ಮಾರ್ಗ, ಅದರ ಉದ್ದೇಶ, ಇತ್ಯಾದಿಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ನಡೆದಿದೆ. ಮೇಲ್ನೋಟಕ್ಕೆ ಜ್ಞಾನ–ಅರಿವು ಪದಗಳು ಒಂದೇ ರೀತಿಯಾಗಿ ಬಳಕೆಯಾದರೂ ಅದರ ಆಂತರ್ಯದಲ್ಲಿ ಹಾಗೂ ಸನ್ನಿವೇಶದ ಹಿನ್ನೆಲೆಯಲ್ಲಿ ಹೊಂದಿರುವ ವ್ಯತ್ಯಾಸವನ್ನು ಅದರ ಸೂಕ್ಷ್ಮ ಎಳೆಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಇಲ್ಲಿನ ಪ್ರಕಾರ ಜ್ಞಾನ ಎಂಬುದು ತರ್ಕದ, ಬೌದ್ಧಿಕತೆಯ ದೃಷ್ಟಿಯಿಂದ ಕಂಡು ಬಾಹ್ಯ ವಸ್ತು ಸಂಗತಿಗಳ ತಿಳುವಳಿಕೆಯಾಗಿದೆ. ಇದು ಸಂಪೂರ್ಣ ಸತ್ಯವಲ್ಲ. ಏಕೆಂದರೆ ಇದು ನಾವು ಕಂಡು ಅರ್ಥೈಸಿಕೊಂಡ ತಿಳುವಳಿಕೆಯಾಗಿದ್ದುದರಿಂದ ಸತ್ಯದ ಒಂದು ಭಾಗ ಮಾತ್ರ, ಇದು ಎಲ್ಲರಲ್ಲಿಯೂ ಒಂದೇ ಆಗಿ ಇರಬೇಕಾಗಿಲ್ಲ. ಆದರೆ ಅರಿವೆಂಬುದು ಬಾಹ್ಯಸಂಗತಿಳ ನೆಲೆಯಲ್ಲಿಯೂ ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದಲ್ಲಿ ಮೂಡಿದ ಸ್ಪಂದನ. ಈ ಅರಿವು ಬಹುತೇಕ ಪೂರ್ಣ ಮಾದರಿಯಾದ್ದು. ಜ್ಞಾನಕ್ಕೆ ಹೊರಗಿನ ಒತ್ತಡ, ಮಿತಿಗಳು ಇದ್ದರೆ, ಅರಿವಿಗೆ ಇದರ ಹಂಗಿಲ್ಲ. ಇದು ಆತ್ಮಜ್ಞಾದ ನೆಲೆ, ಜ್ಞಾನ ಅರಿವಿಗೆ ಪೂರಕ. ಜ್ಞಾನಕ್ಕೆ ಅರಿವು ಬೇಕಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ವಚನಕಾರರು 'ಅರಿವ'ನ್ನು ಬಳಸಿಕೊಂಡ ಬಗೆಯನ್ನು ಅವರ ವಚನಗಳ ವ್ಯಾಖ್ಯಾನಗಳೊಂದಿಗೆ ವಿವರಿಸಿಕೊಳ್ಳಲಾಗಿದೆ. ಇತರ ವಚನಕಾರರು 'ಅರಿವಿ'ನ ಕುರಿತು ಅಲ್ಲಮನಷ್ಟು ಚಿಂತನೆ ನಡೆಸಿಲ್ಲ ಎಂಬುದು ವಿದಿತವಾಗುತ್ತದೆ. ಆದರೂ 'ಅರಿವಿ' ನ ಬಳಕೆ ಜ್ಞಾನದ ಹುಡುಕಾಟದ ಅಂಗವಾಗಿಯೇ ಬಂದಿದೆ. 'ಅರಿವಿ'ನ ವ್ಯಾಖ್ಯಾನ ಜ್ಞಾನದ ನೆಲೆಯಿಂದ ಮುಂದೆ ಸಾಗಿದಂತೆ ಕಂಡರೂ ಅಲ್ಲಮನಲ್ಲಿ ಅರಿವು ಬಳಕೆಯಾದ ಬಗೆಯಷ್ಟೇ ನಿರ್ಧಾರಿತತೆ ನಿಖರತೆ ಅಲ್ಲಿ ಕಾಣಿಸುವುದಿಲ್ಲ. ಆದರೂ ವಚನಗಳ ಅಧ್ಯಯನದ ಮೂಲಕ ಅರಿವು ಜ್ಞಾನದ ಭಿನ್ನತೆಯನ್ನು ತೋರ್ಪಡಿಸುವ ಪ್ರಯತ್ನಗಳು ಪ್ರಜ್ಞಾಪೂರ್ವಕವಾಗಿಯೇ ಅಪ್ರಜ್ಞಾಪೂರ್ವಕವಾಗಿಯೇ ಕಾಣಿಸಿಕೊಂಡಿದೆ.

ಅಲ್ಲಮನ ಅರಿವಿನ ಚಿಂತನೆಗೆ ಪೂರಕವಾಗಿ ಅವನ ವ್ಯಕ್ತಿತ್ವ ಬದುಕು, ಸಾಧನೆಗಳನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗಿದ್ದು, ಅವನ ಚಿಂತನೆಗೆ ಪೂರಕ ಮಾಹಿತಿಗಳನ್ನು

ಕಂಡುಕೊಳ್ಳಲಾಗಿದೆ. ಯಾಕೆಂದರೆ ಯಾವುದೇ ಒಬ್ಬ ಚಿಂತಕನ ವಿಚಾರಧಾರೆಗಳನ್ನು ತಿಳಿಯಲು ಆತನ ವೈಯುಕ್ತಿಕ ಬದುಕು ಸಾಧನೆಯ ಹಂತಗಳ ತಿಳಿವು ಅನಿವಾರ್ಯ. ಇದುವೇ ಆತನ ವಿಚಾರಧಾರೆಗಳನ್ನು ರೂಪಿಸಲು ಕಾರಣವಾಗುತ್ತದೆ. ಆದ್ದರಿಂದ ಅಲ್ಲಮನ ಜೀವನ ವಿವರವನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದ್ದು ಆತನ ಆಧ್ಯಾತ್ಮಿಕ, ಆನುಭಾವಿಕ ಸಾಧನೆಯ ನೆಲೆಗಳು ಬದುಕಿನಲ್ಲಿಯೇ ಬೆಳೆದುಬಂದಿರುವುದು ತಿಳಿದುಬರುತ್ತದೆ.

ಅಲ್ಲಮನ ವಚನ, ಚಿಂತನೆಗಳಲ್ಲಿ ಅರಿವಿನ ಶೋಧ ನಡೆಸುತ್ತಾ ಜ್ಞಾನ ಹಾಗೂ ಅನುಭಾವದ ನೆಲೆಯವರಿಗೆ ಅದನ್ನು ವಿಸ್ತರಿಸಿಕೊಳ್ಳಲಾಗಿದೆ. ಅಲ್ಲಮನ ವಚನಗಳನು ವಿಶ್ಲೇಷಿಸುತ್ತಾ ಅರಿವಿನ ಬಗ್ಗೆ ಕಂಡುಕೊಂಡ ವಿವರಗಳೆಂದರೆ ಬಾಹ್ಯದ ವಸ್ತುಸಂಗತಿಗಳಲ್ಲ. ವ್ಯಕ್ತಿಯೊಬ್ಬ ಬಾಹ್ಯ ಸಂಗತಿಗಳ ಮೂಲಕ ತನ್ನನ್ನು ತಾನು ಅರಿಯದ, ತಿಳಿಯುವ ಕ್ರಮ. ಅದು ಬಹುತೇಕ ಅವ್ಯಕ್ತ. ಯಾವ ಪ್ರಮಾಣ ಸಾಕ್ಷಿಗಳ ನೆರವಿಲ್ಲದೆಯೂ ಅನುಭವಕ್ಕೆ ಬರುವಂಥದ್ದು, ಜ್ಞಾನವನ್ನು ಇನ್ನೊಬ್ಬರಿಗೆ ಹಂಚಲು ಸಾಧ್ಯವಾದರೆ, ಅರಿವು ಪರಿಶ್ರಮದಿಂದ ಬಾಹ್ಯಜಗತ್ತಿನ ಹಂಗನ್ನು ಕಳೆದುಕೊಳ್ಳುವ ಸ್ಥಿತಿ ಕುರುಹು, ಮರಹುಗಳಿದ ಮುಕ್ತವಾಗುವ ಹಂತ. ಇದು ಸಾಮಾನ್ಯ ಜ್ಞಾನವಲ್ಲ, ಅತೀತ ಜ್ಞಾನ. ಜಗತ್ತು ಬದಲಾದಂತೆ ಜ್ಞಾನದ ವ್ಯಾಪ್ತಿವಿಸ್ತಾರ, ಅರ್ಥಗಳು ಬದಲಾಗಬಹುದು. ಆದರೆ ಅರಿವಿಗೆ ಬದಲಾವಣೆಯಿಲ್ಲ. ಅರಿವು ಮೂಡಿದ ಬದಲಾವಣೆ ಕಾಣುವುದು ತಾನೇ ಆಗುವ ಬಗೆಯಲ್ಲಿ. ದ್ವಂದ್ವ ಸತ್ಯಗಳನ್ನು ಮೀರಿ ತಾನು ತಾನೇ ಆಗುವ ಬಗೆಯೇ ಅರಿವು. ಅರಿವು ಮಾತು, ವಿವರಣೆ, ಭಾಷೆಯಲ್ಲಿ ಹೇಳಲಾಗದ ಅಭಿವ್ಯಕ್ತಿಸಲಾಗದ ಅಮೂರ್ತ ನೆಲೆ, ಅನುಭವ ಮಾತ್ರದಿಂದ ಸಾಧ್ಯವಾಗುವಂಥದ್ದು. ಅಲ್ಲಮ ಅರಿವಿನ ನೆಲೆಯನ್ನು ಅನುಭಾವದೆಡೆಗೂ ವಿಸ್ತರಿಸಿ ಅರಿವೆಂದರೆ ಆತ್ಮಜ್ಞಾನ. ಅದರ ಮೂಲಕ ಅನುಭಾವ ಸಿದ್ಧಿಸುತ್ತದೆ ಎಂದಿರುವುದು ಕಂಡುಬಂದಿದೆ. ಹೀಗೆ ಜ್ಞಾನದ ಪರ್ಯಾಯವೆಂಬಂತಿರುವ ಅರಿವಿನ ಸೂಕ್ಷ್ಮ ಭಿನ್ನತೆಯ ಎಳೆಯನ್ನು ಅಲ್ಲಮನ ವಿಚಾರಗಳ ಹಿನ್ನೆಲೆಯಲ್ಲಿ ಶೋಧಿಸುವ ಪ್ರಯತ್ನ ಇಲ್ಲಿ ನಡೆದಿದೆ.

ಅಲ್ಲಮನ ಅರಿವಿನ ವಿವೇಚನೆಯ ಮುಂದುವರಿದ ನೆಲೆಯಲ್ಲಿ ಆಧುನಿಕ ಚಿಂತನೆಗಳು ಬೆಳದುಬಂದ ಬಗೆಯನ್ನು ವಿಶ್ಲೇಷಿಸಿದ್ದು. ಆಧುನಿಕ ಸಂಸ್ಕೃತಿ ಚಿಂತಕರಲ್ಲಿ ಅರಿವಿನ ಕುರಿತಾದ ಜಿಜ್ಞಾಸೆ ತಾತ್ವಿಕ ನೆಲೆಯಲ್ಲಿ ಬೆಳೆದು ಬಂದಿರುವುದು ಕಂಡುಬರುತ್ತದೆ. ಬೇಂದ್ರೆಯವರ ವಿಚಾರಗಳು ಅಲ್ಲಮನ ಅರಿವಿನ ದೃಷ್ಟಿಕೋನವನ್ನೇ ಮುಂದಿಡುವುದನ್ನು ಗಮನಿಸಬಹುದು. ಅರಿವಿ ದೃಷ್ಟಿಯ ಮೂಲಕ ಅಗೋಚರವಾಗುದುದರಲ್ಲಿಯೂ ಇರುವ ಅದ್ಭುತಗಳನ್ನು ಅನುಭವಕ್ಕೆ, ತಂದುಕೊಳ್ಳಲು ಸಾಧ್ಯವಿದೆ ಎಂಬುದು ಸ್ಪಷ್ಟವಾಗುತ್ತದೆ. ಶರಣರ ವಚನಗಳನ್ನು ಓದಿಕೊಳ್ಳುವ ಸಂದರ್ಭ, ಕಾಣಿಸಿಕೊಳ್ಳುವ ಅರಿವು ಓದುಗರ ಅರಿವೇ ಆಗಿ ಬಿಡುತ್ತದೆ. ಅರಿವೆಂಬುದು ನಮ್ಮೊಳಗೇ ನಾವು ಮಾಡಿಕೊಳ್ಳುವ ಅನುಸಂಧಾನ. ಆಧುನಿಕ ಪ್ರಜ್ಞೆಯ ಸುಳಿಗೆ ಸಿಲುಕಿ ಸಂಸ್ಕೃತಿಯ ಗತಿಶೀಲತೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ

ಅರಿವಿನ ಸಂವರ್ಧನೆ ಅನಿವಾರ್ಯವಾಗಿರುವುದನ್ನು ಕಾಣಬಹುದು. ಅನುಭಾವಗಿಂತ ಐಡಿಯಾಲಜೀಗಳಿಗೆ ಇಂದಿನ ಅನಿವಾರ್ಯತೆಗಳಾದರೂ, ಸಮಾಜದಲ್ಲಿ ಅಸಹನೀಯವಾಗಿ ಉಂಟಾಗುತ್ತಿರುವ ಬಿರುಕುಗಳನ್ನು ತಡೆದು ನಮ್ಮ ನಮ್ಮ ನೆಲೆಗಳನ್ನು ಅರಿಯಬೇಕಾದ ಅಗತ್ಯತೆ ಕಂಡುಬರುತತದೆ. ಅರಿವಿನ ಮೂಲಕ ರೂಪುಗೊಳ್ಳುತ್ತಿರುವ ಇರವಿನ ಪ್ರಜ್ಞೆಯು ಸಾರ್ವಕಾಲಿಕವಾದುದು. ವ್ಯಕ್ತಿ, ಸಮಾಜ, ರಾಷ್ಟ್ರ ಹೀಗೆ ಪ್ರತಿಯೊಂದು ತನ್ನ ವಿಶಿಷ್ಟತೆಯನ್ನು ಅರ್ಥೈಸಿಕೊಳ್ಳುವಲ್ಲಿ ಅರಿವಿನ ಪ್ರಜ್ಞೆ ಅಗತ್ಯವಾಗುತ್ತದೆ.

ಹೀಗೆ ಅಲ್ಲಮನ ವಚನಗಳಲ್ಲಿ ಅರಿವಿನ ಚಿಂತನೆ ಬೆಳೆದು ಬಂದ ಬಗೆಯನ್ನು ಅದರ ಸ್ವರೂಪ ವಿನ್ಯಾಸದಲ್ಲೇ ಅಧ್ಯಯನ ಮಾಡಲಾಗಿದೆ. ಆದರೂ ಅರಿವಿನ ಕುರಿತ ಸಮಗ್ರ ಅಧ್ಯಯನವಲ್ಲ. ಮಹಾಪ್ರಬಂಧವೊಂದರ ಸಂಶೋಧನೆಗೆ ವಿಷಯವಾಗಬಲ್ಲ ಅಲ್ಲಮನ ಅರಿವಿನ ಚಿಂತನೆ ಇನ್ನೂ ಹೆಚ್ಚಿನ ಆಳವಾದ, ಸೂಕ್ಷ್ಮವಾದ ಅಧ್ಯಯನವನ್ನು ಬೇಡುತ್ತದೆ. ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ, ಅಲ್ಲಮನ ಅರಿವು, ಅನುಭಾವದ ಚಿಂತನೆಗಳ ಬಗ್ಗೆ ಇನ್ನೂ ವಿಫುಲ ಅಧ್ಯಯನಕ್ಕೆ ಅವಕಾಶಗಳಿವೆ.

ಪರಾಮರ್ಶನ ಗ್ರಂಥಗಳು

೧. ಬವಸರಾಜು ಎಲ್. (ಸಂ) –ಅಲ್ಲಮನ ವಚನ ಚಂದ್ರಿಕೆ ನಳಿನೀ ಶಂಕರ ಪ್ರಕಾಶನಮೈಸೂರು ; ೧೯೬೦

೨. ಬಸವರಾಜು ಕಲ್ಗುಡಿ –'ಅನುಭಾವ': ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ೧೯೮೮

೩. ನಾಗರಾಜ್ ಡಿ. ಆರ್. –'ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ' ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ ೧೯೯೯

೪. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ –'ಅರಿವಿನ ಕಥನ' ಸಿವಿಜಿ ಪಬ್ಲಿಕೇಶನ್ಸ್ ಬೆಂಗಳೂರು ೨೦೦೪

೫. ಎಸ್. ಕೆ . ಕೊಪ್ಪಾ (ಸಂ) –'ಅಲ್ಲಮ ಪ್ರಭು –ಚಿಂತನ' ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೨೦೦೬.

೬. ನಾಗಭೂಷಣ ಸ್ವಾಮಿ ಓ. ಎಲ್. –'ಇಂದಿನ ಹೆಜ್ಜೆ' ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ ೧೯೯೭

೭. ಡಾ.ಎಂ. ಪ್ರಭಾಕರ ಜೋಷಿ ಪ್ರೊ. ಎಂ. ಎ. ಹೆಗಡೆ –'ಭಾರತೀಯ ತತ್ತ್ವಶಾಸ್ತ್ರ ಪ್ರವೇಶ' ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ ೨೦೦೮

೮. ಎಂ. ಹಿರಿಯಣ್ಣ –ಭಾರತೀಯ ತತ್ತ್ವಶಾಸ್ತ್ರದ ರೂಪುರೇಖೆಗಳು ಅಭಿನವ ಪ್ರಕಾಶನ ಬೆಂಗಳೂರು ೨೦೦೮

೯. ಡಾ. ಬಸವರಾಜು ಎಲ್. (ಸಂ) –'ಅಲ್ಲಮನ ವಚನಗಳು' ಗೀತಾಬುಕ್ ಹೌಸ್ ಮೈಸೂರು ೧೯೬೯

೧೦. ಶ್ರೀ. ಈ. ವ್ಹಿ. ಶಾಸ್ತ್ರಿ (ಲೇ) –'ಅಲ್ಲಮ ಪ್ರಭು' ಪಾರು ಪ್ರಕಾಶ ಗದಗ ೨೦೦೨

೧೧. ಡಾಟಿ.ಜಿ. ಸಿದ್ದಪ್ಪಾರಾಧ್ಯ – 'ಅಲ್ಲಮ ಪ್ರಭು' ಪ್ರ. ಮೈಸೂರು ವಿ.ವಿ. ೧೨. ೧೯೬೨

೧೨. ರಹಮತ್ ತರೀಕೆರೆ –'ಅಕ್ಕಮಹಾದೇವಿ ವಚನಗಳು' ಪ್ರ. ಕನ್ನಡ ವಿಶ್ವ ವಿದ್ಯಾಲಯ ಹಂಪಿ ೨೦೦೫

೧೩. ಮಲ್ಲೇಪುರಂ ಜಿ. ವೆಂಕಟೇಶ – 'ತಿಳಿದ ತೇಜದ ಮುಂದೆ' ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ ೧೯೯೬

೧೪. ಬಿ.ವಿ. ಕಕ್ಕಿಲ್ಲಾಯ (ಅನು) –'ಇರವು ಮತ್ತು ಅರಿವು' ನವಕರ್ನಾಟಕ ಪ್ರಕಾಶನ ೧೯೮೮

೧೫. ಡಾ. ಬಿ. ವಿ. ವಸಂತಕುಮಾರ್ –'ದೇವರ ದಾಸಿಮಯ್ಯ ಮತ್ತು ಅನಂತತೆ' ನೇಕಾರ ಪ್ರಕಾಶನ ಸೊರಬ ೨೦೦೫

೧೬. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕೋಶ–ಸಂಪುಟ ೧,೨ ೧೯೭೦

೧೭. ಮಹಾದೇವಪ್ಪ ಬಿ (ಲೇ) –'ಅರಿವು –ಆಚಾರ'

೧೮. ಶ್ರೀ ಸಿದ್ದೇಶ್ವರ ಸ್ವಾಮಿಗಳು –'ಅಲ್ಲಮ ಪ್ರಭುದೇವರ ವಚನ' ನಿರ್ವಚನ ಸಂಪುಟ ೧

೧೯. ಪ್ರೊ. ಎಲ್. ಎಸ್. ಶೇಷಗೀರಿರಾವ್ – ಸುಭಾಷ್ ನಿಘಂಟು

೨೦. ಕನ್ನಡ ಸಾಹಿತ್ಯ ಪರಿಷತ್ತು –ಕನ್ನಡ ರತ್ನಕೋಶ ೧೯೭೭

೨೧. A.S. Hornby -Oxford Advanced learners Dictionary of current English 1988

೨೨. Kittle - Kannada, English Dictionary value -1 1968

೨೩. ಡಾ. ರುಕ್ಮಿಣಿ ಪರ್ವತಿ –'ಅಂಬಿಕಾತನಯದತ್ತರ ಭಾವಗೀತೆಗಳು' ಉಷಾ ಸಾಹಿತ್ಯ ಮಾಲೆ ಮೈಸೂರು ೧೯೮೨